
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

26 ನವೆಂಬರ್ 2014 ರೂ. 15/-



ಸಂದರ್ಶನ
ದಸಂಸ ನಾಯಕ
ಎನ್.ವೆಂಕಟೇಶ್



ಕಾಕತ್ಕರ್ ಹುಚ್ಚು ಮನಸ್ಸಿನ ವ್ಯಥೆಗಳು

ಹಾಲಕ್ಕಿ ಕುಣಬಿಗಳಿಗೆ ಮೀಸಲಾತಿ ಮೋಸ

ಕಿಮ್ಮನೆ ಆಣೆ–ಪ್ರಮಾಣ ಕಾನೂನಿನ ಆಳ್ವಿಕೆ


'ಕಿಸ್ ಆಫ್ ಲವ್' ಮತ್ತು ರಾಜಕೀಯ



ಮತ್ತೆ ಬೀಸಲಿದೆ 'ಗರಂ ಹವಾ'



'ಕಸ್ತೂರಿನಿವಾಸ' ಬರೀ ಸಿನಿಮಾ ಅಲ್ಲ



ಸಮಾನ ಶಿಕ್ಷಣ ಮಾಲಿಕೆ - 4

ಶಿಕ್ಷಣದ ವ್ಯಾಪಾರೀಕರಣ ಪ್ರವಾಹಕ್ಕೆದುರು ಈಜಲು ಸಾಧ್ಯ


ಸೆಂಟ್ ಸದಸ್ಯರು, ಶಾಸಕರು, ಪಾಲಿಕೆ-ನಗರಸಭೆಗಳ ಸದಸ್ಯರುಗಳು ಹಲವಾರು ಖಾಸಗಿ ಶಿಕ್ಷಣ ಸಂಸ್ಥೆಗಳ ಮಾಲೀಕರಾಗಿದ್ದಾರೆ. ಅದು ಬಿಲಿಯನ್ ಡಾಲರ್ ಉದ್ದಿಮೆಯಾಗಿ ಬೆಳೆಯುತ್ತಿದೆ. ಹೀಗಾಗಿ ಅದನ್ನು ತಡೆಯುವುದಾಗಲೀ, ಶಿಕ್ಷಣದ ರಾಷ್ಟ್ರೀಕರಣವನ್ನು ಮಾಡುವುದಾಗಲೀ ಅಥವಾ ಸಮಾನ ಶಾಲೆಯನ್ನು ತರುವುದಾಗಲೀ ಸಾಧ್ಯವಿಲ್ಲ. ಅವೆಲ್ಲಕ್ಕಿಂತ ಹೆಚ್ಚಾಗಿ 'ಆದರ್ಶ' ಏನೇ ಇದ್ದರೂ, ಮಕ್ಕಳ ಪೋಷಕರು ಖಾಸಗಿ ಶಾಲೆಗಳಿಗಲ್ಲದೇ ಸರ್ಕಾರೀ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸಲು ಸಾಧ್ಯವೇ? 'ಅಂತಹದೊಂದು ಆದರ್ಶಯುತವಾದ ಸರ್ಕಾರೀ ಶಾಲೆ ಬಂದಾಗ, ನಾವೂ ನಮ್ಮ ಮಕ್ಕಳನ್ನು ಅಲ್ಲಿಗೇ ಕಳಿಸುತ್ತೇವೆ. ಅಲ್ಲಿಯವರೆಗೆ ಖಾಸಗಿ ಶಾಲೆಗಳಿಗೇ ಸೇರಿಸುತ್ತೇವೆ' ಎನ್ನುವವರು ಇಂದು ಭಾರೀ ಬಹುಸಂಖ್ಯಾತರು. ಖಾಸಗಿ ಶಾಲೆಯಲ್ಲಿ ನಡೆಯುವುದು ಕಲಿಕೆಯಾ? ಆದರಿಂದ ರಾಷ್ಟ್ರ ನಿರ್ಮಾಣ ಆಗುವುದು ಹೋಗಲಿ, ನಮ್ಮ ಮಗುವಿನ ವ್ಯಕ್ತಿತ್ವ ವಿಕಸನವಾದರೂ ಆಗುತ್ತದಾ? ಎಂಬ ಪ್ರಶ್ನೆಯನ್ನು ಅವರ್‍ಯಾರೂ ಹಾಕಿಕೊಳ್ಳುವುದಿಲ್ಲ.

ಅದೇನೇ ಹೇಳಬಹುದಾದರೂ, ಪ್ರವಾಹ ಆ ದಿಕ್ಕಿನೆಡೆಗೇ ಇದೆ. ಈ ಪ್ರವಾಹದ ವಿರುದ್ಧ ಈಜಲು ಸಾಧ್ಯವಿಲ್ಲವೆನ್ನುವುದು ಇಂದು ಸಾಮಾನ್ಯ ಜ್ಞಾನವಾಗಿ (common sense)ಬಿಟ್ಟಿದೆ. ಅದು ವಾಸ್ತವವೇ? ಅದು ವಾಸ್ತವವಲ್ಲ, ಪ್ರವಾಹದ ವಿರುದ್ಧ ಈಜುವುದು ಸಾಧ್ಯ. ಆ ಈಜೂ ಸಹ ಮತ್ತೊಂದು ಪ್ರವಾಹವಾದಾಗ ಮಾತ್ರ ಸಾಧ್ಯ. ಅಂತಹದೊಂದು ಪ್ರವಾಹ ಈಗಾಗಲೇ ಉದ್ಭವವಾಗಿಲ್ಲ. ಆದರೆ ಪ್ರವಾಹವನ್ನು ಉಂಟುಮಾಡಲು ಸಾಧ್ಯವಿರುವ ಅಲೆಯೊಂದು ಎದ್ದಿದೆ. ಅದು 'ಅಖಿಲ ಭಾರತ ಸಮಾನ ಶಿಕ್ಷಣ ಜಾಥಾ'ದ ರೂಪದಲ್ಲಿ ನವೆಂಬರ್ 2ರಂದು ದೇಶದ ಐದು ಭಾಗಗಳಲ್ಲಿ (ಈಶಾನ್ಯ ಭಾರತ, ಜಮ್ಮು, ನಳಂದ, ನಾಗಪುರ ಮತ್ತು ಕನ್ಯಾಕುಮಾರಿಗಳಿಂದ) ಆರಂಭಗೊಂಡಿದೆ. ಇದೇ ನವೆಂಬರ್ 11ರಂದು ಕರ್ನಾಟಕವನ್ನೂ ಪ್ರವೇಶಿಸಿದೆ. ಕರ್ನಾಟಕದ 15 ಜಿಲ್ಲೆಗಳೂ ಒಳಗೊಂಡಂತೆ, ದೇಶದ 330ಕ್ಕೂ ಹೆಚ್ಚು ಜಿಲ್ಲೆಗಳ ಸುಮಾರು 1000 ನಗರ/ಪಟ್ಟಣ/ಹಳ್ಳಿಗಳಲ್ಲಿ ವಿಚಾರ ಸಂಕಿರಣ/ ಜಾಥಾ/ಬಹಿರಂಗ ಸಭೆ/ಪ್ರತಿಭಟನೆ/ಗುಂಪು ಚರ್ಚೆಗಳ ರೂಪದಲ್ಲಿ ಜಾಗೃತಿ ಉಂಟುಮಾಡಲಿದೆ.

ಬಹುಶಃ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಶಿಕ್ಷಣದ ಕುರಿತಾದ ಅತ್ಯಂತ ದೊಡ್ಡ ಕಾರ್ಯಕ್ರಮ ಇದಾಗಿದೆ ಹಾಗೂ ಈಗಾಗಲೇ ದೇಶಾದ್ಯಂತ ಇದಕ್ಕೆ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಇದರಿಂದ ಸ್ವಲ್ಪ ದೂರ ಉಳಿದಿದ್ದ ಎಡಪಕ್ಷಗಳೂ ಸೇರಿ ಹಲವರು ಸಹಭಾಗಿಗಳಾಗುತ್ತಿದ್ದಾರೆ. ಹತ್ತಿರ ಬಂದ ಎಲ್ಲರನ್ನೂ ಈ ಚಳವಳಿಯು ಸಮಗ್ರ ಚಿಂತನೆ, ವಾಸ್ತವವಾದೀ ಕಾರ್ಯಕ್ರಮಗಳು, ಸ್ಪಷ್ಟ ಮುನ್ನೋಟದ ಕಾರಣದಿಂದಾಗಿ ಸೆಳೆದುಕೊಳ್ಳುತ್ತಿದೆ. ಕರ್ನಾಟಕದಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ 75 ಜನ ಪಾಲ್ಗೊಂಡಿದ್ದರೆ, ಕೆ.ಆರ್.ಪೇಟೆ ತಾಲೂಕಿನಲ್ಲಿ ಒಟ್ಟು 3-4 ಸಾವಿರ ಜನರು ಪಾಲ್ಗೊಂಡಿದ್ದಾರೆ. ತೆಲಂಗಾಣದಲ್ಲಿ ಶುರುವಾದ ಪ್ರತ್ಯೇಕ ಜಾಥಾದ ಉದ್ಘಾಟನಾ ಕಾರ್ಯಕ್ರಮಕ್ಕೇ ಹತ್ತಾರು ಸಾವಿರ ಜನ ಸೇರಿದ್ದಾರೆ. ಅಂತಿಮವಾಗಿ ಡಿಸೆಂಬರ್ 3 ಮತ್ತು 4ರಂದು ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಸಮಾವೇಶಗೊಳ್ಳುವ ದೇಶದ ಎಲ್ಲಾ ರಾಜ್ಯಗಳ ಪ್ರತಿನಿಧಿಗಳು ಮುಂದಿನ ಹೋರಾಟದ ಸಂಕಲ್ಪವನ್ನು ಅಲ್ಲಿ ಪುನರ್‌ಬತ್ತಿರಿಸಲಿದ್ದಾರೆ. ಅಲ್ಲಿಂದ ಅಲೆಯ ಇನ್ನೊಂದು ಮಜಲು ಆರಂಭಗೊಳ್ಳಲಿದೆ. (ಈ ಕುರಿತ ರಾಜ್ಯದ ಕಾರ್ಯಕ್ರಮಗಳು ಬಾಕ್ಸ್‌ನಲ್ಲಿವೆ)

ತಾಲೂಕಿನಲ್ಲಿ ಸರ್ಕಾರೀ ಪದವಿ ಪೂರ್ವ ಕಾಲೇಜಿನಲ್ಲಿ ಕಾಯಂ ಇಂಗ್ಲಿಷ್ ಉಪನ್ಯಾಸಕರಾಗಿರುವ ಕೆ.ಎಂ.ವಾಸು ಅವರು ಮುಂದಿನ ವರ್ಷ ಒಂದು ಪ್ರಮುಖ ತೀರ್ಮಾನವನ್ನು ಜಾರಿ ಮಾಡಲಿದ್ದಾರೆ. ಅವರ ಮಗ ಬುದ್ಧನನ್ನು ಸರ್ಕಾರೀ ಕನ್ನಡ ಮಾಧ್ಯಮ ಶಾಲೆಗೆ ಸೇರಿಸುವ ತೀರ್ಮಾನವನ್ನು ಅವರ ಹೆಂಡತಿ ನವ್ಯಕುಮಾರಿಯವರೊಂದಿಗೆ ಈಗಾಗಲೇ ಕೈಗೊಂಡಿದ್ದಾರೆ. ಸಾಧ್ಯವಾದರೆ ತಮ್ಮಂತಹ ಇನ್ನೂ ಕನಿಷ್ಠ 10 ಜನ ಸರ್ಕಾರೀ ನೌಕರರು ಅದೇ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಬೇಕೆಂಬ ಅವರ ಪ್ರಯತ್ನ ಒಂದು ವೇಳೆ ಕೈಗೂಡದೇ ಹೋಗಬಹುದು. ಆದರೆ ಈ ದಂಪತಿ ಅದರ ಬಗ್ಗೆ ಖಚಿತ ಅಭಿಪ್ರಾಯ ಹೊಂದಿದ್ದಾರೆ.


ಇವರಿಬ್ಬರೂ ತಮ್ಮ ಮಕ್ಕಳನ್ನು ಸರ್ಕಾರೀ ಕನ್ನಡ ಮಾಧ್ಯಮ ಶಾಲೆಗೆ ಸೇರಿಸುವುದರ ಹಿಂದೆ ಒಂದು ತಿಳಿವಳಿಕೆಯನ್ನೂ ಹೊಂದಿದ್ದಾರೆ. ಅದು ತಾವು ಮಾಡುತ್ತಿರುವುದು ತ್ಯಾಗವಲ್ಲ; ನಮ್ಮ ಮಗ/ಮಗಳಿಗೆ ಅನ್ಯಾಯವೂ ಆಗುವುದಿಲ್ಲ, ಬದಲಿಗೆ ಇದು ಮಾತ್ರವೇ ವೈಜ್ಞಾನಿಕವಾದದ್ದು, ಅವರ ವ್ಯಕ್ತಿತ್ವವನ್ನು ಅರಳಿಸಲು ಸಾಧ್ಯವಾಗುವಂತಹದ್ದು ಎಂಬ ಬಲವಾದ ತಿಳಿವಳಿಕೆ ಅದು.



ಇಂತಹವರು ಇನ್ನೂ ಸಾಕಷ್ಟು ಜನರಿದ್ದಾರೆ. ... ಇವರು ಬಹುಸಂಖ್ಯಾತರೇ? ಇಲ್ಲ, ಈ ರಿ... ಮಕ್ಕಳು ಸರ್ಕಾರೀ ಶಾಲೆಯಲ್ಲಿ ಮಾತೃಭಾಷಾ ಮಾ... ಕಲಿಯಬೇಕೆಂದು ಬಯಸುತ್ತಿರುವವರು ಬಹುಸಂ... ತಮ್ಮ ಮಕ್ಕಳು ಖಾಸಗಿ ಶಾಲೆಯಲ್ಲೇ ಓದ... ಬಯಸುತ್ತಿರುವವರು ಬಹುಸಂಖ್ಯಾತರೇ? ಇಲ್ಲ... ಅಲ್ಪಸಂಖ್ಯಾತರು. ಆದರೆ ಸರ್ಕಾರೀ ಶಾಲಾ ವ್ಯವಸ್ಥೆ... ಎಂಬುದು ಅವರ ಅನಿಸಿಕೆಯಾಗಿರುವುದರಿಂ... ಅದು ನಿಜವೂ ಆಗಿರುವುದರಿಂದ, ಅಂತಹ ಪ... ಖಾಸಗಿ ಶಾಲೆಗಳತ್ತ ಸಾಗುತ್ತಿದ್ದಾರೆ. ಇಂತಹ ಪ... ಅರ್ಧದಷ್ಟು ಜನರಿಗಾದರೂ ಗೊತ್ತಿಲ್ಲದ ಸಂಗತಿ... ಈ ಖಾಸಗಿ ಶಾಲೆಗಳೂ ಒಳ್ಳೆಯ ಶಿಕ್ಷಣವನ್ನು ... ಅದರಲ್ಲೂ, ಶೇ.70ರಷ್ಟು ಇಂಗ್ಲಿಷ್ ಕಾನ್ವೆಂಟ್‌ಗಳು (ಅಂದರೆ ಮಧ್ಯಮವರ್ಗ ▶▶



ಅಖಿಲ ಭಾರತ ಸಮಾನ ಶಿಕ್ಷಣ ಜಾಥಾ



ಇದು ಚಾತುರ್ವರ್ಣದ ಜಾಗದಲ್ಲಿ ಬಹುವರ್ಣ ವ್ಯವಸ್ಥೆಯನ್ನು ಮತ್ತು ಗುಲಾಮಗಿರಿಯನ್ನು ಸ್ಥಾಪನೆ ಮಾಡುತ್ತಿರುವ ಶಿಕ್ಷಣ ವ್ಯವಸ್ಥೆ

-ದೇವನೂರು ಮಹಾದೇವ

ಪಾಂಡವರೂ, ಏಕಲವ್ಯರೂ ಒಂದೇ ಶಾಲೆಗೆ ಹೋಗಲಾಗದ ವ್ಯವಸ್ಥೆಯು ಚಾತುರ್ವರ್ಣ ವ್ಯವಸ್ಥೆಯನ್ನು ಸೃಷ್ಟಿಸಿತು ಮತ್ತು ಕಾಪಾಡಿಕೊಂಡು ಬಂದಿತು. ಮನು ಅದನ್ನು ಸೂತ್ರರೂಪದಲ್ಲಿ ಹೇರಲು ವ್ಯವಸ್ಥೆ ಮಾಡಿದ. ಇಂದು ಚಾತುರ್ವರ್ಣದ ಜಾಗದಲ್ಲಿ ಜಾತಿ ವ್ಯವಸ್ಥೆ ಇದೆ. ಅದು ಕಾಲಾನುಕ್ರಮದಲ್ಲಿ ಸಡಿಲವಾಗುತ್ತಲೂ ಬಂದಿದೆ. ಆದರೆ ಇಂದು ಜಾತಿ ವ್ಯವಸ್ಥೆಯು ಇನ್ನೊಂದು ರೂಪದಲ್ಲಿ ಭದ್ರವಾಗುತ್ತಲೂ ಇದೆ. ಅದು ಬೇರೆ ಸ್ವರೂಪವನ್ನು ಪಡೆದುಕೊಳ್ಳುತ್ತಲೂ ಇದೆ. ದಮನಿತ ಜಾತಿಗಳಲ್ಲಿ ಒಂದು ಅತೀ ಸಣ್ಣ ವಿಭಾಗಕ್ಕೆ ಮೇಲ್ಚಲನೆ ಪಡೆದುಕೊಳ್ಳಲು ಅವಕಾಶ ಮಾಡಿಕೊಟ್ಟು, ಉಳಿದವರನ್ನು ಅದೇ ಸ್ಥಿತಿಯಲ್ಲಿಡಲು ಶಿಕ್ಷಣ ವ್ಯವಸ್ಥೆಯು ಸಾಕಷ್ಟು ಕೆಲಸ ಮಾಡುತ್ತಿದೆ. ಇಂದು ಶಿಕ್ಷಣವನ್ನು ಕೊಡುವುದಿಲ್ಲ ಎಂದು ಹೇಳಲಾಗುವುದಿಲ್ಲ; ಬದಲಿಗೆ ಕೊಟ್ಟಂತೆ ಮಾಡಿ ಕಿತ್ತುಕೊಳ್ಳಲಾಗುತ್ತಿದೆ.

ಶಿಕ್ಷಣ ಮತ್ತು ಭಾಷೆಯ ವಿಚಾರದಲ್ಲಿ ನಡೆಯುತ್ತಿರುವ ರಾಜಕಾರಣವನ್ನೂ ಇದೇ ರೀತಿಯಲ್ಲಿ ನೋಡಬೇಕು. ನಮ್ಮೆಲ್ಲಾ ಆಳುವ ಜನರು ಕಾರ್ಪೋರೇಟ್ ವ್ಯವಸ್ಥೆಯ ಗುಲಾಮಗಿರಿ ಮಾಡುತ್ತಿದ್ದಾರೆ. ಲಕ್ಷಾಂತರ ಜನರ ತ್ಯಾಗ ಬಲಿದಾನಗಳಿಂದ ಬ್ರಿಟಿಷರನ್ನು ಇಲ್ಲಿಂದ ತೊಲಗಿಸಲಾಯಿತು. ಆದರೆ ಮಾನಸಿಕ ಗುಲಾಮಗಿರಿ ಹೋಗಿಲ್ಲ. ಹಾಗಾಗಿಯೇ ನಮ್ಮ ದೇಶೀ ಭಾಷೆಗಳಲ್ಲಿ ಬದುಕನ್ನು ಕಟ್ಟಿಕೊಡಲಾಗದೇ ಸೋಲುತ್ತಿವೆ. ಕರ್ನಾಟಕಕ್ಕಿಂತ ಕಡಿಮೆ ಜನಸಂಖ್ಯೆ ಇರುವ ದೇಶಗಳು ಜಗತ್ತಿನ ಬಲಾಢ್ಯ ದೇಶಗಳಾಗಿ ಎದ್ದು ನಿಂತಿವೆ ಮತ್ತು ತಮ್ಮದೇ ಭಾಷೆಗಳಲ್ಲಿ ಅವು ಚಿಂತನೆಯನ್ನು ನಡೆಸುತ್ತಿವೆ. ಆದರೆ ಇಂದು ಇಂಗ್ಲಿಷಿಲ್ಲದೇ ಈ ದೇಶದಲ್ಲಿ ಬದುಕಿಲ್ಲವಾಗಿದೆ ಮತ್ತು ಆ ಇಂಗ್ಲಿಷ್ ಕೆಲವರಿಗೆ ಮಾತ್ರ ಸಿಗುವ ಸರಕಾಗಿದೆ.

ಈ ವ್ಯವಸ್ಥೆಯನ್ನು ದೊಡ್ಡ ಜನಾಂದೋಲನದಿಂದ ಬದಲಾಯಿಸದಿದ್ದರೆ, ಇದು ಒಂದು ಬಹುವರ್ಣ ವ್ಯವಸ್ಥೆಗೆ ಮತ್ತು ಗುಲಾಮಗಿರಿ ಮನಸ್ಥಿತಿಯ ಮುಂದುವರಿಕೆಗೆ ದಾರಿ ಮಾಡಿಕೊಡುತ್ತದೆ.

ಕೇವಲ ಇಂತಹದೊಂದು ಜಾಥಾದ ಕಾರಣದಿಂದಾಗಿ ನಾವು ಪ್ರವಾಹದ ವಿರುದ್ಧ ಈಜು ಸಾಧ್ಯ ಎಂದು ನಂಬಬಹುದೇ? ಇಲ್ಲ, ಎಷ್ಟೇ ಅತ್ಯುತ್ತಮ ಮುನ್ನೋಟವಾಗಿದ್ದರೂ ಅದು ವಾಸ್ತವದಲ್ಲಿ ಜನರು ಆಚರಣೆಗಿಳಿಸದೇ ಸಾಧ್ಯವಾಗದು. ಇದೇ 'ಪತ್ರಿಕೆ'ಯ ವರದಿಗಾರ ದೊಡ್ಡಿಪಾಳ್ಯ ನರಸಿಂಹಮೂರ್ತಿಯವರು ತಮ್ಮ ಇಬ್ಬರು ಮಕ್ಕಳನ್ನೂ ಸರ್ಕಾರೀ ಅಥವಾ ಅನುದಾನಿತ ಶಾಲೆ ಮತ್ತು ಕಾಲೇಜುಗಳಲ್ಲೇ ಓದಿಸಿದ್ದಾರೆ, ಓದಿಸುತ್ತಿದ್ದಾರೆ. ಕೆ.ಆರ್.ಪೇಟೆ

ಸಮಾನ ಶಿಕ್ಷಣಕ್ಕೆ ಆಗ್ರಹಿಸಿ ಸಭೆಗಳು

- ನವೆಂಬರ್ 11ರಂದು 10.30ಕ್ಕೆ ಮೈಸೂರಿನ ಎನ್‌ಟಿಎಂಎಸ್ ಶಾಲೆ ಮುಂದೆ ಉದ್ಘಾಟನೆ
- 11.30ಕ್ಕೆ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಅಧ್ಯಯನ ಸಂಸ್ಥೆಯಲ್ಲಿ ವಿಚಾರಸಂಕಿರಣ
- ನವೆಂಬರ್ 12ರಂದು 9 ಗಂಟೆಗೆ ಕೆ.ಆರ್.ಪೇಟೆಯ ಪದವಿಪೂರ್ವ ಕಾಲೇಜು, 11 ಗಂಟೆಗೆ ಕಿಕ್ಕೇರಿಯ ಪದವಿಪೂರ್ವ ಕಾಲೇಜು, 12.30ಕ್ಕೆ ಬಿಇಓ ಕಚೇರಿಯ ಮುಂದೆ ಬಹಿರಂಗ ಸಭೆ
- ಸಂಜೆ 4ಕ್ಕೆ ಪಾಂಡವಪುರದಲ್ಲಿ ಬಹಿರಂಗ ಪ್ರಚಾರ ಸಭೆ
- ನವೆಂಬರ್ 13: ಬೆಳಗ್ಗೆ 9ಕ್ಕೆ ಬೈಕ್ ಜಾಥಾ
- 11ಕ್ಕೆ ಗಾಂಧಿಭವನದಲ್ಲಿ ವಿಚಾರ ಸಂಕಿರಣ
- ಮಧ್ಯಾಹ್ನ 2ಕ್ಕೆ ಚನ್ನಪಟ್ಟಣದ ಗಾಂಧಿಭವನದಲ್ಲಿ ಸಂವಾದ
- ಸಂಜೆ 4ಕ್ಕೆ ಜಾನಪದ ಲೋಕದಿಂದ ರಾಮನಗರ ಜಿಲ್ಲಾಧಿಕಾರಿ ಕಚೇರಿಯವರೆಗೆ ಜಾಥಾ ಮತ್ತು ಬಹಿರಂಗ ಸಭೆ
- ನವೆಂಬರ್ 14: ಬೆಂಗಳೂರಿನಲ್ಲಿ ಜಾಥಾ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜ ಪರಿಷನ್ಮಂದಿರದಲ್ಲಿ ವಿಚಾರಗೋಷ್ಠಿ
- ಮಕ್ಕಳ ಆಯೋಗ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಮಾನವ ಹಕ್ಕು ಆಯೋಗಕ್ಕೆ ಮನವಿ ಸಲ್ಲಿಕೆ
- ನವೆಂಬರ್ 15: ಬೆಳಗ್ಗೆ 9ಕ್ಕೆ ಕೆ.ಜಿ.ಎಫ್‌ನ ಬಿ.ಜಿ.ಎಂ.ಎಲ್ ಶಾಲೆ ಉಳಿಸಿ ಹೋರಾಟ ಸಮಿತಿಯಿಂದ ಮೆರವಣಿಗೆ ಹಾಗೂ ಬಹಿರಂಗ ಕಾರ್ಯಕ್ರಮ
- ಮಧ್ಯಾಹ್ನ 12ಕ್ಕೆ ಬಂಗಾರಪೇಟೆ ಬಸ್ ನಿಲ್ದಾಣದಲ್ಲಿ ಬಹಿರಂಗ ಪ್ರಚಾರ ಸಭೆ
- ಸಂಜೆ 4ಕ್ಕೆ ಅಂತರಗಂಗೆ ರಸ್ತೆಯ ಪತ್ರಕರ್ತರ ... ವಿಚಾರಗೋಷ್ಠಿ
- ನವೆಂಬರ್ 16: ಬೆಳಗ್ಗೆ 10ಕ್ಕೆ ಚಿಂತಾಮಣಿ ... ಜಾಥಾ ಮತ್ತು ನಗರಸಭೆ ಸಭಾಂಗಣದಲ್ಲಿ ಕ...
- ಮಧ್ಯಾಹ್ನ 1ಕ್ಕೆ ಚಿಕ್ಕಬಳ್ಳಾಪುರದ ಶಿಡ್ಲಘಟ್ಟ ... ಬಹಿರಂಗ ಪ್ರಚಾರ ಸಭೆ
- ಸಂಜೆ 4ಕ್ಕೆ ಗೌರಿಬಿದನೂರಿನ ಎಇಎಸ್ ... ಕಾಲೇಜಿನಲ್ಲಿ ವಿಚಾರ ಗೋಷ್ಠಿ
- ನವೆಂಬರ್ 17ಕ್ಕೆ: ಆಂಧ್ರ ಪ್ರದೇಶದ ಅ... ಜಿಲ್ಲೆಯ ಹಿಂದೂಪುರಕ್ಕೆ ಜಾ... ಬೀಳ್ಕೊಡುವುದು.
- ನವೆಂಬರ್ 20ಕ್ಕೆ: ದಾವಣಗೆರೆ
- ನವೆಂಬರ್ 21ಕ್ಕೆ: ಹಾವೇರಿ
- ನವೆಂಬರ್ 27ಕ್ಕೆ: ಧಾರವಾಡ
- ನವೆಂಬರ್ 24ಕ್ಕೆ: ರಾಯಚೂರು ಮತ್ತು ...
- ನವೆಂಬರ್ 25ಕ್ಕೆ: ಮಾನ್ವಿ ಮತ್ತು ಸಿಂಧ...
- ನವೆಂಬರ್ 26ಕ್ಕೆ: ಕಾರಟಗಿ ಮತ್ತು ಗಂ...
- ನವೆಂಬರ್ 27ಕ್ಕೆ: ಹೊಸಪೇಟೆ ಮತ್ತು ಕ...

ಇದಲ್ಲದೇ ಉಡುಪಿ, ಮಂಗಳೂರು ಹಾಗ... ಕನ್ನಡ ಜಿಲ್ಲೆಗಳಲ್ಲೂ ಕಾರ್ಯಕ್ರಮಗಳು ನಡೆ...

ಡಿಸೆಂಬರ್ 3 ಮತ್ತು 4ರಂದು ಭೋ... ಅಖಿಲ ಭಾರತ ಸಮಾನ ಶಿಕ್ಷಣ ಸಮಾವೇಶ...

ಆಸಕ್ತರು ಸಂಪರ್ಕಿಸಿ:

ಮುತ್ತುರಾಜು - 735377...

ಅರುಣ್ ಅವರ ಜೈಲು ಡೈರಿ ಮತ್ತು ಪ್ರಭುತ್ವ



• ಗೌರಿ ಲಂಕೇಶ್
editorlankesh@gmail.com

ಭಾರತ ಪ್ರಜಾಪ್ರಭುತ್ವ ದೇಶವಾಗಿ ಆರು ದಶಕಗಳು ...ವೆ. ಆದರೆ ವರ್ಷಗಳು ಉರುಳಿದಂತೆ ಇಲ್ಲಿ ...ಜಾಹಕ್ಕುಗಳು ಕ್ಷೀಣಿಸುತ್ತಾ ಪ್ರಭುತ್ವ ಮಾತ್ರ ...ಶಾಲಿಯಾಗುತ್ತಲೇ ಸಾಗಿದೆ. ಪರಿಣಾಮವಾಗಿ ಇಲ್ಲಿ ...ಕ ಕಾರಣಕ್ಕಾದರೂ, ಯಾರನ್ನಾದರೂ ಪ್ರಭುತ್ವ ...ಧಿಸಬಹುದು, ಅವರಿಗೆ ಚಿತ್ರಹಿಂಸೆ ನೀಡಬಹುದು, ...ಗಳ ಕಾಲ ಜೈಲಿನಲ್ಲಿ ಕೊಳೆಯುವಂತೆ ಮಾಡಬಹುದು. ...ಭುತ್ವದ ಈ ಪ್ರವೃತ್ತಿಯನ್ನು ಯಾರೂ ಪ್ರಶ್ನಿಸುವಂತಿಲ್ಲ, ...ಮಾಯಕರನ್ನು ಬಂಧಿಸುವ ಅಧಿಕಾರಿಗಳಿಗೆ ಯಾವ ...ಕ್ಷೆಯೂ ಆಗುವುದಿಲ್ಲ. ವಿಚಾರಣಾಧೀನರನ್ನು ಹಲವು ...ರ್ಷಗಳ ಕಾಲ ಬಂಧನದಲ್ಲಿಡುವ ನ್ಯಾಯ ವ್ಯವಸ್ಥೆಯು ...ಕ್ಷೆರಿಯೂ ಆಗುವುದಿಲ್ಲ.

...ಸಾಕ್ಷಿ, ಆಧಾರ, ತರ್ಕ ಇಂತಹ ಯಾವುದೇ ಪುರಾವೆ ...ಇಲ್ಲದಿದ್ದರೂ ಪ್ರಭುತ್ವಕ್ಕೆ 'ಗುಮಾನಿ' ಬಂದಿದ್ದರಿಂದ ...ಬಂಧನಕ್ಕೆ ಗುರಿಯಾದವರಲ್ಲಿ ಬಿನಾಯಕ್ ಸೇನ್ ...ಮುಖರು. ಸೇನ್ ಅವರ ಬೆಂಬಲಕ್ಕೆ ನೊಬೆಲ್ ...ಸ್ತಿ ವಿಜೇತರು, ಮಾನವ ಹಕ್ಕುಗಳ ಹೋರಾಟಗಾರರು ...ತ್ತು ಖ್ಯಾತ ಬರಹಗಾರರು ನಿಂತಿದ್ದರಿಂದ ಅವರಿಗೆ ...ಮೀನಾದರೂ ಸಿಕ್ಕಿತು. ಸೇನ್ ತರಹ ವಿನಾಕಾರಣ ...ಬಂಧನಕ್ಕೆ ಮತ್ತು ಚಿತ್ರವಿಚಿತ್ರ ದೈಹಿಕ ಹಾಗು ಮಾನಸಿಕ ...ಹಿಂಸೆಗೆ ಗುರಿಯಾದವರಲ್ಲಿ ಸೋನಿ ಸೋರಿ ಎಂಬ ...ಆದಿವಾಸಿ ಮಹಿಳೆಯೂ ಒಬ್ಬರು. ಅವರ ಬೆಂಬಲಕ್ಕೆ ...ಹಲವು ಮಾಧ್ಯಮಗಳು ಮತ್ತು ಹೋರಾಟಗಾರರು ...ದರೂ ಪ್ರಭುತ್ವ ಕ್ಯಾರೆ ಅನ್ನಲಿಲ್ಲ. ಸೋನಿ ಸೋರಿ ...ಈಗಲೂ ಪೊಲೀಸ್, ನ್ಯಾಯಾಲಯ ಇತ್ಯಾದಿ ಎಂದೆಲ್ಲ ...ಮಾಡುತ್ತಿದ್ದಾರೆ.

...'ನಕ್ಸಲ್ ಬೆಂಬಲಿಗರು' ಎಂದು ಪೊಲೀಸರು ...ಆರೋಪಿಸಿದ್ದ ಸೇನ್ ಮತ್ತು ಸೋನಿ ಸೋರಿ ಅವರ ...ಪ್ರಸನಗಳು ಮಾಧ್ಯಮಗಳ ಕಣ್ಣಿಗೆ ಬಿದ್ದಿದ್ದರಿಂದ ...ಇಬ್ಬರ ಬಗ್ಗೆ ಒಂದಿಷ್ಟು ಜನರಿಗಾದರೂ ...ಗೊತ್ತಾಯಿತು. ಆದರೆ ಮಾಧ್ಯಮಗಳ ಗಮನಕ್ಕೆ ಬಾರದೆ ...ಈಗಲೂ ಜೈಲಿನಲ್ಲಿ ಅದೆಷ್ಟೋ ಅಮಾಯಕರು 'ನಕ್ಸಲ್ ...ಬೆಂಬಲಿಗರು' ಎಂಬ ಆರೋಪವನ್ನು ಹೊತ್ತು ದೇಶದ ...ವಿವಿಧ ಜೈಲುಗಳಲ್ಲಿ ದಿನಗಳನ್ನು ದೂಡುತ್ತಿದ್ದಾರೆ.


...ಅಂತಹವರಲ್ಲಿ ಒಬ್ಬರಾಗಿದ್ದವರು ಅರುಣ್ ಫೆರೈರಾ. ...ಬಳಿ ಒಂದು ಪೆನ್‌ಡ್ರೈವ್ ಇತ್ತು ಎಂಬ ಕಾರಣಕ್ಕೇ ...ಪೊಲೀಸರು ಅರುಣ್ ಅವರು ನಿಷೇಧಿತ ನಕ್ಸಲ್ ...ಸಂಘಟನೆಯ ಮುಖ್ಯ ನಾಯಕರಲ್ಲಿ ಒಬ್ಬರೆಂದು ...ಆರೋಪಿಸಿದರಲ್ಲದೆ, ಅವರು ಹಲವಾರು ಭಯೋತ್ಪಾದಕ ...ಕೃತ್ಯಗಳಲ್ಲಿ ಭಾಗಿಯಾಗಿ ಕೊಲೆಗಳನ್ನೂ ಮಾಡಿದ್ದಾರೆ ಎಂದು ...ಜೈಲಿಗೆ ದೂಡಿದರು. ಅದೂ ಅಂತಿಂತಹ ಜೈಲಲ್ಲ; ...ನಾಗಪುರದಲ್ಲಿರುವ ಕೇಂದ್ರ ಬಂದಿಖಾನೆಯ ಕುಖ್ಯಾತ ...'ಅಂಡಾ' ಎಂಬ ನರಕಸದೃಶ ಭಾಗಕ್ಕೆ. ಮೊಟ್ಟೆಯ ...ಆಕಾರದಲ್ಲಿರುವ ಈ 'ಅಂಡಾ'ಕ್ಕೆ ಹತ್ತಾರು ...ಬಾಗಿಲುಗಳಿವೆಯಲ್ಲದೆ ಇಲ್ಲಿಂದ ಹೊರ ಜಗತ್ತಿನಿಂದ ಗಾಳಿ ...ಒಳ ಬರುವುದಿರಲಿ, ಇಲ್ಲಿಂದ ಹೊರಜಗತ್ತಿನದು ಏನೇನೂ ...ಕಾಣಿಸುವುದಿಲ್ಲ. ಇಲ್ಲಿ ಗಲ್ಲುಶಿಕ್ಷೆಗೆ ಗುರಿಯಾಗಿರುವವರನ್ನು ...ಏಕಾಂತ ಬಂಧನದಲ್ಲಿಡಲಾಗುತ್ತದೆ. ಅದರ ಉದ್ದೇಶ ...ಬಂಧನಕ್ಕೆ ಗುರಿಯಾಗಿರುವವರ ...ಸ್ಥೈರ್ಯವನ್ನು ಮೊಟ್ಟೆ ಹೊಡೆದಷ್ಟೇ ಸಲೀಸಾಗಿ ...ಒಡೆಯುವುದಾಗಿದೆ. ಅಂತಹ ಅಂಡಾದಲ್ಲಿ ನಾಲ್ಕು ...ವರ್ಷಗಳಿಗಿಂತಲೂ ಹೆಚ್ಚು ಕಾಲವನ್ನು ಕಳೆದ ಅರುಣ್ ...ಅವರು ಬರೆದಿರುವ ಜೈಲಿಯ 'ಡೈರಿ'ಯ ಹೆಸರು ...'ಕಲರ್ಸ್ ಆಫ್ ದಿ ಕೇಜ್.'

...ಮುಂಬೈನ ಕ್ರಿಶ್ಚಿಯನ್ ಕುಟುಂಬದಲ್ಲಿ ಜನಿಸಿದ ...ಅರುಣ್ ಅವರನ್ನು ಬಾಬ್ರಿ ಮಸೀದಿಯನ್ನು ಕೆಡವಿದ ...ನಂತರ ಮುಂಬೈಯಲ್ಲಿ ಸಂಭವಿಸಿದ ಕೋಮು ...ಗಲಭೆಗಳು ಗಾಬರಿ ಮೂಡಿಸಿದವು. ಜೊತೆಗೆ ಎಲ್ಲೆಡೆ ...ಹರಡಿದ್ದ ಭ್ರಷ್ಟಾಚಾರ ಅವರಲ್ಲಿನ ಆಕ್ರೋಶ ...ಹೆಚ್ಚಿಯಾಗುವಂತೆ ಮಾಡಿತು. ಆಗ ಅವರು ...ವಿದ್ಯಾರ್ಥಿ ಪ್ರಗತಿ ಸಂಘಟನೆ ಎಂಬ ಯುವಕರ ...ಸಂಘಟನೆಯನ್ನು ಸೇರಿಕೊಂಡರು. ಆ ಸಂಘಟನೆಯ ...ಪ್ರಜಾಸತ್ತಾತ್ಮಕ, ವೈಜ್ಞಾನಿಕ ಮತ್ತು ...ಮನೋಭಾವನೆಯನ್ನು ಬಿಂಬಿಸುವ ಸಮಾನ ಶಿಕ್ಷಣ ವ್ಯವಸ್ಥೆಗೆ ...ಹೋರಾಡುವುದು, ಸಮಾನ ಶಿಕ್ಷಣ ವ್ಯವಸ್ಥೆ ...ಜಾರಿಗೆಯೇ ಬರುವುದಿಲ್ಲವಾದ್ದರಿಂದ ಆ ನಿಟ್ಟಿನಲ್ಲಿ ...ವರ್ಗ ಮತ್ತು ಜಾತಿರಹಿತ ಸಮಾಜವನ್ನು ನಿರ್ಮಿಸಲು ...ಹೋರಾಡುವುದೂ ಆ ಸಂಘಟನೆಯ ...ಉದ್ದೇಶವಾಗಿತ್ತು.

...ವರ್ಗ, ಜಾತಿ ಮತ್ತು ಕೋಮುಗಳೇ ...ಎಲ್ಲ ರಾಜಕೀಯ ಪಕ್ಷಗಳ ಬಂಡವಾಳ. ...ಇಲ್ಲದಿದ್ದರೆ ಅವರ ರಾಜಕೀಯದ ಬೇಳೆ ...ಬೇಯುವುದಿಲ್ಲ, ಅದ್ದರಿಂದ ಆ ವ್ಯವಸ್ಥೆಯು ನಿರ್ಮೂಲನೆಗೆ ಶ್ರಮಿಸುವವರೆಲ್ಲರೂ ಪ್ರಭುತ್ವದ ಕಣ್ಣಿಗೆ ಎಡ ಪಂಥೀಯ ನಕ್ಸಲರಂತೆ ಕಾಣಿಸುತ್ತಾರೆ. ಅರುಣ್ ಕೂಡ ಹಾಗೆ ಕಂಡಿದ್ದರಲ್ಲಿ ಅಚ್ಚರಿ ಇಲ್ಲ.

ಕನ್ನಡದಲ್ಲಿ ಈಗಾಗಲೇ ಒಂದೆರಡು ಜೈಲು ಡೈರಿಗಳು ಪ್ರಕಟಗೊಂಡಿವೆ. ಅವುಗಳಲ್ಲಿ ನಗರಿ ಬಾಬಯ್ಯನವರ 'ಕಗ್ಗತ್ತಲ ಲೋಕದಲ್ಲಿ 90 ದಿನಗಳು' ಮತ್ತು ನಮ್ಮ ಲಂಕೇಶ್ ಪ್ರಕಾಶನ ಪ್ರಕಟಿಸಿರುವ ಕುಮಾರ್ ಸಮತಳ ಅವರ 'ಜೈಲೆಂಬ ಲೋಕದಲ್ಲಿ' ಪ್ರಮುಖ ಕೃತಿಗಳು. ಇವರಿಬ್ಬರ ಪುಸ್ತಕಗಳಂತೆ ಅರುಣ್ ಅವರ ಪುಸ್ತಕವೂ ಜೈಲೆಂಬ ನರಕದ ಇನ್ನೂ ಹಲವಾರು ಮುಖಗಳನ್ನು ಪರಿಚಯಿಸುತ್ತದೆ.

2007ರ ಮೇ 7ರಂದು ಅರುಣ್ ನಾಗ್ಪುರದ ರೈಲ್ವೆ ಸ್ಟೇಷನ್‌ನಲ್ಲಿ ಹಲವು ಮಿತ್ರರಿಗೆ ಕಾಯುತ್ತಿದ್ದಾಗ ಅವರನ್ನು ಸುತ್ತುವರಿದ ಹದಿನೈದು ಮಂದಿ ಅವರನ್ನು ಕಾರಿನಲ್ಲಿ ಎತ್ತುಹಾಕಿಕೊಂಡು ಹೋದರು. ಮಫ್ತಿಯಲ್ಲಿದ್ದ ಅವರೆಲ್ಲರೂ



ಪೊಲೀಸರಾಗಿದ್ದರು. ಅರುಣ್ ಅವರನ್ನು ಚಿತ್ರಹಿಂಸೆಗೆ ಗುರಿಪಡಿಸುವ ಮೂಲಕ ತಾನೊಬ್ಬ ನಕ್ಸಲೈಟ್ ಎಂದು ಅವರನ್ನು ಒಪ್ಪಿಸುವುದು ಪೊಲೀಸರ ಉದ್ದೇಶವಾಗಿತ್ತು. ಅಂತಹ ಒಂದು ಅನುಭವವನ್ನು ಅರುಣ್ ಹೀಗೆ ದಾಖಲಿಸುತ್ತಾರೆ: "ನನ್ನ ಕೈಗಳನ್ನು ಕಿಟಕಿಯ ಗ್ರಿಲ್‌ಗೆ ಕಟ್ಟಿದರು. ಇಬ್ಬರು ಪೊಲೀಸರು ನೆಲದಲ್ಲಿ ಚಾಚಿದ್ದ ನನ್ನ ಕಾಲುಗಳ ಮೇಲೆ ನಿಂತರು. ಹೀಗೆ ಹಿಂಸೆ ಕೊಡುವುದರ ಉದ್ದೇಶ ಬಂಧಿತ ದೇಹಕ್ಕೆ ತೀವ್ರತರವಾದ ನೋವಾದರೂ ಅದರ ಕುರುಹುಗಳು ದೇಹದ ಮೇಲೆ ಕಾಣಿಸುವುದಿಲ್ಲ. ಈ ಹಿಂಸೆಯಿಂದಾಗಿ ನನ್ನ ಕಿವಿಗಳಲ್ಲಿ ರಕ್ತಸ್ರಾವ ಶುರುವಾಯಿತಲ್ಲದೆ ನನ್ನ ಗದ್ದ ಊದಿಕೊಳ್ಳಲಾರಂಭಿಸಿತು." ಮೈನಡುಗಿಸುವ ಇಂತಹ ಯಾತನೆಯನ್ನು ಅನುಭವಿಸಿಯೂ ಅರುಣ್ "ನನ್ನನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದು ಹಾಕದಿದ್ದಕ್ಕಿಂತ ಇದು ವಾಸಿ" ಎನ್ನುತ್ತಾರೆ.

ಅರುಣ್ ಅವರ ಜೊತೆಗೆ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದ ಇನ್ನಿಬ್ಬರಿಗೆ ಕೊಟ್ಟ ಹಿಂಸೆ ಇದಕ್ಕಿಂತಲೂ ಘೋರ. "ಇಬ್ಬರು ಪೊಲೀಸರು ಅವರ ಕಾಲುಗಳನ್ನು ಎತ್ತಿಹಿಡಿದರು. ಆಗ ಕೊರಾಟೆ ಎಂಬ ಪೊಲೀಸ್ ಅಧಿಕಾರಿ ಅವರ ಗುದನಾಳಕ್ಕೆ ಇಪ್ಪತ್ತು ಎಂ.ಎಲ್ ಅಷ್ಟು ಪೆಟ್ರೋಲ್ ಅನ್ನು ಸುರಿದ. ಪೆಟ್ರೋಲ್ ಸುರಿದಿದ್ದರಿಂದಾಗಿ ಹಲವಾರು ದಿನಗಳ ಕಾಲ ಮಲದ್ವಾರದಿಂದ ರಕ್ತಸ್ರಾವವಾಯಿತು. ಇಪ್ಪತ್ತು ಎಂ.ಎಲ್ ಅಷ್ಟು ಪೆಟ್ರೋಲ್ ಹಾಕಿದರೆ ಇಷ್ಟು ಯಾತನೆ ಆಗುತ್ತದೆಯೇ ಹೊರತು ಸಾವು ಸಂಭವಿಸುವುದಿಲ್ಲ ಎಂಬುದನ್ನು ಆ ಕೊರಾಟೆ ಎಂಬ ಪುಣ್ಯಾತ್ಮ ಅದೆಲ್ಲಿಂದ ಕಲಿತನೋ ಏನೋ. ಅವರಿಬ್ಬರೂ ಇದರ ಬಗ್ಗೆ ನ್ಯಾಯಾಲಯದ ಮುಂದೆ ದೂರಿದರು. ಆದರೆ ಸರ್ಕಾರಿ ಆಸ್ಪತ್ರೆಯ ವೈದ್ಯ ಕೊರಾಟೆಯ ಮಿತ್ರರಾಗಿದ್ದರಿಂದ ಅವರಿಗೆ ಪೈಲ್ಸ್ ಸಮಸ್ಯೆ ಇರುವುದರಿಂದ ರಕ್ತಸ್ರಾವ ಆಗುತ್ತಿದೆಯೇ ಹೊರತು ಅವರಿಗೆ ಅಂತಹ ಹಿಂಸೆಯನ್ನೇನು ನೀಡಿಲ್ಲ ಎಂದು ಸಬೂಬು ಕೊಟ್ಟ."

ಮಹಾರಾಷ್ಟ್ರ ಪೊಲೀಸರು ಉಪಯೋಗಿಸುವ ಮತ್ತೊಂದು ಅಸ್ತ್ರದ ಹೆಸರು 'ಬಾಜಿ ರಾವ್'. ಮರದ ಕೋಲಿಗೆ ಕಟ್ಟಿರುವ ಬೆಲ್ಟ್‌ಗೆ ಪೇಶ್ವಾ ಬಾಜಿ ರಾವ್‌ನ ಹೆಸರನ್ನು ಅಲ್ಲಿನ ಪೊಲೀಸರು ಇಟ್ಟಿದ್ದಾರೆ. ಈ ಅಸ್ತ್ರವನ್ನು ಕೈದಿಯ ಅಂಗೈಗೆ ಮತ್ತು ಅಂಗಾಲಿಗೆ ಹೊಡೆಯಲು ಬಳಸುತ್ತಾರೆ. ಇದು ಕೂಡ ಹೆಚ್ಚಿನ ಹಿಂಸೆ ನೀಡಿದರೂ ಕುರುಹುಗಳನ್ನು ಬಿಡುವುದಿಲ್ಲ. ಅರುಣ್ ಅವರಿಗೆ ಬಾಜಿ ರಾವ್‌ನ ಪರಿಚಯವೂ ಆಯಿತು.

ಮೊದಲ ಬಂಧನದ ನಂತರ ವಿಚಾರಣೆಗೆಂದು ತಮ್ಮ ವಶಕ್ಕೆ ತೆಗೆದುಕೊಂಡ ಪೊಲೀಸರು ಅರುಣ್ ಅವರಿಗೆ ಮತ್ತಷ್ಟು ಹಿಂಸೆಯನ್ನು ನೀಡಿದರು. ಅದು ಅಲ್ಲಿಗೇ ಮುಗಿಯಲಿಲ್ಲ. ಒಂದಾದಮೇಲೊಂದು ಎಂಬಂತೆ ಪೊಲೀಸರು ಅರುಣ್ ಅವರ ವಿರುದ್ಧ ಒಂಭತ್ತು ಕೇಸುಗಳನ್ನು ಜಡಿದರು. ಪ್ರತಿಬಾರಿ ಹೊಸ ಕೇಸು ಜಡಿದ ನಂತರ ಮತ್ತದೇ 'ವಿಚಾರಣೆ'ಗೆ ಅವರು ಗುರಿಯಾದರು. "ಸ್ವಲ್ಪ ದಿನಗಳಲ್ಲೇ ನನ್ನ ಜೀವನ ಒಂದು ತರಹದ ನಮೂನೆಯನ್ನು ಪಡೆಯಿತು. ಪೊಲೀಸರು ಹೊಸ ಕೇಸಿನಲ್ಲಿ ನನ್ನ ಹೆಸರನ್ನು ಸೇರಿಸುತ್ತಿದ್ದರು, ಆಮೇಲೆ ನನ್ನನ್ನು ತಮ್ಮ ವಶಕ್ಕೆ ತೆಗೆದುಕೊಂಡು ಹಿಂಸೆ ನೀಡುತ್ತಿದ್ದರು. ನನ್ನಿಂದ ಯಾವುದೇ ತಪ್ಪೊಪ್ಪಿಗೆ ಸಿಗದ ನಂತರ ನನ್ನನ್ನು ಜೈಲಿಗೆ ವಾಪಸ್ ಕಳುಹಿಸುತ್ತಿದ್ದರು. ಮತ್ತೆ ಅದೆಲ್ಲ ಪುನರಾವರ್ತನೆ ಆಗುತ್ತಿತ್ತು" ಎಂದು ಅವರು ಆವೇಶ ಇಲ್ಲದೆ ನೆನಪಿಸಿಕೊಳ್ಳುತ್ತಾರೆ.

ಜೈಲೆಂಬ ಕಠೋರ ಲೋಕದಲ್ಲೂ ಅರುಣ್ ಜೀವನೋತ್ಸಾಹವನ್ನು ಉಳಿಸಿಕೊಳ್ಳಲು ಶ್ರಮಿಸುತ್ತಾರೆ. ಅವರು ಇತರರೊಂದಿಗೆ ಜೈಲಿನ ಒಂದು ಪುಟ್ಟ ಭಾಗದಿಂದ ಕಾಣಿಸುತ್ತಿದ್ದ ಮರವೊಂದರ ಒಂದೆರಡು ಎಲೆಗಳನ್ನು ನೋಡುತ್ತಲೇ ಹರಟೆ ಹೊಡೆಯುತ್ತಾ ಕಾಲ ದೂಡುತ್ತಾರೆ. ಜೈಲಿನ ಊಟ ರುಚಿಯಾಗಿ ಇರುವುದಿಲ್ಲವಾದ್ದರಿಂದ ಹಲವು ಬಂಧಿಗಳು ಆಹಾರ ಸಾಮಗ್ರಿಗಳನ್ನು ಕೊಂಡು ತಾವೇ ಒಂದಿಷ್ಟು ಪದಾರ್ಥಗಳನ್ನು ತಯಾರಿಸುತ್ತಾರೆ. ಆದರೆ ಹಾಗೆ ತಯಾರಿಸಿದ್ದನ್ನು ಅರುಣ್ ತರಹ ಏಕಾಂಗಿ ಬಂಧನದಲ್ಲಿರುವವರಿಗೆ ಸಾಗಿಸುವುದು ಹೇಗೆ? ಅದಕ್ಕೆಂದು ಅವರು ಒಂದು 'ಗಾಡಿ' ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಅದೇನೆಂದರೆ ಊಟವನ್ನು ಒಂದು ಬಟ್ಟೆಯಲ್ಲಿಟ್ಟು, ಆ ಬಟ್ಟೆಗೆ ಒಂದು ಹಗ್ಗವನ್ನು ಕಟ್ಟುವುದು. ಆ ಹಗ್ಗವನ್ನು ಒಬ್ಬರ ನಂತರ ಇನ್ನೊಬ್ಬರು ತಮ್ಮ ಕೋಣೆಯೊಳಗಿಂದಲೇ ಎಳೆಯುವ ಮೂಲಕ ಎಲ್ಲರಿಗೂ ಸಾಗಿಸುವುದು!

ಮಾಂಸದೂಟಕ್ಕೂ ಜೈಲಿನಲ್ಲಿ ಬರ. ಅದನ್ನು ನೀಗಿಸಲು ಅರುಣ್ ಮತ್ತು ಅವರ ಸಂಗಡಿಗರು ಕಂಡುಕೊಂಡ ಮಾರ್ಗ ಮಿಡತೆಗಳನ್ನು ಹಿಡಿದು, ಅವುಗಳನ್ನು ಒಣಗಿಸಿ, ಹುರಿದುಕೊಂಡು ತಿನ್ನುವುದು. ಬಂಧಿಗಳು ಹಕ್ಕಿಗಳನ್ನು, ಅಳಿಲುಗಳನ್ನು ಮತ್ತು ಹೆಗ್ಗಣಗಳನ್ನೂ ಬಿಡುವುದಿಲ್ಲ! ಒಮ್ಮೆ ಅರುಣ್ ಅವರು ಹುಟ್ಟುಹಬ್ಬದ ಆಚರಣೆಯ ಭಾಗವಾಗಿ ಅವರ ಜೈಲು ಮಿತ್ರರು ದಪ್ಪಗಿನ ಹೆಗ್ಗಣವನ್ನು ಹಿಡಿದು ಊಟ ತಯಾರಿಸುತ್ತಾರೆ!

ಅಮಾಯಕರನ್ನು ನಕ್ಸಲರೆಂದು ಬಂಧಿಸುವ ಪೊಲೀಸರ ಕ್ರಮದ ವಿರುದ್ಧ ಅರುಣ್ ಮತ್ತು ಇತರೆ ರಾಜಕೀಯ ಬಂಧಿಗಳು ಜೈಲಿನಲ್ಲೇ 'ಒಂದು ಉಪವಾಸ ಸತ್ಯಾಗ್ರಹವನ್ನು ಸಂಘಟಿಸುತ್ತಾರೆ. ಆ ಸತ್ಯಾಗ್ರಹದಿಂದ ಅವರು ಹನ್ನೊಂದು ಕೇಜಿಗಳನ್ನು ಕಳೆದುಕೊಂಡರೂ ಅಧಿಕಾರಿಗಳು ಅವರ ಎಲ್ಲ ಬೇಡಿಕೆಗಳನ್ನು ತಿರಸ್ಕರಿಸುವುದರಿಂದ ಅದು ವಿಫಲಗೊಳ್ಳುತ್ತದೆ. ಇನ್ನೊಮ್ಮೆ ಮರಣದಂಡನೆ ವಿರುದ್ಧವೂ ಗಲ್ಲು ಶಿಕ್ಷೆಗೆ ಗುರಿಯಾಗಿರುವವರನ್ನೆಲ್ಲ ಒಗ್ಗೂಡಿಸಿ ಒಂದು ದಿನದ ಉಪವಾಸ ಸತ್ಯಾಗ್ರಹವನ್ನು ನಡೆಸುತ್ತಾರೆ. ಅದರ ಬಗ್ಗೆ ಅವರು ಹೀಗೆ ಬರೆಯುತ್ತಾರೆ: "ಸಾಮಾಜಿಕ ಪಿಡುಗುಗಳ ವಿರುದ್ಧ ಸಾಕಷ್ಟು ಹೋರಾಟಗಳನ್ನು ಸಂಘಟಿಸಿರುವ ನನ್ನ ಅನುಭವದಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿರುವವರನ್ನು ಸಂಘಟಿಸುವುದು ತುಂಬಾ ಸಲೀಸಾಗಿತ್ತು, ಯಾಕೆಂದರೆ ಅವರ ಬಳಿ ಕಳೆದುಕೊಳ್ಳಲು ಇನ್ನೇನೂ ಉಳಿದಿರಲಿಲ್ಲ. ಬದಲಾಗಿ ಅವರು ತಮ್ಮ ಪ್ರಾಣವನ್ನಾದರೂ ಉಳಿಸಿಕೊಳ್ಳುವ ಆಶಯವನ್ನು ಹೊಂದಿದ್ದರು."


ಜೈಲಿನಲ್ಲಿ ಸಮಯ ಕಳೆಯಲು ಅರುಣ್ ಪುಸ್ತಕಗಳಿಗೆ ಬೇಡಿಕೆ ಇಡುತ್ತಾರೆ. ಆದರೆ ತಮಾಷೆಯ ಸಂಗತಿ ಯಾವುದೆಂದರೆ ಜೈಲು ಅಧಿಕಾರಿಗಳು ನಮ್ಮ ದೇಶದ ಸಂವಿಧಾನ ದೊಡ್ಡ ಗಾತ್ರದ ಪುಸ್ತಕವಾದ್ದರಿಂದ ಅದನ್ನು ಕೊಡಲು ನಿರಾಕರಿಸುತ್ತಾರೆ. ಇನ್ನೊಮ್ಮೆ ಜೈಲ್ ಮ್ಯಾನುಯಲ್ ಅನ್ನೂ ಕೊಡದೆ ಸತಾಯಿಸುತ್ತಾರೆ. ಆಗ ಅರುಣ್ ಅವರ ನೆರವಿಗೆ ಬರುವುದು ಆಲನ್ ವಾಟರ್ಸ್ ಎಂಬ ಮತ್ತೊಬ್ಬ ಬಂಧಿ. ಬ್ರಿಟಿಷ್ ಪ್ರಜೆಯಾದ ಆಲನ್ ಮಕ್ಕಳನ್ನು ಲೈಂಗಿಕ ತೃಪೆಗೆ ಬಳಸಿಕೊಂಡಿದ್ದರಿಂದ ಶಿಕ್ಷೆಗೆ ಗುರಿಯಾಗಿದ್ದಾನೆ. ಆದರೆ ಆತನಿಗೆ ವಿದೇಶದಿಂದ ಪುಸ್ತಕಗಳು ಸರಬರಾಜಾಗುತ್ತಿರುತ್ತದೆ. ಜೈಲಿನಲ್ಲಿರುವಾಗಲೇ ಅರುಣ್ ತಮ್ಮ ಸ್ನಾತಕೋತ್ತರ ಪರೀಕ್ಷೆಗಳನ್ನು ಬರೆಯುತ್ತಾರೆ.

ಹೀಗೆ ಹಲವು ವರ್ಷಗಳು ಉರುಳಿದ ನಂತರ ಅರುಣ್ ವಿರುದ್ಧ ಇದ್ದ ಎಲ್ಲಾ ಕೇಸುಗಳು ಖುಲಾಸೆಯಾಗಿ ಅವರು ಬಿಡುಗಡೆಗೆ ಸಿದ್ಧರಾಗುತ್ತಾರೆ. ಆದರೆ ಅವರು ಜೈಲು ಗೇಟನ್ನು ದಾಟಿದ್ದೇ ತಡ, ಪೊಲೀಸರು ಮತ್ತೊಮ್ಮೆ ಅವರನ್ನು ಹೊತ್ತೊಯ್ದು ಇನ್ನೊಂದು ಕೇಸಿನಲ್ಲಿ ಫಿಕ್ಸ್ ಮಾಡುತ್ತಾರೆ. ತಂದೆ, ತಾಯಿ, ಹೆಂಡತಿ, ಮಗ, ಮಿತ್ರರು, ಸ್ನೇಹಿತರೆಲ್ಲರನ್ನೂ ಮತ್ತೊಮ್ಮೆ ನೋಡುವ, ಮಾತನಾಡಿಸುವ ಹುಮ್ಮಸ್ಸಿನಲ್ಲಿರುವ ಅರುಣ್‌ಗೆ ಆಗ ಆಗುವ ಆಘಾತ ಅಷ್ಟಿಷ್ಟಲ್ಲ. ಮತ್ತದೇ ವಿಚಾರಣೆ, ಕೋರ್ಟು ಇತ್ಯಾದಿಗಳು ಪ್ರಾರಂಭವಾಗುತ್ತವೆ.


ಕೊನೆಗೂ ನಾಲ್ಕು ವರ್ಷ ಎಂಟು ತಿಂಗಳುಗಳ ನಂತರ ಅರುಣ್ ಅವರ ವಿರುದ್ಧ ಪೊಲೀಸರು ಜಡಿದಿದ್ದ ಎಲಾ ಒಂಭತ್ತು ಕೇಸುಗಳೂ ಯಾವುದೇ ಸಾಕ್ಷಿ ಅಥವಾ ಪುರಾವೆ ಇಲ್ಲ ಎಂಬ ಕಾರಣಕ್ಕೆ ಬಿದ್ದು ಹೋಗುತ್ತವೆ. ಅರುಣ್ ಜೈಲೆಂಬ ನರಕದಿಂದ ಬಿಡುಗಡೆ ಹೊಂದುತ್ತಾರೆ.

ಬಂಧನ ಮುಕ್ತರಾದರೂ ಅರುಣ್ ಅವರಿಗೆ ನೆಮ್ಮದಿಯಿಂದ ಬದುಕುವುದು ಸುಲಭವಲ್ಲ. ಪ್ರಭುತ್ವ ಮತ್ತೆ ಯಾವ ಕಾರಣಕ್ಕೆ ಬೇಕಾದರೂ ತಮ್ಮನ್ನು ಬಂಧಿಸಬಹುದೆಂಬ ಭಯ ಅವರನ್ನು ಕಾಡುತ್ತಲೇ ಇದೆ. ಜೊತೆಗೆ ತಾನು ನಂಬಿರುವ ಸಿದ್ಧಾಂತಕ್ಕೆ ತಕ್ಕಂತೆ ಮತ್ತೆ ಬದುಕನ್ನು ಕಟ್ಟಿಕೊಳ್ಳುವ ಸಮಸ್ಯೆಯನ್ನೂ ಅವರು ಎದುರಿಸುತ್ತಿದ್ದಾರೆ.

'ಕಲರ್ಸ್ ಆಫ್ ದಿ ಕೇಜ್' ಅರುಣ್ ಎಂಬ ಆದರ್ಶವಾದಿ ವ್ಯಕ್ತಿಯ ಜೈಲಿನ ಅನುಭವವನ್ನು ಮಾತ್ರ ಕಟ್ಟಿಕೊಡುವುದಿಲ್ಲ, ಅದರ ಜೊತೆಗೆ ನಮ್ಮ ಪ್ರಭುತ್ವ ಅದೆಷ್ಟು ಜನ ವಿರೋಧಿ ಆಗುತ್ತಿದೆ ಎಂಬುದನ್ನೂ ಮನದಟ್ಟು ಮಾಡಿಕೊಡುತ್ತದೆ. ●



ಹಿಂದೂ ಧರ್ಮದ ಬದಲಾಗಿ ಬೌದ್ಧ ಧರ್ಮವನ್ನು ಸ್ವೀಕರಿಸಬೇಕು



(ದಲಿತ ಸಂಘರ್ಷ ಸಮಿತಿಯ ಆರಂಭಿಕ ಹೋರಾಟಗಾರರಲ್ಲಿ ಪ್ರಮುಖರಾದ ಎಸ್.ವೆಂಕಟೇಶ್ ಅವರಿಗೆ ಪ್ರಸಕ್ತ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಬಂದಿರುವ ಸಂದರ್ಭದಲ್ಲಿ ನಡೆಸಿರುವ ಸಂದರ್ಶನ ಇಲ್ಲಿದೆ)

ಸಂದರ್ಶನ

ಡಾ. ಉಮಾಶಂಕರ್ ಹೆಚ್.ಡಿ

ಅದು ಎಂಬತ್ತರ ದಶಕ. ಆಗ ದಲಿತ ಚಳವಳಿ ತನ್ನ ಉಚ್ಛ್ರಾಯ ಸ್ಥಿತಿಯಲ್ಲಿತ್ತು, ಆಗೊಂದು ಭೀಕರ ಘಟನೆ ಚಿಂತಾಮಣಿ ತಾಲೂಕಿನ ಅರಳ್ಳಿಯಲ್ಲಿ ನಡೆದಿತ್ತು. ಅಲ್ಲಿನ ಭೂ ಮಾಲೀಕರು ಒಬ್ಬ ಜೀತದಾಳನ್ನು ಅಮಾನುಷವಾಗಿ ಕೊಂದಿದ್ದರು. ಭೂಮಾಲೀಕರು ಕೊಂದಿದ್ದ ಜೀತದಾಳುವಿನ ಕುಟುಂಬಕ್ಕೆ ಬೆದರಿಕೆಯೊಡ್ಡಿ ಆತನ ಶವವನ್ನು ಸದ್ದಿಲ್ಲದೆ ಮಣ್ಣು ಮಾಡಿಸಿದ್ದರು. ಈ ವಿಷಯ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರೊಬ್ಬರಿಗೆ ತಿಳಿಯಿತು. ಅವರು ಅಲ್ಲಿಗೆ ರಾತ್ರೋರಾತ್ರಿ ನಡೆದುಕೊಂಡು ಹೋದರು. ಮಾರನೆ ಬೆಳಗ್ಗೆ ಅಧಿಕಾರಿಗಳು ಹೆಣದ ಪೋಸ್ಟ್ ಮಾರ್ಟಂಗೆ ಬರಲಿದ್ದಾರೆ ಎಂದು ತಿಳಿದುಕೊಂಡಿದ್ದ ಅವರು ಪೋಸ್ಟ್ ಮಾರ್ಟಂಗೆ ಸತ್ತವನ ಕುಟುಂಬವನ್ನು ಒಪ್ಪಿಸಿದರು. ಹೆಣದ ಪೋಸ್ಟ್ ಮಾರ್ಟಂ ಆದರೆ ಕೊಲೆಯ ಗುಟ್ಟು ರಟ್ಟಾಗುವ ಸಾಧ್ಯತೆಯಿತ್ತು. ಇದು ಭೂ ಮಾಲೀಕರ ಬುಡಕ್ಕೆ ಕೊಡಲಿಯ ಕಾವಾಗುವ ಮುನ್ಸೂಚನೆಯಾಗಿತ್ತು. ಇದನ್ನೆಲ್ಲ ತಿಳಿದ ಅಲ್ಲಿನ ಭೂ ಮಾಲೀಕರು ಹೆಣವನ್ನು ಕಾಣೆಯಾಗಿಸುವ ಸಾಧ್ಯತೆಯಿದ್ದರಿಂದ ಕುಟುಂಬದ ಕೆಲವರೊಟ್ಟಿಗೆ ರಾತ್ರಿಯಿಡಿ ಸಮಾಧಿಯ ಪಕ್ಕವೇ ಇದ್ದು ಹೆಣ ಕಾಯಲು ಆ ಕಾರ್ಯಕರ್ತರು ತೀರ್ಮಾನಿಸಿದರು.

ಮಧ್ಯರಾತ್ರಿ ಹೆಣ ಕಾಯುತ್ತಿದ್ದಾಗ ಮಳೆ ಶುರುವಾಯಿತು. ಕೊಲೆಯಾದವನ ಕುಟುಂಬಸ್ಥರೊಂದಿಗೆ ಮನೆಗೆ ಮರಳಿದ ಕಾರ್ಯಕರ್ತನಿಗೆ ನೆಮ್ಮದಿ ಇಲ್ಲದಂತಾಯಿತು. ಮಳೆ ನಿಲ್ಲುವುದೇ ತಡ, ಮತ್ತೆ ಹೊರಡಲು ಮುಂದಾದ ಕಾರ್ಯಕರ್ತನಿಗೆ ಕುಟುಂಬಸ್ಥರು ಬರುವುದಿಲ್ಲವೆಂದು ನಿರಾಸಕ್ತಿ ತೋರಿದರು. ತಾನೊಬ್ಬನೆ ಸಮಾಧಿಯ ಬಳಿ ಹೋಗಿ ಬೆಳಗ್ಗೆ ಅಧಿಕಾರಿಗಳು ಬರುವತನಕ ಕಾದು, ಕೇಸು ಕೋರ್ಟ್ ಮೆಟ್ಟಿಲು ಹತ್ತುವಂತೆ ಮಾಡಿ, ತಾನೊಬ್ಬ ನಿಷ್ಠಾವಂತ ನೋವುಳ್ಳವರ ಪರ ಕಾರ್ಯಕರ್ತ ಎಂದು ನಾಡಿಗೆ ತಿಳಿಸಿದ್ದರು. ಆ ದಿಟ್ಟ ದಸಂಸ ಕಾರ್ಯಕರ್ತರೇ ಎಸ್.ವೆಂಕಟೇಶ್. ಅವರನ್ನು ಎಲ್ಲರೂ ಕರೆಯುವುದು ಗಡ್ಡಂ ಅಣ್ಣಾ ಎಂದೇ. ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿರುವ ಈ ಸಂದರ್ಭದಲ್ಲಿ ಅವರೊಂದಿಗೆ ಒಂದು ಪುಟ್ಟ ಸಂದರ್ಶನ.

ಪ್ರಶ್ನೆ: ನಿಮಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿದೆ. ಇದರ ಬಗ್ಗೆ ಹೇಗನಿಸುತ್ತಿದೆ?

ಉತ್ತರ: ಖುಷಿಯಾಗ್ತಿದೆ. ಮುಂದಿನ ದಿನಗಳಲ್ಲಿ ಇಂತಹ ಪ್ರಶಸ್ತಿಗಳು ಚಳವಳಿ ನಡೆಸಿದ ಅಸಂಖ್ಯಾತ ಪ್ರಾಮಾಣಿಕ ಕಾರ್ಯಕರ್ತರಿಗೆ ಬರಲಿ ಅಂತ ಆಶಿಸುತ್ತಾ, ದಲಿತ ಚಳವಳಿಯ ಎಲ್ಲಾ ಪ್ರಾಮಾಣಿಕ ಕಾರ್ಯಕರ್ತರಿಗೆ ಈ ಪ್ರಶಸ್ತಿಯನ್ನು ಅರ್ಪಿಸುತ್ತೇನೆ.

ಪ್ರಶ್ನೆ: ಚಳವಳಿಗೆ ಧುಮುಕಲು ನಿಮಗೆ ಸ್ಫೂರ್ತಿಯಾದ ಸಂಗತಿಗಳು ಯಾವುವು?

ನಾನು ಪಿಯುಸಿ ಓದುತ್ತಿದ್ದ ಸಂದರ್ಭದಲ್ಲಿ ಕೆ.ನಾರಾಯಣಸ್ವಾಮಿಯವರು ನಮಗೆ ಕನ್ನಡ ಲೆಕ್ಚರರ್ ಆಗಿದ್ದರು. ಅವರು ಹಲವು ದಲಿತ ಹುಡುಗರನ್ನ ಗುರುತಿಸಿ ಅವರನ್ನು ಸಾಮಾಜಿಕ ಬದಲಾವಣೆಯ ಕಾರ್ಯದಲ್ಲಿ ತೊಡಗಿಸಬೇಕೆಂದುಕೊಂಡಿದ್ದರು. ಹೀಗೆ ಗುರುತಿಸಲು ಪ್ರಾರಂಭಿಸಿದ ನಾರಾಯಣಸ್ವಾಮಿಯವರು ವೈ.ರಾಮಣ್ಣ ಅವರೊಟ್ಟಿಗೆ ನನ್ನನ್ನೂ ಗುರುತಿಸಿ ಒಂದು ದಿನ ನನಗೆ 'ಮಾನವ ಎಚ್ಚೆತ್ತಾಗ' ಎಂಬ ಒಂದು ಪುಸ್ತಕ ಕೊಟ್ಟರು. ದಲಿತ ಆದಿವಾಸಿಗಳ ಬಗ್ಗೆ ಬರೆದಿದ್ದ ಆ ಪುಸ್ತಕ ಮತ್ತು ನಂತರದ ದಿನಗಳಲ್ಲಿ ಧನಂಜಯ ಕೀರ್ ಅವರ 'ಅಂಬೇಡ್ಕರರ ಲೈಫ್ ಅಂಡ್ ಮಿಶನ್' ಪುಸ್ತಕ ನನ್ನ ಮೇಲೆ ಅತಿಯಾದ ಪ್ರಭಾವ ಬೀರಿದವು. ಇದರ ಪ್ರಭಾವದಿಂದಾಗಿ ನಮ್ಮ ಹಿರಿಯರು ನಡೆಸುತ್ತಿದ್ದ ರಾತ್ರಿ ಶಾಲೆಯ ವತಿಯಿಂದ ಚಿಂತಾಮಣಿಯ ಗಜಾನನ ಸರ್ಕಲ್‌ನಲ್ಲಿ ಅಂಬೇಡ್ಕರ್ ಜಯಂತಿ ಮಾಡಿದೆವು.

ಈ ಕಾಲಘಟ್ಟದಲ್ಲಿಯೇ ಬೂಸಾ ಚಳವಳಿ ನಡೆಯಿತು. ಈ ಹಿನ್ನೆಲೆಯಲ್ಲಿ ದೇವನೂರು ಮಹಾದೇವ, ಸಿದ್ದಲಿಂಗಯ್ಯ, ಬಿ. ಕೃಷ್ಣಪ್ಪ ಅವರೆಲ್ಲ ಪರಿಚಯವಾದರು. ಮೈಸೂರಿನ ಸಿದ್ದಾರ್ಥ ಹಾಸ್ಟೆಲ್ಲಿನಲ್ಲಿ ರಾಜ್ಯದ ಹಲವಾರು ಕಡೆಯಿಂದ ಬಂದ ಎಲ್ಲರನ್ನೂ ಒಗ್ಗೂಡಿಸುವ ಪ್ರಯತ್ನ ನಡೆಯಿತು. ರಾಜ್ಯದ ಎಲ್ಲ ಅಂಬೇಡ್ಕರ್ ಸಂಘಗಳನ್ನು ಒಂದು ಮಾಡಿ ಒಂದು ಸಂಘಟನೆ ಮಾಡೋಣ ಅಂತ ಅಲ್ಲಿ ನಿರ್ಧಾರ ತೆಗೆದುಕೊಂಡೆವು. ನಂತರದಲ್ಲಿ ಸ್ಥಾಪಿತವಾದ ದಸಂಸಕ್ಕೆ ಇದು ಒಂದು ಸ್ಫೂರ್ತಿ ನೀಡಿತು ಅಂತ ಹೇಳಬಹುದು.

ಪ್ರಶ್ನೆ: ನೀವೂ ಸಹ ಆರಂಭಿಕ ದಸಂಸ ಸಂಸ್ಥಾಪಕರಲ್ಲಿ ಒಬ್ಬರು. ಅಂದಿನ ಅನುಭವಗಳು ಹೇಗಿದ್ದವು?

ಆರಂಭದಲ್ಲಿ ದಲಿತರ ಮೇಲೆ ನಡೆಯುವ ಸಣ್ಣ ಹಲ್ಲೆ, ದೌರ್ಜನ್ಯ ಅಸ್ಪೃಶ್ಯತೆ, ಅವಮಾನಗಳೂ ಸಹ ನಮ್ಮ ಮೇಲೆ ಪ್ರಭಾವ ಬೀರುತ್ತಿದ್ದವು. ಇದನ್ನು ಹೊರ ಜಗತ್ತಿಗೆ ತಿಳಿಸಲು 'ಶೋಷಿತ' ಎಂಬ ಪತ್ರಿಕೆ ಮೈಸೂರು ಭಾಗದಿಂದ ಬಂತು. ಅದು ಮುಂದೆ 'ಪಂಚಮ' ಎಂದಾಯಿತು.

ಆವಾಗ ದಲಿತರಲ್ಲಿ ಇದ್ದಂತಹ ಪರಸ್ಪರ ನಂಬಿಕೆ, ವಿಶ್ವಾಸ, ಪ್ರೀತಿ ಮತ್ತು ಬದ್ಧತೆ ದಲಿತ ಲೇಖಕರು, ಕಲಾವಿದರು, ಹೋರಾಟಗಾರರು ಮತ್ತು ಯುವಕರು ಸೇರಿ ಬಿ.ಕೃಷ್ಣಪ್ಪ ಅವರ ನೇತೃತ್ವದಲ್ಲಿ ಭದ್ರಾವತಿಯಲ್ಲಿ 'ದಲಿತ ಲೇಖಕರ ಕಲಾವಿದರ ಯುವ ಒಕ್ಕೂಟ' ಸಮಾವೇಶವನ್ನು ಮಾಡುವಂತೆ ಪ್ರೇರೇಪಿಸಿತು. ಬಸವಲಿಂಗಪ್ಪನವರು ಉದ್ಘಾಟಿಸಿದ್ದರು. ನಂತರ ದಸಂಸ ಪ್ರತಿಯೊಂದು ಹೋರಾಟವನ್ನೂ ಬದ್ಧತೆಯಿಂದ ನಡೆಸಿ ಸಮುದಾಯದ ಹಿತಾಸಕ್ತಿಯನ್ನು ಕಾಪಾಡಿತು.

ಹಳ್ಳಿಹಳ್ಳಿಗಳಿಗೆ ಹೋಗಿ ನಾವು ಪ್ರಚಾರ ಮಾಡುತ್ತಿದ್ದೆವು. ಆಪ್ಪೊತ್ತಿಗೆ ಗಿರಿಯಪ್ಪ, ಕೃಷ್ಣಪ್ಪ, ರಾಜಣ್ಣ ಇವರೆಲ್ಲ ದಸಂಸ ಹೆಸರಿನಲ್ಲಿ ಕೆಲಸ ಮಾಡುತ್ತಿದ್ದರು. ಚಂದ್ರಪ್ರಸಾದ್ ತ್ಯಾಗಿ ಫ್ಯಾಕ್ಟರಿಯಲ್ಲಿನ ಅಸ್ಪೃಶ್ಯತೆಯನ್ನು ಖಂಡಿಸಿ ಚಳವಳಿಯೊಟ್ಟಿಗೆ ಗುರುತಿಸಿಕೊಂಡಿದ್ದರು. ಗೋಲ್ಡ್ ಮೆಡಲಿಸ್ಟ್ ಆಗಿದ್ದ ಕೆ.ರಾಮಯ್ಯ ಅವರೂ ನಮ್ಮೊಂದಿಗೆ ಸೇರಿಕೊಂಡರು. ಧರಣಿ, ಭೂ ಹೋರಾಟ, ದಲಿತರ ಮೇಲಿನ ದೌರ್ಜನ್ಯದ ವಿರುದ್ಧ ಮಾಡಿದ ಹೋರಾಟಗಳಿಗೆ ಲೆಕ್ಕವೇ ಇಲ್ಲ, ದಸಂಸಕ್ಕಾಗಿ ಅಸಂಖ್ಯಾತ ಕಾರ್ಯಕರ್ತರು ದುಡಿದಿದ್ದಾರೆ, ಮಡಿದಿದ್ದಾರೆ.

ಪ್ರಶ್ನೆ: ಅಂದು ಜನ ಮತ್ತು ನಿಮ್ಮಗಳ ನಡುವಿನ ಸಂಬಂಧ ಹೇಗೆ ಬೆಳೆಯುತ್ತಿತ್ತು? ದೌರ್ಜನ್ಯಗಳ ವಿರುದ್ಧ ಹೇಗೆ ಸಂಘಟಿಸುತ್ತಿದ್ರಿ?

ನಾವೆಲ್ಲ ಅತಿ ಮುತುವರ್ಜಿಯಿಂದ ಶಿಬಿರಗಳನ್ನು ಮಾಡುತ್ತಿದ್ದೆವು. ಊಟ ತಿಂಡಿ ಬಗ್ಗೆ ಯೋಚನೆ ಮಾಡದೆ ನಾವು ನಾವುಗಳೆ ಶಿಬಿರಾರ್ಥಿಗಳಿಗೆ ಅಡಿಗೆ ಮಾಡುತ್ತಾ ಅಂಬೇಡ್ಕರ್, ಲೋಹಿಯಾ, ಗಾಂಧಿ ಬಗ್ಗೆ ವಿಷಯಗಳನ್ನು ಚರ್ಚೆ ಮಾಡುತ್ತಿದ್ದೆವು. ಇದರಿಂದ ಮುಳ್ಳೂರು ನಾಗರಾಜ್, ವರದಯ್ಯ, ಹರಿಹರಾನಂದರಂತಹ ಯುವಕರು ದಲಿತ ಚಳವಳಿಯ ಒಡಲಿಗೆ ಸೇರಿದರು. ಕೋಲಾರ ಭಾಗದಲ್ಲಿ ಸಿ.ಜಿ.ಗಂಗಪ್ಪರವರ ನೇತೃತ್ವದಲ್ಲಿ ಬೆಲ್ಚಿ ಸೇರಿದಂತೆ ಹಲವಾರು ಬೀದಿ ನಾಟಕಗಳನ್ನ ಮಾಡ್ತಿದ್ವಿ, ಸಿದ್ದಲಿಂಗಯ್ಯರ ಹಾಡುಗಳನ್ನು ಮನೆಮಾತಾಗುವಂತೆ ಮಾಡಿದ್ವಿ, ಎಲ್ಲೇ ದೌರ್ಜನ್ಯ ನಡೆದರೂ ಗುಂಪುಗುಂಪಾಗಿ ಅಥವಾ ಒಂಟಿಯಾಗಿ ಹೋಗಿ ಅದರ ವಿರುದ್ಧ ನಿಲ್ತಾ ಇದ್ವಿ, ಇದೆಲ್ಲ ದಲಿತರಿಗೆ ಧೈರ್ಯ ಕೊಡ್ತು, ದಿನ ಕಳೆದಂತೆ ದಸಂಸ ದಲಿತರ ಮನಸ್ಸಿನಲ್ಲಿ ಧೈರ್ಯ ಮೂಡಿಸಿ, ಸ್ವಾಭಿಮಾನವನ್ನು ಪರಿಚಯಿಸ್ತು, ಮೇಲ್ಜಾತಿ ಮನಸ್ಸುಗಳಲ್ಲಿ ದಲಿತರನ್ನ ಅವಮಾನಿಸೋಕೆ ಭಯ ಸೃಷ್ಟಿಸಿತ್ತು. ಅಂದಿನ ಸರ್ಕಾರದ ಯೋಜನೆಗಳಾದ ಉಳುವವನೆ ಭೂ ಒಡೆಯ, ಭೂ ಸುಧಾರಣಾ ಕಾಯ್ದೆಯ ಹಿನ್ನೆಲೆಯಲ್ಲಿ ಹಲವು ಭೂ ಹೋರಾಟ ನಡೆಸಿದ್ವಿ. ಉದಾಹರಣೆಗೆ ನಾಗಸಂಧ್ರ ಭೂ ಹೋರಾಟದಲ್ಲಿ ಪೊಲೀಸರು ನಮ್ಮ ವಿರುದ್ಧ ಬಂದೂಕು ಹಿಡಿದು ನಿಂತಾಗ ನಮ್ಮ ಯುವಕರೆಲ್ಲ ಅಂಗಿ ಬಿಚ್ಚಿ ಸಾಲಾಗಿ ನಿಂತು 'ಹೊಡೆದರೆ ಎದೆಗೆ ಗುಂಡು ಹೊಡೆಯಿರಿ' ಅಂತ ನಿಂತಿದ್ವಿ. ಅಷ್ಟು ಬದ್ಧತೆ ಇತ್ತು.

ಪ್ರಶ್ನೆ: ಇಂತಹ ಬದ್ಧತೆಯುಳ್ಳ ದಲಿತ ಚಳವಳಿ ಇಂದು ಹಲವು ಬಣಗಳಾಗಿ ಒಡೆದುಹೋಗಿದೆ. ಇದಕ್ಕೆ ನಿಮ್ಮ ಪ್ರಕಾರ ಕಾರಣಗಳೇನು?

ದಲಿತ ಚಳವಳಿ ರಾಜಕೀಯ ನಡಿಗೆ ಆರಂಭಿಸಿದಾಗ ಮುಂಚೂಣಿ ನಾಯಕರುಗಳಲ್ಲಿ ಸ್ವಹಿತಾಸಕ್ತಿಗಳು ಮನೆ ಮಾಡಿ ಒಬ್ಬರ ಮೇಲೆ ಒಬ್ಬರಿಗೆ ವಿಶ್ವಾಸ ಹಾಳಾಯಿತು. ಒಂದು ಭಾಗ ಜನತಾ ಪಕ್ಷದೊಂದಿಗೆ ಮಾನಸಿಕವಾಗಿ ಸೇರಿಕೊಂಡಿತು. ಜನತಾ ಪಕ್ಷ ಬಿ.ಕೃಷ್ಣಪ್ಪರವರಿಗೆ ಬಿ ಫಾರಂ ಕೊಡದೆ ಇದ್ದಾಗ ಇರಿಸು ಮುರುಸಾಯಿತು. ಮತ್ತೊಂದು ಭಾಗ ಬಹಿರಂಗವಾಗಿಯೇ ಬಿಎಸ್‌ಪಿಯೊಂದಿಗೆ ಗುರುತಿಸಿಕೊಂಡಿತು. ಆದರೆ ಅದು ಬಿಜೆಪಿ ಜೊತೆ ಶಾಮೀಲಾಗಿ ಅಧಿಕಾರ ಹಿಡಿದಾಗ ಮತ್ತೆ ನಮಗೆ ಮುಜುಗರವಾಗಿ ದೂರವಾದೆವು. ಹೀಗೆ ಎಲ್ಲೂ ನಮಗೆ ಸೈದ್ಧಾಂತಿಕ ಸಂಗಾತಿಗಳು ಸಿಗದೇ ಇದ್ದಾಗ ನಾವೇ ರೈತ ಸಂಘದಂತಹ ಪ್ರಗತಿಪರರ ಜೊತೆಗೆ ಸೇರಿ ಪರ್ಯಾಯ ರಾಜಕೀಯ ಶಕ್ತಿ ಹುಟ್ಟು ಹಾಕುವ ಪ್ರಯತ್ನ ನಡೆಯಿತು. ಬಹುಶಃ ಇದು ಆರಂಭದಲ್ಲಿಯೇ ಆಗಿದ್ದರೆ ನಮ್ಮ ಚಳವಳಿಗೆ ಇಂತಹ ಗತಿ ಬರುತ್ತಿರಲಿಲ್ಲ, ನಂತರದಲ್ಲಿ ದಲಿತ ಚಳವಳಿ ಸಮಷ್ಟಿ ದೃಷ್ಟಿಕೋನವನ್ನು ಕಳೆದುಕೊಂಡು ಒಳಹಿತಾಸಕ್ತಿಗಳು ಆರಂಭವಾಗಿ ವಿಘಟನೆಯಾಯಿತು.

ಪ್ರಶ್ನೆ: ಸದಾಶಿವ ಆಯೋಗದ ಬಗ್ಗೆ ನಿಮ್ಮ ನಿಲುವೇನು?

ಸದಾಶಿವ ಆಯೋಗದ ವರದಿಯಲ್ಲಿ ಸಾಮಾಜಿಕ ನ್ಯಾಯವಿದೆ. ಆರಂಭದಲ್ಲಿಯೆ ದಸಂಸ ಎಡ-ಬಲದ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡಿದ್ದರೆ ಇಷ್ಟು ರಾದ್ಧಾಂತ ಆಗುತ್ತಿರಲಿಲ್ಲ. ಸ್ಪೃಶ್ಯರು ಒಗ್ಗಟ್ಟಾಗಿ ವರದಿಯ ವಿರುದ್ಧ ನಿಂತರು. ಆದರೆ ಅಸ್ಪೃಶ್ಯರಾದ ನಾವು ಒಗ್ಗಟ್ಟಾಗಲಿಲ್ಲ. ಚಳವಳಿಯ ಹಿನ್ನೆಲೆಯಿಂದ ಬಂದವರು ಒಂದು ಒಮ್ಮತಕ್ಕೆ ಬಂದು ಮತ್ತೆ ಒಗ್ಗಟ್ಟಾಗಿ ಸದಾಶಿವ ಆಯೋಗದ ನೆಪದಲ್ಲಾದರು ಈ ಎಡ-ಬಲ ಸಮಸ್ಯೆಯನ್ನು ಪರಿಹರಿಸಬೇಕಾಗಿದೆ. ಬಹಳ ಹಿಂದುಳಿದಿರುವ ಮಾದಿಗ ಸಮುದಾಯವನ್ನು ಮೇಲೆತ್ತಲು ಸಹೋದರರರೇ ಸಹಕರಿಸಬೇಕಿದೆ. ಈ ಒಗ್ಗಟ್ಟನ್ನು ಅಂಬೇಡ್ಕರರು ಸಾಯುವತನಕ ವಿರೋಧಿಸಿದ ಫ್ಯಾಸಿಸ್ಟ್ ಸಂತತಿಗಳ ವಿರುದ್ಧ ನಿಲ್ಲಲು ಬಳಸಿಕೊಳ್ಳಬಹುದು.

ಪ್ರಶ್ನೆ: ಬಾಬು ಜಗಜೀವನ ರಾಮ್ ಪ್ರಶಸ್ತಿಯನ್ನು ನೀವು ತಿರಸ್ಕರಿಸಿದಿರಿ. ಅದಕ್ಕೆ ಕಾರಣವೇನು?

ನಾವು ಅಂಬೇಡ್ಕರರನ್ನೇ ಪ್ರಧಾನವಾಗಿಟ್ಟುಕೊಂಡು ಚಳವಳಿ ಕಟ್ಟಿದ್ದು. ಅವರು ದಲಿತರ ಹಿತಾಸಕ್ತಿಗೆ ಪ್ರತಿ ಸಂದರ್ಭದಲ್ಲೂ ಕಟಿಬದ್ಧರಾಗಿದ್ದು ನಮಗೆ ಸ್ವಾಭಿಮಾನದ ಸಂಕೇತವಾಗಿದ್ದಾರೆ. ಸೈದ್ಧಾಂತಿಕವಾಗಿ ಅಂಬೇಡ್ಕರರು ಸ್ಪಷ್ಟವಾಗಿದ್ದರಿಂದ ಬಾಬು ಜಗಜೀವನ ರಾಮ್ ಅವರಿಗಿಂತ ಅಂಬೇಡ್ಕರರು ನನಗೆ ಹತ್ತಿರವಾಗಿದ್ದಾರೆ. ಹಾಗಾಗಿ ಆ ಪ್ರಶಸ್ತಿಯನ್ನು ಬಹಳ ಗೌರವಪೂರ್ವಕವಾಗಿಯೇ ತಿರಸ್ಕರಿಸಿದೆ.

ಪ್ರಶ್ನೆ: ಕಂಬಾಲಪಲ್ಲಿಯ ಪ್ರಕರಣ ಸೋ[...] ಬಂದಿದೆ. ಮುಂದಿನ ಹಾದಿ ಯಾವುದು?

ಕಂಬಾಲಪಲ್ಲಿ ದುರಂತದ ಹಿನ್ನೆಲೆಯಿಂದ ಪ್ರಜಾ[...] ವ್ಯವಸ್ಥೆಯಲ್ಲಿ ದಲಿತರ ಪರವಾಗಿರುವ ಎಲ್ಲಾ ಸಾಧ್[...] ಆದಷ್ಟೂ ಬಳಸಿಕೊಳ್ಳಬೇಕು. ಹೈ ಕೋರ್[...] ಸುಪ್ರೀಂಕೋರ್ಟಿಗೆ ಬಹಳಷ್ಟು ತೀರ್ಮಾನ ತೆಗೆದು[...] ಸ್ವತಂತ್ರವಿದೆ. ಈ ಪ್ರಕರಣದಿಂದ ಪಾಠ ಕಲಿತಿದ್ದೇವೆ[...] ಕೋರ್ಟಿನ ಹಂತದಿಂದಲೂ ನಾವು ಜಾಗೃತರಾಗ[...] ಎಂಬ ಪಾಠ ಅದು. ಅದಲ್ಲದೆ ಇಂತಹ ಪ್ರಕ[...] ಮರುಕಳಿಸದಂತೆ ರಾಜ್ಯದ ದಲಿತ[...] ಜಾಗೃತಗೊಳಿಸಬೇಕಿದೆ. ಇಂದಿನ ದಲಿತ ಯ[...] ಮೇಲ್ಜಾತಿಯ ಪ್ರಗತಿಪರರೊಂದಿಗೆ ಸೇರಿಕೊಂ[...] ಕೆಲಸವನ್ನು ಮಾಡಬೇಕಿದೆ.

ಪ್ರಶ್ನೆ: ಇಂದಿನ ದಲಿತ ರಾಜ[...] ಆದರ್ಶದಾಯಕವಾಗಿದೆಯಾ?

ಯಾವ ರಾಜಕಾರಣವೂ ಸರಿಯಿಲ್ಲ, ಅಂಬೆ[...] ನಂಬಿದ್ದು ಚಳವಳಿ ರಾಜಕಾರಣದಲ್ಲಿ, ಆದ್ದರಿಂದ ಚ[...] ರಾಜಕಾರಣವೇ ದಲಿತರಿಗೆ ನ್ಯಾಯ ಒದಗಿಸುತ್[...] ನೈತಿಕ ತಳಹದಿಯ ಮೇಲಿರುತ್ತದೆ. ನವ ಉದಾರಿ[...] ಜೊತೆಗೆ ಎಲ್ಲಾ ಪಕ್ಷಗಳೂ ಕೈಜೋಡಿಸಿ ಶೋ[...] ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿವೆ. [...] ಇಂದಿನ ಪಕ್ಷಗಳನ್ನು ದಲಿತರು ನಂಬಿಕೊಳ್ಳುವ [...] ಒಳ್ಳೆಯ ರಾಜಕಾರಣವನ್ನು ಹುಟ್ಟು ಹಾಕಬೇಕು[...] ಚಳವಳಿಯ ಹಿನ್ನೆಲೆಯಲ್ಲೇ ಆಗಬೇಕು. ಆ[...] ಕರ್ನಾಟಕದಲ್ಲಾದರೂ ದಲಿತ ಚಳವಳಿಯ[...] ಎಡಪಂಥೀಯರು ಸೇರಿ ಚಳವಳಿ ರಾಜಕಾರ[...] ಹಾಕಬೇಕು ಎನಿಸುತ್ತದೆ. ಇಲ್ಲದಿದ್ದರೆ ಮುಂದಿನ ಮ[...] ಪ್ರಜಾಪ್ರಭುತ್ವ ಮುಖವಾಡದ ಸರ್ವಾಧಿಕಾರ ರಾ[...] ಬೆಳೆಯುತ್ತದೆ.

ಪ್ರಶ್ನೆ: 'ಎಲ್ಲಾ ಬಣಗಳನ್ನೂ ಒಂದು ಮಾ[...] ಇದು ದೇವನೂರು ಮಹಾದೇವರ ಮಾತು. ಇದ[...] ಅಭಿಪ್ರಾಯ?

ಬಣಗಳು ಒಂದಾಗುತ್ತವೆ ಎನ್ನುವ ನಂಬಿಕೆ [...] ಅದಕ್ಕೆ ಬದಲಾಗಿ ಬಣಗಳಲ್ಲಿ ಗುರುತಿಸಿಕೊಳ್ಳದ[...] ಹಲವಾರು ಪ್ರಾಮಾಣಿಕ ದಲಿತರು ರಾಜ್ಯಾದ್ಯಂತ [...] ಅವರೆಲ್ಲ ಒಟ್ಟಾಗಿ ಒಂದು ಪರ್ಯಾಯ ದಲಿತ [...] ಕಟ್ಟಬಹುದು. ಇದಕ್ಕೆ ಯುವಕರು ಶಕ್ತಿ ತುಂ[...] ಅದರಲ್ಲಿ ದೇವನೂರರೂ ಒಬ್ಬರಾಗಿ ಭಾಗವಹಿಸ[...]


ಪ್ರಶ್ನೆ: ಇಷ್ಟು ದಿನದ ನಿಮ್ಮ ಅನುಭವದಲ್ಲಿ [...] ನಾಶಕ್ಕೆ ಕಂಡುಕೊಂಡಿರುವ ಪರಿಹಾರವೇನು?

ಅಸ್ಪೃಶ್ಯತೆ ತನ್ನ ಪಾಡಿಗೆ ತಾನು ಹೋಗು[...] ಹಿಂದೂ ಮೇಲ್ಜಾತಿ ಮನಸುಗಳು ಬರಿ ಬಾಯಿ[...] ಹೋಗಲಿ ಅಂತವೆ ಅಷ್ಟೆ. ಅದಕ್ಕೆ, [...] ಅನುಭವಿಸಿರುವವರೇ ಒಂದಾಗಿ ಅದರ ವಿರುದ್ಧ ನಿ[...] ಅದಕ್ಕಾಗಿಯೇ ಸದಾಶಿವ ಆಯೋಗದ ವರದಿಯನ[...] ಈಗ ಬಳಸಿಕೊಳ್ಳಬೇಕು. ನಾವೇ ಒಟ್ಟಾಗಿ [...] ಕಂಡುಕೊಳ್ಳಬೇಕು. ಆರ್ಥಿಕ ಸಮಾನ[...] ಹೋರಾಡಬೇಕು. ನಾವು ಅಸ್ಪೃಶ್ಯರಲ್ಲ ಎಂಬ [...] ಮೊದಲು ನಮ್ಮಲ್ಲಿ ಮೂಡಬೇಕು.

ಪ್ರಶ್ನೆ: ಅಂಬೇಡ್ಕರರು ಜಾತಿ ಪದ್ಧತಿ ಮತ್ತು [...] ನಾಶಕ್ಕೆ ಬುದ್ಧ ಧಮ್ಮವನ್ನು ಸ್ವೀಕರಿಸಿದರು. ಆದ[...] ದಲಿತ ಸ್ವಾಮೀಜಿಗಳು ಹಿಂದೂ ಧರ್ಮದಲ್ಲಿಯೇ [...] ಮುಂದುವರೆಯಬೇಕೆಂದು ಹೇಳುತ್ತಿದ್ದಾರೆ. ಇದು [...]

ಅಂಬೇಡ್ಕರ್ ಅವರು ನಾಗಪುರದಲ್ಲಿ ಮಾ[...] ಪ್ರತಿಯೊಂದು ಪದ, ವಾಕ್ಯಗಳನ್ನು ನಾವು ಪಾಲಿ[...] ಹಿಂದೂ ಧರ್ಮದಿಂದ ಹೊರಗಡೆಗೆ ಬಂದರೆ[...] ನಮಗೆ ಬಿಡುಗಡೆ ಇದೆ. ವೈಜ್ಞಾನಿಕವಾದ ಬುದ್ಧ ಧ[...] ಸ್ವೀಕರಿಸಿ ಹಿಂದೂ ಧರ್ಮದ ಧಾರ್ಮಿಕ ಚೌ[...] ನಾವು ಹೊರ ಬರಲೇಬೇಕು. ಅದರಲ್ಲೂ ನಮಗೆ [...] ಬುದ್ಧ ತುಂಬ ಹತ್ತಿರವಾಗಬೇಕು. ಆ ಮೂಲ[...] ಚಳವಳಿ ಇನ್ನೂ ಗಟ್ಟಿ ಆಗಬಹುದು.

ಹಾಲಕ್ಕಿ ಮತ್ತು ಕುಣಬಿಗಳಿಗೆ ಮೀಸಲಾತಿ ಮೋಸ!



ಹಾಲಕ್ಕಿ ವಕ್ಕಲು ಮತ್ತು ಕುಣಬಿ ಉತ್ತರ ಕನ್ನಡದ ...ವು ವಿಶಿಷ್ಟ ಬುಡಕಟ್ಟು ಪಂಗಡಗಳು. ಈ ಎರಡೂ ...ಸಮುದಾಯದ ತಾಯಿ ಬೇರು ಮಾತ್ರ ಒಂದೇ! ... ಈ ಜನಾಂಗದ ಮೂಲ. ಕಾಡಿನ ತುಂಡು ಭೂಮಿ ...ರಿ ಅಥವಾ ಕುಂಬ್ರಿ)ಯಲ್ಲಿ ಉತ್ತು-ಬಿತ್ತು-ಬೆಳೆ ತೆಗೆದು ...ಕಿದ ಸದ್ರಿ ಬೆಟ್ಟದ ಜೀವಗಳಿಗೆ ನಾಡಾಳುವ ...ರ್ಧರು, ಅವರ ಸಲಹೆಗಾರ ಪ್ರಭೃತಿಗಳು ನಿರಂತರವಾಗಿ ...-ವಂಚನೆ ಮಾಡುತ್ತಲೇ ಇದ್ದಾರೆ. ತಮ್ಮನ್ನು ಪರಿಶಿಷ್ಟ ...ಡಕ್ಕೆ ಸೇರಿಸಿ ಎಂಬ ಹಾಲಕ್ಕಿ-ಕುಣಬಿಗಳ ಕೂಗು ...ಮಾನಗಳಷ್ಟು ಹಳೆಯದು. ಶತಮಾನಗಳಿಂದ ಶೋಷಣೆ- ...ಕ್ಕೆ ತುತ್ತಾಗಿರುವ ವರ್ಗಕ್ಕೆ ಸಾಮಾಜಿಕ ನ್ಯಾಯ ...ಸುವುದು ಸರ್ಕಾರಗಳ ಆದ್ಯತೆಯ ಸಂಗತಿ ಆಗಬೇಕಿತ್ತು ... ಆಳುವವರು ಈ ಬುಡಕಟ್ಟುಗಳ ಅಧ್ಯಯನ- ...ಅಭಿಪ್ರಾಯ, ಸಮಿತಿ ರಚನೆ ಎಂದೆಲ್ಲ ಅನ್ಯಾಯ ...ಮುತ್ತಿರುವುದು ಘೋರವಾಗಿದೆ...

...ಸರ್ಕಾರಗಳ ನಿರಂತರ ಮೀಸಲಾತಿ ಮೋಸದಿಂದ ...ಟ್ಟಿರುವ ಕುಣಬಿ- ಹಾಲಕ್ಕಿಗಳೀಗ ತಮ್ಮ ...ನ್ಯಾಯಕ್ಕಾಗಿ ಬೀದಿಗಿಳಿದು ಪ್ರತಿಭಟಿಸಬೇಕಾದ ...ಅನಿವಾರ್ಯತೆಯಲ್ಲಿದ್ದಾರೆ. ಕುಣಬಿಗಳ ಅಧ್ಯಯನಕ್ಕೆ ಸರ್ಕಾರ ...ಚಿಸಿದ್ದ ಸಮಿತಿ ಕೊಟ್ಟಿರುವ ವರದಿಯಿದೆಯಲ್ಲ, ಅದು ...ಜನಾಂಗದ ಮೀಸಲಾತಿ ಕನಸಿಗೆ ಕಲ್ಲು ಹಾಕುವಂತಿದೆ. ...ಟಕ ವಿಶ್ವವಿದ್ಯಾಲಯದ ಪ್ರೊ. ಟಿ.ಟಿ. ಬಸವನಗೌಡ ...ತ್ವದ ಈ ಕಮಿಟಿಯ ಮುಖ್ಯಾಂಶ ಕಂಡೇ ...ವಾಗಿರುವ ಕುಣಬಿಗಳು ಜೋಯಿಡಾ ತಾಲ್ಲೂಕಿನ ...ನಗರ ಎಂಬಲ್ಲಿ ಈಚೆಗೊಂದು ದೊಡ್ಡ ಸಮಾವೇಶ ... ಆತಂಕ ತೋಡಿಕೊಂಡಿದ್ದಾರೆ; ಹೋರಾಟದ ...ಯೂ ಊದಿದ್ದಾರೆ.

...ದೇ ಹೊತ್ತಿಗೆ ಹಾಲಕ್ಕಿ ವಕ್ಕಲಿಗರೂ ಪರಿಶಿಷ್ಟ ... ಮೀಸಲಾತಿ ಬೇಡಿಕೆಗೆ ಸತತ ಹಿನ್ನಡೆ ಆಗುತ್ತಿರುವ ...ಚಿಂತೆಗೀಡಾಗಿದ್ದಾರೆ! ರಾಜ್ಯ ಸರ್ಕಾರ ಹಾಲಕ್ಕಿಗಳನ್ನು ... ಸೇರಿಸುವಂತೆ ಕೇಂದ್ರಕ್ಕೆ ಕಳಿಸಿದ್ದ ಶಿಫಾರಸ್ಸು ವಿವರಣೆ ... ವಾಪಸ್ ಬಂದಿದೆ. ರಾಜ್ಯ ಕೆಬಿನೆಟ್‌ನ ಪ್ರಸ್ತಾಪ ... ಒಪ್ಪಿಲ್ಲ, ಇದರರ್ಥ ಇಷ್ಟೇ; ಹಾಲಕ್ಕಿ ಹಾಗು ...ಗಳ ಹಾಡು-ಪಾಡಿನ ಬಗ್ಗೆ ತಾತ್ಸಾರ-ತಿರಸ್ಕಾರ ...ದಿರುವ ಅಧಿಕ ಪ್ರಸಂಗಿ ಪಂಡಿತರು ಆಳುವವರ ...ತಪ್ಪಿಸುತ್ತಿದ್ದಾರೆ. ಈ ಕಿತಾಪತಿಗೆ ತಡೆ ಹಾಕಿ ಹಾಲಕ್ಕಿ- ...ಗಳಿಗೆ ನ್ಯಾಯ ಒದಗಿಸಬೇಕಿದ್ದ ದೋಖಾ ಮಂತ್ರಿ ...ಪಾಂಡೆ, ಸೀನಿಯರ್ ಸಂಸದನೆಂಬ ಅಹಂಕಾರ ...ರಿಸಿಕೊಂಡಿರುವ 'ಜೂನಿಯರ್ ಬುದ್ಧಿಮಟ್ಟದ' ...ಗ್ಡೆ ಮತ್ತು ಮೊದ್ಮಣಿ ಶಾಸಕರಿಗೆ ಖಾಲಿಬರಡು ...ಕಾರಣವೇ ಮುಖ್ಯವಾಗಿ ಹೋಗಿದೆ! ಇವರೇ ಕಾಡಿನ ... ಪ್ರಥಮ ಶತ್ರುಗಳು.

...ಕುರಂತ ಎಂದರೆ, ಜಿಲ್ಲೆಯ ಸೋಕಾಲ್ಡ್ ...ನಾಯಕರುಗಳಿಗೆ ಹಾಲಕ್ಕಿ ಮತ್ತು ಕುಣಬಿಗಳ ಬದುಕು- ...ರ ಪರಿಕಲ್ಪನೆಯೇ ಇಲ್ಲ, ಈ ಆದಿವಾಸಿಗಳಿಗೆ ... ಜೀವ-ಜೀವನ! ಕಾಡೇ ದೇವ-ದೈವ; ಬೆಟ್ಟದ ... ಗಿಡ-ಮರ-ಪ್ರಾಣಿ-ಪಕ್ಷಿ-ಹೊಳೆ-ತೊರೆಗಳೇ ಕಷ್ಟ- ... ಬಂಧು-ಮಿತ್ರರು. ಇವತ್ತಿಗೂ ಹಾಲಕ್ಕಿಗಳಾಗಲಿ ... ಕುಣಬಿಗಳಾಗಲಿ ಬೆಟ್ಟ ಬಿಟ್ಟು ಬದುಕಲು ಸಿದ್ಧರಿಲ್ಲ, ...ಎರಡೂ ಬುಡಕಟ್ಟುಗಳು ಕಾಡಿನ ಜಮೀನನ್ನು ...ಸಾಯಕ್ಕೆ ಯೋಗ್ಯ ಮಾಡಿಕೊಂಡು ಬದುಕು ...ತ್ತಿವೆ. ಇದೇ ಈ ಮಂದಿಯ ತುತ್ತಿನಾಧಾರ. ಈ ...ದಿನ ಜತೆ-ಜತೆಗೆ ಕಾಡಿನ ಪ್ರಾಣಿ-ಪಕ್ಷಿ-ಮರ- ...ಗಳಿಗೆ ಒಡನಾಡಿದವರು ಹಾಲಕ್ಕಿ-ಕುಣಬಿಗಳು. ...ವತ್ತಿಗೂ ಕುಣಬಿ ಹಾಗು ಹಾಲಕ್ಕಿ ಕುಟುಂಬಗಳಿಗೆ

ಎರಡೆರಡು ಮನೆಗಳಿವೆ. ಮನೆಯಿಲ್ಲದವರು ಹೊಲ-ಗದ್ದೆಗಳಲ್ಲಿ ಮಾಳದಾಕಾರದ ಗುಡಿಸಲು ಕಟ್ಟಿಕೊಂಡಿದ್ದಾರೆ. ಒಂದು ಪೇಟೆಯ ವ್ಯವಹಾರಕ್ಕೆ ಅನುಕೂಲವಾಗಲೆಂದು ಕಟ್ಟಿದ ಊರ ಮನೆಯಾದರೆ, ಮತ್ತೊಂದು ಕೃಷಿಗೆ ನೆರವಾಗುವ ಬೆಟ್ಟದ ಮನೆ. ಹಾಲಕ್ಕಿಗಳು ಬೇಟೆ ದೇವರು, ಹುಲಿ ದೇವರು, ನಾಗ ದೇವರು, ಬೀರ ದೇವರುಗಳ ಆರಾಧಕರು. ಇಂಥದೇ ಮಾದರಿಯ ದೈವಬಂಧುಗಳು ಕುಣಬಿಗಳಿಗೂ ಇದ್ದಾರೆ. ಎತ್ತಿಂದೆತ್ತ ತರ್ಕ-ವಿಶ್ಲೇಷಣೆ-ಅಧ್ಯಯನ ನಡೆಸಿದರೂ ಹಾಲಕ್ಕಿ ವಕ್ಕಲಿಗರು ಮತ್ತು ಕುಣಬಿಗಳು ಬೇರೆ-ಬೇರೆ ಬುಡಕಟ್ಟು ಅನ್ನಿಸುವುದೇ ಇಲ್ಲ, ಇವೆರಡೂ ಒಳ ಪಂಗಡಗಳಲ್ಲ. ಇವಕ್ಕೆ ಒಂದೇ ಮೂಲ. ಕರಾವಳಿ ಭಾಗದಲ್ಲಿರುವ ಹಾಲಕ್ಕಿಗಳನ್ನು ಮೇಲ್ವರ್ಗದ ಜನ ಇವತ್ತಿಗೂ 'ಕುಣಬಿ' ಎಂದೇ ಗುರುತಿಸುತ್ತಾರೆ.

ಬೆಟ್ಟದ ತಪ್ಪಲಿನಲ್ಲಿದ್ದ 'ಕುಣಬಿ'ಗಳನ್ನು ಕರಾವಳಿಗೆ ದುಡಿಮೆಗೆಂದು ಕರೆ ತಂದವರು ಮೇಲ್ವರ್ಗದ ಮಂದಿ. ಇಲ್ಲವರು ಹಾಲಕ್ಕಿಗಳಾದ ಬಗ್ಗೆ ಜಿಜ್ಞಾಸೆಯಿದೆ. ಹಾಗೆಯೇ ವಕ್ಕಲಿಗರಲ್ಲಿ ಉಪ-ಪಂಗಡಗಳೂ ಆಗಿವೆ. ಕರೆ ವಕ್ಕಲು, ಕೊಟ್ಟೆ ವಕ್ಕಲು, ಗೊಮೊಕ್ಕಲು, ಗೊಂಡ ವಕ್ಕಲು, ಕುಂಚ ವಕ್ಕಲು ಎಂಬೆಲ್ಲ ಉಪ ಪಂಗಡಗಳಿವೆ ಹಾಲಕ್ಕಿ ವಕ್ಕಲಿಗರಲ್ಲಿ, ಹಾಗಂತ ಎಲ್ಲೂ ಕುಣಬಿ ಒಕ್ಕಲು ಎಂಬ ಪ್ರಭೇದ ಇಲ್ಲ, ಸಂಸ್ಕೃತಿ ಅಧ್ಯಯನಕಾರರ ಪ್ರಕಾರ 'ಕುಣಬಿ' ಎಂಬ ಪದ ಬಂದಿರುವುದೇ ಕುಂಬ್ರಿ (ಕುಮರಿ) ಎಂಬ ಕುಲಕಸುಬಿನಿಂದ. ಕುಂಬ್ರಿ ಎಂದರೆ ಬೆಟ್ಟದ-ಗುಡ್ಡದ ಇಳಿಜಾರಿನಲ್ಲಿ ಮಾಡಿಕೊಂಡ ಕೃಷಿ ಯೋಗ್ಯ ಜಮೀನು. ಕುಂಬ್ರಿ ಬೇಸಾಯದಲ್ಲಿ ರಾಗಿಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದರು. 'ರಾಗಿ ಅಂಬ್ಲಿ'ಯೇ ಕುಣಬಿ ಅಥವಾ ಹಾಲಕ್ಕಿಗಳ ಪ್ರಮುಖ ಊಟ! ಕ್ರಮೇಣ ಕುಣಬಿಗಳು ಈ ಬೆಟ್ಟದ ಇಳಿಜಾರು (ಕುಂಬ್ರಿ)ಗಳಲ್ಲಿ ತೆಂಗು-ಅಡಿಕೆ-ಬಾಳೆ-ಭತ್ತ ಬೆಳೆಯತೊಡಗಿದರು.

ಕುಣಬಿ ಮತ್ತು ಹಾಲಕ್ಕಿಗಳ ಮೂಲದ ಬಗ್ಗೆ ಹಲವು ದಂತಕತೆ- ವಾದಗಳಿವೆ. ಆದರೆ ಇದೆಲ್ಲದರಲ್ಲಿ ಸತ್ಯಕ್ಕೆ ಹತ್ತಿರವಿರುವುದು- ಕುಂಬ್ರಿ ಬೇಸಾಯದವರು 'ಕುಣಬಿ'ಗಳಾಗಿದ್ದಾರೆ ಮತ್ತು ಹಾಲಿನಂಥ ಅಕ್ಕಿ ಬೆಳೆಯುತ್ತಿದ್ದವರು 'ಹಾಲಕ್ಕಿ'ಗಳಾಗಿದ್ದಾರೆಂಬ ತರ್ಕಗಳು. 1883ರಲ್ಲಿ ಬಂದ ಬ್ರಿಟಿಷ್ ಆಡಳಿತದ ಗೆಜೆಟ್‌ನಲ್ಲಿ 'ಹಾಲ್ಲೊಕ್ಕಿ ವೊಕ್ಕಲು' ಎಂಬ ಪದ ಬಳಸಲಾಗಿದೆ. ಇಂಗ್ಲಿಷ್‌ನ ಈ ಗೆಜೆಟ್ ಅನ್ನು 1984ರಲ್ಲಿ ವೆಂಕಟ ರಂಗೋ ಕಟ್ಟಿ ಕನ್ನಡೀಕರಿಸಿದ್ದಾರೆ. ಅವರೂ 'ಹಾಲ್ಲೊಕ್ಕಿ ವೊಕ್ಕಲು' ಎಂದೇ ತರ್ಜುಮೆ ಮಾಡಿದ್ದಾರೆ. 1940ರಲ್ಲಿ ಇಂದಿನ ಗುಜರಾತ್‌ನ ಪಂಚಮಹಲ್ ಜಿಲ್ಲೆಯ ಮಿರಕೇಡಿ ಎಂಬಲ್ಲಿ ಆದಿವಾಸಿಗಳ ರಾಷ್ಟ್ರೀಯ ಸಮ್ಮೇಳನ ನಡೆದಾಗ ಅದರಲ್ಲಿ ಜಿಲ್ಲೆಯ ರೈತ-ಕಾರ್ಮಿಕ ನಾಯಕರೂ ಹಾಲಕ್ಕಿ-ಕುಣಬಿಗಳ ಬದುಕು-ಬವಣೆ ನಿಕಟವಾಗಿ ಕಂಡವರೂ ಆಗಿದ್ದ ದಿನಕರ ದೇಸಾಯಿ ಭಾಗವಹಿಸಿದ್ದರು. ಆ ಸಮ್ಮೇಳನದಲ್ಲಿ ಹಾಲಕ್ಕಿಗಳ ಕುರಿತು ಅಧ್ಯಯನ ಪೂರ್ಣ ಪ್ರಬಂಧವನ್ನು ದೇಸಾಯರು ಮಂಡಿಸಿದ್ದರು. ಅದರಲ್ಲಿ ಆತ ಹಾಲಕ್ಕಿ 'ವಕ್ಕಲು' ಎಂದೇ ಗಟ್ಟಿ ಧ್ವನಿಯಲ್ಲಿ ಹೇಳಿದ್ದರೇ ಹೊರತು ಹಾಲಕ್ಕಿ 'ಒಕ್ಕಲು' ಎಂದು ಹೆಸರಿಸಿರಲಿಲ್ಲ!

ದೇಸಾಯರ ಈ ನಿಲುವಿನಲ್ಲಿ ದೂರದೃಷ್ಟಿ-ಸೂಕ್ಷ್ಮಜ್ಞತೆಯಿತ್ತು, ಈ ಕಾಡಿನ ಮಕ್ಕಳನ್ನು ಹಾಲಕ್ಕಿ 'ಒಕ್ಕಲು' ಎಂದು ಕರೆದರೆ, ಮುಂದೊಂದು ದಿನ ತಾಂತ್ರಿಕ-ಆಡಳಿತಾತ್ಮಕ ಬಿಕ್ಕಟ್ಟಿಗೆ ಸಿಲುಕುತ್ತಾರೆಂಬ ಯೋಚನೆ ದೇಸಾಯರಲ್ಲಿದ್ದಿರಬಹುದು. ಆದರೂ ರೂಢಿಯಲ್ಲಿ ಹಾಲಕ್ಕಿ 'ವಕ್ಕಲು' ಹಾಲಕ್ಕಿ ಒಕ್ಕಲಾಗಿಯೇ ಹೋದರು. ಎಲ್ಲ ಕಡೆಯೂ ವಕ್ಕಲು ಬದಲಿಗೆ ಒಕ್ಕಲು ಶಬ್ದವೇ ಹಾಲಕ್ಕಿ ಜತೆ ಸೇರಿಕೊಂಡು ಬಿಟ್ಟಿತು. ಇದೇ ಇವತ್ತು ಹಾಲಕ್ಕಿಗಳ ಮೀಸಲಾತಿ ಬೇಡಿಕೆಗೆ ಗಂಡಾಂತರಕಾರಿ ಆಗಿಹೋಗಿದೆ! 'ಒಕ್ಕಲು' ಶಬ್ದದ ಗೊಂದಲದಿಂದಾಗಿಯೇ ಕೇಂದ್ರ ಸರ್ಕಾರ ಕರ್ನಾಟಕ ಕಳಿಸಿದ್ದ ಹಾಲಕ್ಕಿಗಳ ಎಸ್ಟಿಗೆ ಸೇರಿಸುವ ಪ್ರಸ್ತಾವನೆ ಒಪ್ಪಿಕೊಳ್ಳದಿರಲು ಪ್ರಮುಖ ಕಾರಣ!

ಇದಕ್ಕೆ ಸರ್ಕಾರಿ ಪಂಡಿತರು ಜುಜುಬಿ ಸಬೂಬು ಹೇಳುತ್ತಿದ್ದಾರೆ. ಹಾಲಕ್ಕಿ ಒಕ್ಕಲಿಗರು ಈಗೀಗ ಹಾಲಕ್ಕಿ ಗೌಡರೆಂದು ಗುರುತಿಸಲ್ಪಡುತ್ತಿದ್ದಾರೆ. ಈ ಹಾಲಕ್ಕಿ ಗೌಡರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದರೆ ನಾಳೆ ರಾಜ್ಯದ ವಿವಿಧ ಗೌಡರೂ ಎಸ್ಟಿ ಬೇಡಿಕೆ ಮಂಡಿಸಬಹುದೆಂಬುದು ಅಧಿಕಾರಶಾಹಿಯ ಕುತರ್ಕ. ಇವರಿಗೆಲ್ಲ ಬುದ್ಧಿ ಹೇಳುವ- ತಿಳಿವಳಿಕೆ ಕೊಡುವ ವ್ಯವಹಾರಿಕ ಬುದ್ಧಿಮತ್ತೆ ಜಿಲ್ಲೆಯ ನಾಲಾಯಕ್ ಸಂಸದ ಅನಂತ್ಮಾಣಿಗೆ ಇಲ್ಲ; ಮಂತ್ರಿ ದೇಶಪಾಂಡೆಗಂತೂ ಇಂಥ ಸೂಕ್ಷ್ಮತೆ ಅರ್ಥವೇ ಆಗದು ಬಿಡಿ.

ಹಾಲಕ್ಕಿಗಳು ಮೂಲತಃ 'ಒಕ್ಕಲು' ಅಲ್ಲ 'ವಕ್ಕಲು' ಎಂದು ಸಮರ್ಥಿಸುವುದಕ್ಕೆ ಸುಮಾರು 70-80 ವರ್ಷದ ಹಿಂದೆಯೇ ದಿನಕರ ದೇಸಾಯಿ ಆದಿವಾಸಿಗಳ ಸಮ್ಮೇಳನದಲ್ಲಿ ಮಂಡಿಸಿದ ಹಾಲಕ್ಕಿ ವಕ್ಕಲುಗಳ ಬಗೆಗಿನ ಪ್ರಬಂಧ ಒಂದೇ ಸಾಕು. ಇದಕ್ಕೆ ದೇಸಾಯರಿಗೆ ಆಧಾರವಾಗಿದ್ದು 1883 ಬ್ರಿಟಿಷ್ ಗೆಜೆಟ್‌ನ 'ವೊಕ್ಕಲು' ಉದ್ಧರಣೆ! ಜಿಲ್ಲೆಯ ಖಾಲಿ ಬುರುಡೆಯ ರಾಜಕಾರಣಿಗಳಿಗೆ ದೇಸಾಯರ 'VAKKALS The Aboriginals of Kanara' ಎಂಬ ಪುಸ್ತಕವಾಗಲಿ, ಹಾಲಕ್ಕಿ ವಕ್ಕಲಿಗರ ಬಗ್ಗೆ ಆಳವಾಗಿ ಅಧ್ಯಯನ ನಡೆಸಿರುವ ಚಿಂತಕ-ಸಾಹಿತಿ ವಿಷ್ಣು ನಾಯ್ಕರ 'ದುಡಿಯುವ ಕೈಗಳ ಹೋರಾಟದ ಕತೆ' ಅಥವಾ 'ಹಾಲಕ್ಕಿಗಳು: ಒಂದು ಅಧ್ಯಯನ' ಎಂಬ ಗ್ರಂಥ ಓದಿ ಅರ್ಥೈಸಿಕೊಳ್ಳುವ, ಆ ಮೂಲಕ ಕೇಂದ್ರದ ಅಧಿಕಾರಶಾಹಿಗೆ ಹಾಲಕ್ಕಿಗಳ ಎಸ್ಟಿ ಬೇಡಿಕೆ ನ್ಯಾಯೋಚಿತ ಎಂದು ವಾದಿಸುವ ಯೋಗ್ಯತೆ ಎಲ್ಲಿದೆ?

ದೇಸಾಯಿ ಮತ್ತು ವಿಷ್ಣು ನಾಯ್ಕರು ಹಾಲಕ್ಕಿಗಳ ಬಗ್ಗೆ ಬರೆದಿರುವ ಗ್ರಂಥಗಳೇ ಸಾಕು ಆ ಜನಾಂಗ ಅಪ್ಪಟ ಪರಿಶಿಷ್ಟ ಪಂಗಡದವರೆಂದು ಧೈರ್ಯವಾಗಿ ಹೇಳಲು! ಈಗ ಕರ್ನಾಟಕದ ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಮೀಸಲಾತಿ ಸೌಲಭ್ಯ ಪಡೆಯುತ್ತಿರುವ ಜನಾಂಗ ಎಲ್ಲವೂ ಕಾಡು ಮೂಲದವುಗಳೇ. ಇವರೆಲ್ಲರೂ ಕಾಡಿನ ಸಂಸ್ಕೃತಿ-ಸಂಸ್ಕಾರ ಸೇರಿದ ರೀತಿ-ರಿವಾಜಿನವರು; ಕಾಡಲ್ಲಿ ಬೇಟೆಯಾಡುವ, ಕೃಷಿ ನಡೆಸುವ, ಪ್ರಾಣಿ-ಪಕ್ಷಿ-ಹೊಳೆ-ಗಿಡ-ಗಂಟೆಗಳೊಂದಿನ ಸಹಜೀವನ ನಡೆಸುವವರು. ಇದೇ 'ಕುಲಕ್ಕೆ' ಸೇರಿದವರು ಉತ್ತರ ಕನ್ನಡದ ಹಾಲಕ್ಕಿ ಹಾಗು ಕುಣಬಿಗಳು. ಈಗ ಎಸ್ಟಿ ಮೀಸಲಾತಿಯಲ್ಲಿರುವ ಬಹುತೇಕ ಜನಾಂಗದ ಸಂಪ್ರದಾಯ-ದೈನಂದಿನ ಬದುಕಿನ ಕ್ರಮಕ್ಕೂ ಜಿಲ್ಲೆಯ ಕುಣಬಿ-ಹಾಲಕ್ಕಿಗಳ ಹಾಡು-ಪಾಡಿಗೂ ಹಲವು ಸಾಮ್ಯತೆಯಿದೆ.

ಇದೆಲ್ಲ ಮೊಟ್ಟಮೊದಲು ಅರ್ಥವಾಗಬೇಕಿರುವುದು ಜಿಲ್ಲೆಯ ಸಚಿವ-ಸಂಸದ-ಶಾಸಕ ಶಿಖಾಮಣಿಗಳಿವೆ. ಅವರೆಲ್ಲ ಒಂದೆಡೆ ಸೇರಿ ಹಾಲಕ್ಕಿ-ಕುಣಬಿ ಪರಿಶಿಷ್ಟ ಪಂಗಡಕ್ಕೆ ಸೇರಲು ಯಾಕೆ ಅರ್ಹರೆಂಬುದು ಟಿಪ್ಪಣಿ ಮಾಡಿಕೊಂಡು ರಾಜ್ಯ ಸರ್ಕಾರದ ದೊರೆಗಳಿಗೆ-ಅಧಿಕಾರಿಗಳಿಗೆ ಅರುಹಬೇಕಿದೆ. ರಾಜ್ಯ ಸರ್ಕಾರದ ಪ್ರಭೃತಿಗಳು ಕೇಂದ್ರದ ಅಧಿಕಾರಸ್ಥರಿಗೆ, ಅವರ ದಾರಿ ತಪ್ಪಿಸುವ ಅಧಿಕಾರಶಾಹಿಗೆ ಹಾಲಕ್ಕಿ-ಕುಣಬಿಗಳ ಎಸ್ಟಿ ಬೇಡಿಕೆ ಮನದಟ್ಟು ಮಾಡಬೇಕಿದೆ.

ಪಕ್ಕದ ಗೋವಾ ರಾಜ್ಯದ ಕುಣಬಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿರುವ ಕೇಂದ್ರದ ಪಂಡಿತರಿಗೆ ಇದೇ ಬುಡಕಟ್ಟಿಗೆ ಸೇರಿದ ಕರ್ನಾಟಕದ ಹಾಲಕ್ಕಿ ಹಾಗು ಕುಣಬಿಗಳನ್ನು ಎಸ್ಟಿ ಎಂದು ಒಪ್ಪಲು ಯಾವ ಧಾಡಿ?! ಇದೊಂದೇ ಸ್ಪಷ್ಟನಾ ರಾಜ್ಯ ಸರ್ಕಾರದ ಸರದಾರರಿಗೆ ಕೇಂದ್ರದ ದ್ವಂದ್ವದಾರರ ಕಿವಿ ಹಿಂಡಲು?! ಅಧ್ಯಯನ ಸಮಿತಿ-ತಜ್ಞರ ಅಭಿಪ್ರಾಯ ಎಂದೆಲ್ಲ ವ್ಯರ್ಥ ಕಾಲಹರಣ ಮಾಡಿ ಪರಿಶಿಷ್ಟ ವರ್ಗಕ್ಕೆ ನ್ಯಾಯೋಚಿತವಾಗಿ ಸೇರಬೇಕಾದವರ ಬದುಕಿನ ಹಕ್ಕು ಕಸಿದುಕೊಂಡ ಪಾಪ ಜಿಲ್ಲೆಯ ಸಚಿವ-ಸಂಸದ-ಶಾಸಕರಿಗೆ ತಟ್ಟದೆ?!


● ನಹುಷ




ಕುಣಬಿ






ಹಾಲಕ್ಕಿ ವಕ್ಕಲಿಗರು...



'ಕಿಸ್ ಆಫ್ ಲವ್' ಮತ್ತು ರಾಜಕೀಯ

ಇತ್ತೀಚೆಗೆ ಭಾರತದಲ್ಲಿ 'ಕಿಸ್' ಎಂಬ ಪದದ ಸುತ್ತ ಚರ್ಚೆಗಳು ನಡೆಯುತ್ತಿವೆ. ಯಾಕೆಂದರೆ ಈ 'ಕಿಸ್' ಪದದೊಂದಿಗೆ ರಾಜಕೀಯ, ನೈತಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಆಯಾಮಗಳು ಬೆಸೆದುಕೊಂಡಿವೆ. 'ಕಿಸ್' ವಿಷಯದಲ್ಲಿ ನನ್ನ ಅನುಭವ ಅಥವಾ ಅನನುಭವ ಅದೆಷ್ಟೇ ಇದ್ದರೂ ಒಂದು 'ಕಿಸ್' ವ್ಯಕ್ತಿಯ ವ್ಯಕ್ತಿತ್ವವನ್ನೇ ರೂಪಿಸುತ್ತದೆ ಎಂಬುದನ್ನಂತೂ ಬಲ್ಲೆ. ಆದರೆ 'ಕಿಸ್' ಎಂಬುದೇ ಈಗ ಕೇರಳ ರಾಜ್ಯವನ್ನೇ ಆವರಿಸಿರುವುದು ಸೋಜಿಗವಾಗಿದೆ.

'ಗಾಡ್ಸ್ ಓನ್ ಕಂಟ್ರಿ' (ದೇವತೆಗಳ ಸ್ವಂತ ನಾಡು) ಎಂದು ಬಣ್ಣಿಸಿಕೊಳ್ಳುವ, ಪುರಾಣಗಳಲ್ಲಿ ದೇವತೆಗಳ ಲೈಂಗಿಕ ಕ್ರಿಯೆಗಳ ಬಗ್ಗೆ ಸಾಕಷ್ಟು ಕತೆಗಳಿರುವಾಗ, ಕೇರಳ ರಾಜ್ಯದಲ್ಲಿ 'ಕಿಸ್'ಗೆ ಅವಕಾಶವೇ ಇಲ್ಲ! ಇದೆಲ್ಲ ಪ್ರಾರಂಭವಾಗಿದ್ದು ಕ್ಯಾಲಿಕಟ್ ನಗರದಲ್ಲಿ. ಕಾಂಗ್ರೆಸ್ ಪಕ್ಷಕ್ಕೆ ಸೇರಿರುವ ಚಾನೆಲ್ ಒಂದರಲ್ಲಿ ಕೆಲಸ ಮಾಡುವ ಆದರೆ ಸಂಘಪರಿವಾರದೊಂದಿಗೆ ಗುರುತಿಸಿಕೊಂಡಿರುವ ಪತ್ರಕರ್ತನೊಬ್ಬ ಡೌನ್ ಟೌನ್ ಎಂಬ ಹೋಟೆಲಿನಲ್ಲಿ ಯುವಜನಾಂಗದ ಇಬ್ಬರು ಮುತ್ತಿಕ್ಕುತ್ತಿರುವುದನ್ನು ತನ್ನ ಹಿಡನ್ ಕ್ಯಾಮೆರಾದಲ್ಲಿ ಸೆರೆ ಹಿಡಿದು ಆ ಹೋಟೆಲ್‌ನಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ ಎಂಬಂತೆ ವರದಿ ಮಾಡಿದ.

ಈ ವರದಿ ಪ್ರಸಾರಗೊಳ್ಳುತ್ತಲೇ ಬಿಜೆಪಿಯ ಅಂಗ ಸಂಘಟನೆಯಾದ ಯುವ ಮೋರ್ಚಾ ಡೌನ್ ಟೌನ್ ಹೋಟೆಲ್ ಮೇಲೆ ದಾಳಿ ಮಾಡಿ ಅದನ್ನು ನಾಶಪಡಿಸಿತು. ಡೌನ್ ಟೌನ್ ಹೋಟೆಲ್‌ನ ಮಾಲೀಕ ಮುಸಲ್ಮಾನ ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ಈ ಹಿಂದೆ ಇದೇ ತರಹ ಆಧಾರರಹಿತ ಗಾಳಿ ಸುದ್ದಿಗಳನ್ನು ಆಧರಿಸಿಯೇ ಕ್ಯಾಲಿಕಟ್‌ನಲ್ಲಿನ ಹಲವಾರು ಮುಸ್ಲಿಮ್ ಮಾಲೀಕತ್ವದ ಹೋಟೆಲ್‌ಗಳ ಮೇಲೆ ದಾಳಿಗಳು ನಡೆದಿವೆ.

ಇದೇ ತರಹ ಕಳೆದ ವರ್ಷ ವಿಬ್ಗಯಾರ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಸಮಯದಲ್ಲೂ ಸುಳ್ಳು ಸುದ್ದಿಗಳನ್ನು ಸಂಘಪರಿವಾರಿಗಳು ಹಬ್ಬಿಸಿದ್ದರು. ಹೋದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಹಲವು ಮತಗಳನ್ನು ಮಾತ್ರ ಪಡೆಯುವಲ್ಲಿ ಯಶಸ್ವಿಯಾಗಿದ್ದ ವಕೀಲ ಗೋಪಾಲಕೃಷ್ಣನ್ ಎಂಬಾತ ಕಾಶ್ಮೀರದಲ್ಲಿ ಮಾನವ ಹಕ್ಕುಗಳನ್ನು ಕುರಿತಂತೆ ತಯಾರಿಸಲಾಗಿದ್ದ ಸಾಕ್ಷ್ಯಚಿತ್ರವನ್ನು ಪಾಕಿಸ್ತಾನಿಗಳು ನಿರ್ಮಿಸಿದ್ದಾರೆ ಎಂದು ಆರೋಪಿಸಿದ್ದ. ಆದರೆ ವಾಸ್ತವವಾಗಿ ಖ್ಯಾತ ಸಿನಿಮಾ ನಿರ್ದೇಶಕ ಅಡೂರ್ ಗೋಪಾಲಕೃಷ್ಣನ್ ಅವರು ಅಧ್ಯಕ್ಷರಾಗಿರುವ, ಶ್ಯಾಮ್ ಬೆನೆಗಲ್ ತರಹದ ಹೆಸರಾಂತ ನಿರ್ದೇಶಕರು ಸದಸ್ಯರಾಗಿರುವ ಪಬ್ಲಿಕ್ ಸರ್ವಿಸ್ ಬ್ರಾಡ್‌ಕಾಸ್ಟಿಂಗ್ ಟ್ರಸ್ಟ್ ಆ ಸಾಕ್ಷ್ಯ ಚಿತ್ರವನ್ನು ನಿರ್ಮಿಸಿತ್ತು. ಈಗಂತೂ ಮೋದಿಯೇ ಪ್ರಧಾನಿ ಆಗಿರುವಾಗ ಹಿಂದೂ ಮೂಲಭೂತವಾದಿಗಳಿಗೆ ಧೈರ್ಯ ಬಂದಿದೆಯಲ್ಲದೆ ಅವರೆಲ್ಲ ಇಂತಹದ್ದೇ ಸುಳ್ಳುಗಳನ್ನು ಪ್ರಚಾರ ಮಾಡುವುದರಲ್ಲಿ ತಲ್ಲೀನರಾಗಿದ್ದಾರೆ.

ಧರ್ಮ ಮತ್ತು ರಾಷ್ಟ್ರೀಯತೆ ನೆಪದಲ್ಲಿ ಈಗ ಲವ್ ಮತ್ತು ಕಿಸ್ ಪದಗಳನ್ನು ಉಪಯೋಗಿಸಿ ನೈತಿಕ ಪೊಲೀಸ್‌ಗಿರಿಯನ್ನು ಪ್ರಾರಂಭಿಸಲಾಗಿದೆ. ಆದರೆ ಯಾವುದನ್ನು ಇವರೆಲ್ಲ ಭಾರತೀಯ ಸಂಸ್ಕೃತಿ ಎಂದು ಕರೆಯುತ್ತಿದ್ದಾರೋ ಅದು ಭಾರತದ್ದಲ್ಲವೇ ಅಲ್ಲ, ಬದಲಾಗಿ ಬ್ರಿಟಿಷರ ವಿಕ್ಟೋರಿಯನ್ ಕಾಲದ್ದು. ಅದಕ್ಕೆ ಆಮೇಲೆ ಬರೋಣ.

ಕ್ಯಾಲಿಕಟ್ ಹೋಟೆಲ್ ಮೇಲೆ ದಾಳಿ ನಡೆದ ನಂತರ ಫ್ರೀ ಥಿಂಕರ್ಸ್ ಎಂಬ ಸಂಘಟನೆ 'ಕಿಸ್ ಆಫ್ ಲವ್' ಪ್ರತಿಭಟನೆಗೆ ಕರೆ ಕೊಟ್ಟಿತು. ಇಂಟರ್‌ನೆಟ್‌ನಲ್ಲಿ ಸಕ್ರಿಯರಾಗಿರುವ ಈ ಗುಂಪಿನಲ್ಲಿ ಹೆಚ್ಚಾಗಿ ಯುವ ಜನಾಂಗದವರೇ ಇದ್ದಾರೆ. ಅವರೆಲ್ಲ ಬೀದಿಗಿಳಿದದ್ದು ಪ್ರಾಯಶಃ ಇದೇ ಮೊದಲನೆ ಬಾರಿಗೆ. ಅವರ ಈ ಪ್ರತಿಭಟನೆಗೆ ಕೇರಳದ ಹಲವು ಮಹಿಳಾ ಸಂಘಟನೆಗಳಲ್ಲದೆ, ಎಡಪಂಥೀಯ ಗುಂಪುಗಳು, ಲೈಂಗಿಕ ಅಲ್ಪಸಂಖ್ಯಾತರ ಸಂಘಟನೆಗಳು ಮತ್ತು ಮಾನವ ಹಕ್ಕುಗಳ ಹೋರಾಟಗಾರರು ಬೆಂಬಲ ಸೂಚಿಸಿದರು. ಆದರೆ ಪ್ರತಿಭಟನೆ ಶುರುವಾಗುವ ಮುನ್ನವೇ ಪ್ರತಿಭಟನಾಕಾರರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಲಾಠಿ ಹಿಡಿದು ಜಮಾಯಿಸಿದ್ದ ಪೊಲೀಸರು ಒಟ್ಟು 33 ಪ್ರತಿಭಟನಾಕಾರರನ್ನು ಬಂಧಿಸಿದರು.


ವಿಚಿತ್ರವೆಂದರೆ 'ಕಿಸ್ ಆಫ್ ಲವ್' ಪ್ರತಿಭಟನೆಯನ್ನು ಆಯೋಜಿಸಿದ್ದ ಮರೀನ್ ಡ್ರೈವ್ ಹತ್ತಿರ ಹತ್ತು ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು. ಅದರಲ್ಲೂ ಪ್ರತಿಭಟನೆಯನ್ನು ವಿರೋಧಿಸಲು ಸಂಘ ಪರಿವಾರದಿಂದ ಬಂದಿದ್ದ ಜನ ತಮ್ಮ ಕೈಗಳಲ್ಲಿ ಲಾಠಿಗಳನ್ನು ಕತ್ತಿಗಳನ್ನು ಹಿಡಿದಿದ್ದರು. ಅವರೆಲ್ಲ ಹತ್ತಿರದಲ್ಲಿದ್ದ ವಾಹನಗಳನ್ನು ನಾಶಮಾಡಲು ಮುಂದಾದರು. ಪ್ರತಿಭಟನೆಯ ಬಗ್ಗೆ ವರದಿ ಮಾಡಲು ಬಂದಿದ್ದ ಖ್ಯಾತ ಪತ್ರಕರ್ತೆ ಕೆ.ಕೆ.ಶಹೀನಾ ಅವರ ಮಗು ಕಾರಿನಲ್ಲಿದ್ದರೂ, ಅದು ಭಯದಿಂದ ಕೂಗುತ್ತಿದ್ದರೂ ಸಂಘಪರಿವಾರಿಗಳು ಕೇರ್ ಮಾಡದೆ ಶಹೀನಾ ಅವರ ಕಾರ್ ಮೇಲೆ ದಾಳಿ ಇಟ್ಟರು. ಯಾಕೆಂದರೆ ಅವರು ಹಿಂದೂ ಧರ್ಮವನ್ನು ರಕ್ಷಿಸುತ್ತಿದ್ದರು. ಪೊಲೀಸರು ಕೂಡ ಲಾಠಿ ಮತ್ತು ಕತ್ತಿಗಳನ್ನು ಹಿಡಿದಿದ್ದ ಸಂಘ ಪರಿವಾರಿಗಳ ಮೇಲೆ ದಾಳಿ ಮಾಡುವ ಬದಲಾಗಿ ಶಾಂತಿಯುತವಾಗಿ ಪ್ರತಿಭಟಿಸಲು ಬಂದಿದ್ದ ನಿರಾಯುಧರನ್ನೇ ಥಳಿಸಿದರು! ಮಜವಾದ ಸಂಗತಿ ಯಾವುದೆಂದರೆ ಪ್ರತಿಭಟನಾಕಾರರು ಕಿಸ್ ಮಾಡುವ ಬದಲಾಗಿ ಅದರ ವಿರುದ್ಧ ಬಂದಿದ್ದ ಹಿಂದೂ ಮತ್ತು ಮುಸಲ್ಮಾನ್ ಕೋಮುವಾದಿಗಳು ಸೈದ್ಧಾಂತಿಕವಾಗಿ ಪರಸ್ಪರ ಕಿಸ್ ಮಾಡಿದ್ದು!

'ಕಿಸ್ ಆಫ್ ಲವ್' ಪ್ರತಿಭಟನೆಯನ್ನು ವಿರೋಧಿಸಿ ಕಾಂಗ್ರೆಸ್ ಯುವಕರೂ ಜಮೆಯಾಗಿದ್ದರು. ಅವರು ತೊಟ್ಟಿದ್ದ ಟೀ ಶರ್ಟ್‌ಗಳ ಮೇಲೆ 'ಕಿಸ್' ಮತ್ತು 'ಲವ್' ಪದಗಳನ್ನು ನೋಡಿದ್ದೇ ತಡ ಶಿವಸೇನೆಯ ಬೆಂಬಲಿಗರು ಅವರ ಮೇಲೆಯೇ ದಾಳಿ ಇಟ್ಟರು!!

ಕ್ಯಾಲಿಕಟ್ ಪ್ರತಿಭಟನೆಯನ್ನು ಬೆಂಬಲಿಸಿ ಎರ್ನಾಕುಲಮ್ ನಗರದ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು 'ಫ್ರೀ ಹಗ್' ಎಂಬ ಆಂದೋಲನವನ್ನು ಘೋಷಿಸಿದರು.



ಪ್ರತಿಭಟನಕಾರರ ಮೇಲೆ ಪೊಲೀಸರ ದಾಳಿ



ಕಾಂಗ್ರೆಸ್ಸಿಗರ ಮೇಲೆ ಕತ್ತಿ ಹಿಡಿದು ದಾಳಿ ಮಾಡುತ್ತಿರುವ ಸಂಘ ಪರಿವಾರಿಗಳು

ಅವರ ಈ ತಾಪತ್ರಯಕ್ಕಾಗಿ ಹತ್ತು ವಿದ್ಯಾರ್ಥಿಗಳು ಕಾಲೇಜಿನಿಂದಲೇ ಅಮಾನತ್ತುಗೊಂಡರು. ಆದರೆ ಇದೆಲ್ಲದರಿಂದ ಒಂದಂತೂ ಸ್ಪಷ್ಟವಾಗುತ್ತದೆ. ಅದೇನೆಂದರೆ ಈಗಿನ ಯುವಕರು ಹಿಂದೂ ಮತ್ತು ಮುಸಲ್ಮಾನ ಮೂಲಭೂತವಾದಿಗಳ ದ್ವೇಷ ಬಿತ್ತುವ ವಾದವನ್ನು ವಿರೋಧಿಸುತ್ತಾ ಪ್ರೀತಿಯನ್ನು ಹರಡುವ ಮಾರ್ಗವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಹೇಗಿದ್ದರೂ ಲಾಠಿಗಿಂತ ಮುತ್ತಿಗೆ ಹೆಚ್ಚು ಶಕ್ತಿ ಇದೆ!

'ಭಾರತೀಯ ಸಂಸ್ಕೃತಿ' ಹೆಸರಲ್ಲಿ 'ಕಿಸ್ ಆಫ್ ಲವ್' ಪ್ರತಿಭಟನೆಯನ್ನು ದೇಶಾದ್ಯಂತ ಲಾಠಿ ಮತ್ತು ಲಾಂಗು ಹಿಡಿದು ವಿರೋಧಿಸುತ್ತಿರುವ ಶಿವಸೇನೆ ಮತ್ತು ಸಂಘಪರಿವಾರಿಗಳು ಒಮ್ಮೆ ತಮ್ಮ ಭಾರತೀಯ ಸಂಸ್ಕೃತಿಯತ್ತ ಗಮನ ಹರಿಸಿದರೆ ಒಳಿತು. ಯಾಕೆಂದರೆ ಭಾರತವೆಂಬ ಈ ಖಂಡದಲ್ಲಿ ಕಾಮದೇವ ಎಂಬ ದೇವರಿದ್ದಾನೆ. ಈ ಕಾಮದೇವನ ಸುತ್ತ ಅನೇಕ ಅದ್ಭುತ ಕತೆಗಳು ಮತ್ತು ಮಿಥ್ಯೆಗಳು ಇವೆ. ಇದೇ ಭಾರತವೆಂಬ ಖಂಡದಲ್ಲೇ ಕಾಮಸೂತ್ರ ಎಂಬ ಕೃತಿಯೂ ರಚಿಸಲ್ಪಟ್ಟಿದೆ. 'ಕಿಸ್' ಅನ್ನು ವಿರೋಧಿಸುತ್ತಿರುವ ಸಂಘಿಗಳು ಕಾಮಸೂತ್ರದಲ್ಲಿ ಇರುವ ತರಹೇವಾರಿ ಕಿಸ್‌ಗಳ ಬಗ್ಗೆಯೂ ಓದುವುದು ಸೂಕ್ತ. ಭಾರತ ಎಂಬ ದೇಶ ರಚನೆಯಾಗುವ ಬಹಳ ಹಿಂದೆಯೇ ಈ ಕಾಮಸೂತ್ರ ರಚನೆಯಾಗಿತ್ತು. ಈ ಎಲ್ಲಾ ಕಾರಣಗಳಿಂದ 'ಕಿಸ್' ಮಾಡುವುದು ಭಾರತೀಯ ಸಂಸ್ಕೃತಿಯಲ್ಲ ಎಂಬ ವಾದವೇ ಅಪ್ರಸ್ತುತ ಎನಿಸುತ್ತದೆ.

ಅವತ್ತು ಮರೀನ್ ಡ್ರೈವ್ ಹತ್ತಿರ ಬರೋಬ್ಬರಿ ಹತ್ತು ಸಾವಿರ ಜನ ಸೇರಿದ್ದರು. ಅವರಲ್ಲಿ ಬಹುಸಂಖ್ಯಾತರು ತಮ್ಮ ಕೈಗಳನ್ನು ಎತ್ತಿ ಹಿಡಿದಿದ್ದರು. ಆದರೆ ಪ್ರತಿಭಟನೆಯನ್ನು ಬೆಂಬಲಿಸಿ ಅಲ್ಲ, ಬದಲಾಗಿ ಪ್ರತಿಭಟನಾಕಾರರು ಮುತ್ತಿಕ್ಕುವುದನ್ನು ತಮ್ಮ ಮೊಬೈಲ್‌ಗಳಲ್ಲಿ ಸೆರೆ ಹಿಡಿಯಲು! ಅವರಲ್ಲಿ ಅದೆಷ್ಟೋ ಜನ ಹತ್ತಿರದ ಕಟ್ಟಡಗಳ ಮತ್ತು ಮರಗಳ ಮೇಲೆ ಹತ್ತಿ ಕೂತಿದ್ದರಂತೆ ಚೆನ್ನಾದ ದೃಶ್ಯಗಳನ್ನು ತಮ್ಮ ಖಾಸಗಿ ತೆವಲಿಗೆ ಹಿಡಿದಿಟ್ಟುಕೊಳ್ಳಲು.

ನಮ್ಮ ದೇಶದಲ್ಲಿ 'ಕಿಸ್' ಮಾಡಲು ಯುವಕ ಮತ್ತು ಯುವತಿ ಸರ್ಕಾರದ, ಸಮುದಾಯದ ಮತ್ತು ಸಂಸಾರದ ಅನುಮತಿಯನ್ನು ಪಡೆಯಬೇಕು. ಆ ಪ್ರಕ್ರಿಯೆಯನ್ನು ಮದುವೆ ಎಂದು ಕರೆಯುತ್ತಾರೆ. ಇವತ್ತು ಈ ಮದುವೆ ಎಂಬುದೇ ಒಂದು ದೊಡ್ಡ ಉದ್ಯಮವಾಗಿದೆ. ವರದಕ್ಷಿಣೆ, ಮದುವೆ ಮಂಟಪ, ಹೋಟೆಲ್ ರೂಂಗಳು, ಒಡವೆ, ಸೀರೆ, ಬಟ್ಟೆ ಖರೀದಿ, ಡೆಕೊರೇಷನ್, ಹೂವು, ವೀಡಿಯೋ ಕ್ಯಾಮೆರಾ, ಸ್ಟಿಲ್ ಕ್ಯಾಮೆರಾ, ಸಂಗೀತ ತಂಡ, ಸಾಂಪ್ರದಾಯಿಕ ಮತ್ತು ಆಧುನಿಕ ಕಂಪ್ಯೂಟರ್‌ಗಳ ಜ್ಯೋತಿಷ್ಯ, ಕುದುರೆ/ಆನೆ ಸವಾರಿ, ಬ್ಯಾಂಡ್, ಊಟ, ಪೂಜೆ, ಪೂಜಾರಿ ಇತ್ಯಾದಿಗಳೆಲ್ಲವೂ ಮದುವೆಯನ್ನು ಇವತ್ತು ಕೇರಳದಲ್ಲಿ ಸಿನಿಮಾ ಉದ್ಯಮಕ್ಕಿಂತ ದೊಡ್ಡ ಉದ್ಯಮವಾಗಿಸಿವೆ. ಇಂತಹ ಉದ್ಯಮದಿಂದ ಕಿಸ್ ಮಾಡಲು, ಲೈಂಗಿಕ ಕ್ರಿಯೆಯಲ್ಲಿ ತೊಡಗಲು ಇವತ್ತಿನ ಆಧುನಿಕ ಮತ್ತು ಶಿಕ್ಷಿತ ಯುವ ಜನಾಂಗ ಅನುಮತಿ ಪಡೆಯಬೇಕು ಎಂಬುದೇ ಸೋಜಿಗ.

ನಾನು ಜನಿಸಿದ್ದು ನಾಯರ್ ಜಾತಿಯಲ್ಲಿ. ಈ ಜಾತಿಯಲ್ಲಿ ಈ ಹಿಂದೆ ಮದುವೆ ಎಂಬುದೇ ಇರಲಿಲ್ಲ. ಬದಲಾಗಿ 'ಸಂಬಂಧಮ್' ಎಂಬ ಒಪ್ಪಂದ ಚಾಲ್ತಿಯಲ್ಲಿತ್ತು. ಪುರುಷರು ಮತ್ತು ಮಹಿಳೆಯರು ನಾಯರ್ ಜಾತಿಯವರೊಂದಿಗೋ ಅಥವಾ ಬೇರೆ ಜಾತಿಯವರೊಂದಿಗೋ ಸಂಬಂಧ ಇಟ್ಟುಕೊಳ್ಳಬಹುದಿತ್ತು. ಹಾಗೆಯೇ ಹಲವಾರು ಸಂಬಂಧಗಳನ್ನೂ ಹೊಂದಬಹುದಿತ್ತು.

ಹಾಗೆ ನೋಡಿದರೆ, ಆದಿವಾಸಿಗಳೇ ಈ ನಾಡಿನ ಮೂಲ ನಿವಾಸಿಗಳು. ಅವರಲ್ಲೂ ಮದುವೆ ಎಂಬುದಿಲ್ಲ. ಇವತ್ತಿಗೂ ಆದಿವಾಸಿಗಳಲ್ಲಿ ಪರಸ್ಪರ ಇಷ್ಟ ಪಡುವ ಯುವಕ ಮತ್ತು ಯುವತಿ ಜೊತೆಗೆ ಓಡಿಹೋಗಿ ಕಾಡಿನಲ್ಲಿ ಹಲವು ದಿನಗಳ ಕಾಲ ಇರಬೇಕು. ಅಲ್ಲಿ ಅವರಿಬ್ಬರೂ ಜೊತೆಗೂಡಿದ ನಂತರ ಹಿಂದಿರುಗುತ್ತಾರೆ. ಆಗ ಹಿರಿಯರು ಅವರ ಸಂಬಂಧವನ್ನು ಒಪ್ಪಿಕೊಳ್ಳುತ್ತಾರೆ. ಇದರರ್ಥ ಇಷ್ಟೇ: 'ಮದುವೆ'ಗೂ ಮುನ್ನ ದೈಹಿಕ ಸಂಬಂಧ ಬರುತ್ತದೆ. ಇದು ಭಾರತದ ಮೂಲ ನಿವಾಸಿಗಳ ಸಂಸ್ಕೃತಿ ಆಗಿ[ದ...] 'ಕಿಸ್' ಭಾರತೀಯ ಸಂಸ್ಕೃತಿ ಹೇಗಾಗುವುದಿಲ್ಲ?!

ಅವತ್ತು 'ಕಿಸ್' ಮಾಡುವುದನ್ನು ನೋಡಲು, ಕ್ಯಾಮೆರಾದಲ್ಲಿ ಸೆರೆಹಿಡಿಯಲು ಸಾವಿರಾರು ಜನ ಜಮಾಯಿಸಿದ್ದರು ಎಂಬುದಕ್ಕೆ ನನ್ನದೊಂದು ತಕ[...] ಕೇರಳ ತೆಂಗಿನಕಾಯಿಗಳ ನಾಡು. [...] ಕಾಮೋದ್ದೀಪಕವಾಗಿದ್ದು ಇದನ್ನು ಮಲೆಯಾಳಿಗಳು ಎಲ್ಲಾ ಅಡುಗೆಯಲ್ಲಿ ಬಳಸುತ್ತಾರೆ. ಇದರ ಜ[...] ಮಲೆಯಾಳಿಗಳು ಹೇರಳವಾಗಿ ಮೀನನ್ನೂ ಸೇವಿಸ[...] ಮೀನು ಕೂಡ ಕಾಮೋದ್ದೀಪಕವೇ. ಸಾಮಾಜಿಕವಾಗಿ[...] ಕೇರಳದಲ್ಲಿ ಬದಲಾವಣೆಗಳಾಗಿವೆ. ಇಲ್ಲಿಗೆ ವಿದೇ[...] ನೆಲೆಸಿರುವ ಮಲೆಯಾಳಿಗಳು ಕಳುಹಿಸುವ ಹಣದಲ್ಲಿ[...] ಬಂಗಲೆಗಳು ಮತ್ತು ಕಾಂಪ್ಲೆಕ್ಸ್‌ಗಳು ತಲೆ ಎತ್ತಿರುವುದ[...] ಯುವ ಜನಾಂಗಕ್ಕೆ ಖಾಸಗಿ ಪ್ರದೇಶಗಳೇ ಇಲ್ಲದಂತ[...] ಪಾರ್ಕ್ ಮತ್ತು ಸಿನಿಮಾ ಮಂದಿರಗಳೂ ಅ[...] ಪೊಲೀಸರ ಕಾರ್ಯಕ್ಷೇತ್ರಗಳಾಗಿವೆ. ಕದ್ದು ಮುಚ್ಚಿ[...] ಟೌನ್‌ನಂತಹ ಹೋಟೆಲ್‌ನಲ್ಲಿ ಮುತ್ತಿಕ್ಕಿದರೆ ಹಿ[...] ಕಾಲದಲ್ಲಿ ಹುಲಿಗಳಿಗೆ ಬೇಟೆ ಆಡುತ್ತಿದ್ದಂತೆ ಈಗ[...] ಕ್ಯಾಮೆರಾಗಳು ಬೇಟೆ ಆಡುತ್ತವೆ. ಈ ಎಲ್ಲ ಬೆಳವಣ[...] ಅಡ್ಡಪರಿಣಾಮಗಳನ್ನು ಯಾರು ಬೇಕಾ[...] ಊಹಿಸಬಹುದು.

ದೈಹಿಕ ಆಶಾಭಂಗದಿಂದ ತತ್ತರಿಸುತ್ತಿ[...] ಮಲೆಯಾಳಿಗಳು ಕುಡಿತಕ್ಕೆ ದಾಸರಾಗಿದ್ದಾರೆ. ಈ ಕಾ[...] ಕೇರಳ ಇಡೀ ದೇಶದಲ್ಲಿ ಅತಿ ಹೆಚ್ಚು ಮದ್ಯವನ್ನು ಸೇ[...] ರಾಜ್ಯವಾಗಿದೆ. ಅಷ್ಟೇ ಅಲ್ಲ, ಕುಡಿತದಿಂದಾಗಿಯೇ [...] 'ಕ್ಲಾಸ್' ಸಂಘರ್ಷ 'ಗ್ಲಾಸ್' ಸಂಘರ್ಷವಾಗಿ ಮಾರ್ಪ[...] ಇವತ್ತು ಸಿಗ್ಮಂಡ್ ಫ್ರಾಯ್ಡ್ ಇದ್ದಿದ್ದರೆ ಮಲೆಯಾ[...] ಲೈಂಗಿಕ ಆಶಾಭಂಗಕ್ಕೆ ಕಾರಣವನ್ನು ಹುಡುಕುವ ಬ[...] ಅವರ ಪರಿಸ್ಥಿತಿಯನ್ನು ನೋಡಿ ನಕ್ಕುನಕ್ಕು ಸಾಯ[...] ಎನಿಸುತ್ತದೆ!


ಭಾರತೀಯ ಸಂಸ್ಕೃತಿಯ ಬಗ್ಗೆ ಮಾತನಾಡುವ [...] ಪರಿವಾರಿಗಳು ಮಹಾಭಾರತ ಮತ್ತು ರಾಮಾಯಣ[...] ಓದಿದ್ದಾರೆಯೇ? ಮಹಾಭಾರತದಲ್ಲಿ ಕೇಂದ್ರ ವ್ಯಕ್ತಿಯಾ[...] ಕೃಷ್ಣ ಅವರ ಮಿಥ್ಯೆಗಳ ಪ್ರಕಾರ ಪ್ರಣಯ ಪ್ರವೃತ್ತಿಯ[...] ಅವನಿಗೆ 16,008 ಪತ್ನಿಯರಿದ್ದರಂತೆ. ಐ[...] ಪಾಂಡವರಿಗೂ ಇದ್ದದ್ದು ದ್ರೌಪದಿ ಎಂಬ ಒಬ್ಬಳು[...] ರಾಮಾಯಣದ ದಶರಥನಿಗೆ ಮೂವರು ಪತ್ನಿಯರಿ[...] ಮಕ್ಕಳಾಗಿರಲಿಲ್ಲ. ಆಗಿನ ಕಾಲದಲ್ಲಿ ವಯ[...] ಇರಲಿಲ್ಲವಾದ್ದರಿಂದ ಆತ ತಪಸ್ಸಿಗೆ ಕೂತ. ಆಗ [...] ಎದುರು ಪ್ರತ್ಯಕ್ಷವಾದ ದೇವ ಆತನ ಹೆಂಡತಿ[...] ದ್ರವವನ್ನು ಕೊಟ್ಟ. ಆ ದ್ರವವನ್ನು ಸೇವಿಸಿದ ದ[...] ಹೆಂಡತಿಯರಿಗೆ ನಾಲ್ಕು ಮಕ್ಕಳು ಜನಿಸಿದವು. [...] ಪುರಾಣ ಹೇಳುತ್ತದೆ. ಆದರೆ ದಶರಥನ ಮ[...] ಯಾರಾದರೂ 'ನಿಮ್ಮ ಅಪ್ಪ ಯಾರು?' ಎಂದು ಕ[...] ಅವರು ಯಾರತ್ತ ಬೊಟ್ಟು ಮಾಡುತ್ತಿದ್ದರು? ದೇವರತ್ತ[...] ದ್ರವದತ್ತಲೋ? ದಶರಥನತ್ತಲೋ?

ಅದೆಲ್ಲ ಬದಿಗಿರಲಿ, ಇವತ್ತು 'ಕಿಸ್ ಆಫ್ [...] ಪ್ರತಿಭಟನೆಗಳಿಗೆ ದೇಶದ ವಿವಿಧ ಭಾಗಗಳಿಂದ ಬ[...] ವ್ಯಕ್ತವಾಗಿರುವುದು ಆಶಾದಾಯಕವಾಗಿದೆ. ಮ[...] ಹೈದರಾಬಾದ್, ದೆಹಲಿ ಯುವಕರೂ ತಮ್ಮ [...] ನಗರಗಳಲ್ಲಿ ಇಂತಹದ್ದೇ ಪ್ರತಿಭಟನೆಗಳನ್ನು ನಡೆ[...] ಕ್ಯಾಲಿಕಟ್ ಯುವಕರು ಬರುವ ಡಿಸೆಂಬರ್ [...] ಮತ್ತೊಂದು ಪ್ರತಿಭಟನೆಯ ಯೋಜನೆ[...] ಹಾಕಿಕೊಂಡಿದ್ದಾರೆ. ಫ್ಯಾಸಿಸ್ಟರ ದ್ವೇಷಭರಿತ ವಾದದ [...] ನಮ್ಮ ದೇಶದ ಯುವಕರು ಪ್ರೇಮದ ವಾದವನ್ನು ಇ[...] ಇವತ್ತು ಯುವಕರು 'ಮೇಕ್ ಲವ್, [...] (ಸಂಘಪರಿ)ವಾರ್' ಎಂದು ಘೋಷಿಸಿದ್ದಾರೆ. ಹಳೆ[...] ಹಾಡೊಂದರ 'ಪ್ಯಾರ್ ಕಿಯಾ ತೋ ಡರ್ನಾ [...] ಎಂಬ ಸಾಲು ನೆನಪಾಗುತ್ತಿದೆ.

● ಕೆ.ಪಿ[...]


(ಸಸಿ ಅವರು ಪ್ರಶಸ್ತಿ ವಿಜೇತ ಸಿನಿಮಾ ನಿರ್ದೇ[...] ಮತ್ತು ಸಾಮಾಜಿಕ ಕಾರ್ಯಕರ್ತರು. ಅವರು [...] ಬರೆದಿರುವ ಲೇಖನವೊಂದರ ಸಂಗ್ರಹಾನುವಾದ[...]

ಸಚಿವರ ಆಣೆ ಪ್ರಮಾಣ: ಕಾನೂನಿನ ಆಳ್ವಿಕೆ


ನತದೃಷ್ಟೆ ನಂದಿತಾ

ತೀರ್ಥಹಳ್ಳಿಯಲ್ಲಿ ಇತ್ತೀಚಿಗೆ ಸಂಭವಿಸಿದ ವಿದ್ಯಾರ್ಥಿ ದುರ್ಮರಣ ಕುರಿತು ಸಿಐಡಿ ತನಿಖೆ ನಡೆಯುತ್ತಿದೆ. ...ಪ್ರಕರಣವನ್ನು ಕೈಗೆತ್ತಿಕೊಂಡು ಬಿಜೆಪಿ ಮತ್ತು ... ಪರಿವಾರ ಕೋಮುದ್ವೇಷ ಕೆರಳಿಸುವ ತಮ್ಮ ...ಶೋಗಳನ್ನು ಮುಂದುವರಿಸಿವೆ. ಈ ನಡುವೆ ...ಹಳ್ಳಿ ಕ್ಷೇತ್ರದ ಶಾಸಕರು, ರಾಜ್ಯ ಪ್ರಾಥಮಿಕ ಶಿಕ್ಷಣ ...ರೂ ಆಗಿರುವ ಕಿಮ್ಮನೆ ರತ್ನಾಕರ್ ಸ್ಥಳೀಯ ...ಮಯಗಳಿಗೆ ತೆರಳಿ ಸದ್ರಿ ಪ್ರಕರಣದಲ್ಲಿ ತನ್ನ ಹಸ್ತಕ್ಷೇಪ ...ಎಂದು ದೇವರ ಸಮ್ಮುಖದಲ್ಲಿ ಆಣೆ ಪ್ರಮಾಣ ...ದ್ದಾರೆ. ತಮ್ಮ ಬಗ್ಗೆ ಅಂತಹ ಆರೋಪ ಮಾಡುತ್ತಿರುವ ... ನಾಯಕರು ಧರ್ಮಸ್ಥಳದಲ್ಲಿ ಪ್ರಮಾಣ ಮಾಡಲಿ ... ಸಚಿವರು ಸವಾಲು ಹಾಕಿದ್ದಾರೆ. ಅವರ ಈ ...ತನಂಬಿಕೆಯನ್ನು ಬಿಜೆಪಿಗಳು ಗೇಲಿ ಮಾಡಿವೆ. ...ಬಗಳ ಹೋಲ್‌ಸೇಲ್ ಗುತ್ತಿಗೆ ತೆಗೆದುಕೊಂಡಿರುವ ...ಯಕರು, ಸಚಿವರ ಆಣೆಪ್ರಮಾಣಗಳಿಗೆಲ್ಲ ಕೇರ್ ...ತ್ತಾರಾ? ರಾಜ್ಯದ ಮುಖ್ಯಮಂತ್ರಿ ಮತ್ತು ಆಳುವ ...ರಾಜ್ಯಾಧ್ಯಕ್ಷರು ಸಚಿವರ ನಡವಳಿಕೆಯನ್ನು ಆಕ್ಷೇಪಿಸಿ ...ದು ಯುಕ್ತವಾಗಿದೆ. ಆಡಳಿತದ ಜವಾಬ್ದಾರಿಯುತ ...ಲ್ಲಿರುವವರೇ ನ್ಯಾಯಕ್ಕಾಗಿ ದೇವರ ಮೊರೆ ಹೋಗುವು... ಸಾಮಾನ್ಯ ಪ್ರಜೆಗಳಿಗೆ ಸರ್ಕಾರದ ಮೇಲೆ ಭರವಸೆ ...ಉಳಿವುದಿಲ್ಲ ಎಂಬ ಅವರ ಆತಂಕವೂ ಸರಿಯಾದದ್ದೇ.

...ದರೆ ತೀರ್ಥಹಳ್ಳಿಯ ಪ್ರಕರಣದಲ್ಲಿ ಸಚಿವರ ಆಣೆ ...ಣದ ಕುರಿತು ತಮ್ಮ ಪ್ರತಿಕ್ರಿಯೆ ನೀಡುತ್ತ ರಾಜ್ಯ ...ಳಿದ ಜಾತಿ ಮತ್ತು ಬುಡಕಟ್ಟು ಜನಾಂಗಗಳ ...ಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕನಾಥ್ ಮತ್ತು ...ರ್ ಶ್ರೀಧರ್, ಸಂವಿಧಾನ ಮತ್ತು ಕಾನೂನಿನ ...ನ್ನು ಪ್ರಸ್ತಾಪಿಸಿದ್ದು ಮಾತ್ರ ಅಸಂಗತವಾಗಿ ಕಾಣುತ್ತದೆ ...ಪ್ರಭ, ನವೆಂಬರ್ 7, 2014ರ ಸಂಚಿಕೆ, ಪುಟ. ...ದೀರ್ಘ ಕಾಲದಿಂದ ನ್ಯಾಯವಾದಿಯಾಗಿರುವ ...ನಾಥ್ ತಮ್ಮ ವೃತ್ತಿಯ ಒಳಹೊರಗುಗಳನ್ನೆಲ್ಲ ಚೆನ್ನಾಗಿ ...ರು. ನಮ್ಮ ನ್ಯಾಯಾಲಯ, ಪೊಲೀಸು ಠಾಣೆ ... ಸರಕಾರೀ ಕಚೇರಿಗಳಲ್ಲಿ ಎಲ್ಲವೂ ಕಾನೂನಿನ ಪ್ರಕಾರವೇ ನಡೆದರೂ, ನ್ಯಾಯ ಮಾತ್ರ ಹೇಳದೆ ...ನಾಪತ್ತೆಯಾಗುವ ಸಂಗತಿ ಅವರಿಗೆ ಗೊತ್ತಿಲ್ಲವೆ? ... ಕೂಡ ಆ ವಾಸ್ತವವನ್ನು ಮನಗಾಣದಷ್ಟು ...? ತೀರ್ಥಹಳ್ಳಿಯ ಬಾಲಕಿಯ ದುರ್ಮರಣದ ...ದಲ್ಲಂತೂ ಕೇಸನ್ನು ಹಳ್ಳಹತ್ತಿಸಲು ಬಿಜೆಪಿ ಜೊತೆಗೆ, ... ಬಹುತೇಕ ಪತ್ರಿಕೆ ಹಾಗೂ ದೃಶ್ಯ ಮಾಧ್ಯಮಗಳು ...ಡಿಸಿರುವುದು ಈಗ ನಿಚ್ಚಳವಾಗಿದೆ. ಪ್ರಕರಣ ಸುದ್ದಿಯಾದಂದಿನಿಂದ ಬಿಜೆಪಿ, ತಾನು ಆರೋಪಿ ಎಂದು ಹೆಸರಿಸಿದವರನ್ನೇ ಪೊಲೀಸರು ಬಂಧಿಸಬೇಕು ಎಂದು ಒಂದೇಸಮನೆ ಬೀದಿ ರಂಪ ಮಾಡಿತು. ವಾರ್ತಾ ಭಾರತಿ ಹೊರತುಪಡಿಸಿ ಉಳಿದ ದಿನಪತ್ರಿಕೆಗಳು ಬಾಲಕಿಯ ಸಾವನ್ನು ಅತ್ಯಾಚಾರ ಮತ್ತು ಕೊಲೆ ಎಂದು ನಿರ್ಣಾಯಕವಾಗಿ ವರದಿ ಮಾಡಿದವು. ಬಾಲಕಿಯ ಮೇಲೆ ಅತ್ಯಾಚಾರ ನಡೆದಿಲ್ಲ ಎಂಬ ಮಾಹಿತಿ, ಮಣಿಪಾಲದ ಕೆ.ಎಂ.ಸಿ. ಆಸ್ಪತ್ರೆಯ ಮರಣೋತ್ತರ ವರದಿಯಲ್ಲಿ ಬಹಿರಂಗವಾದ ನಂತರವೂ ಬಹುತೇಕ ಪತ್ರಿಕೆಗಳು ಆ ಕುರಿತು ಸಂದೇಹ ವ್ಯಕ್ತಪಡಿಸಿದವು. ಮುಸ್ಲಿಮ್ ಯುವಕನೊಬ್ಬನಿಂದ ಬಾಲಕಿಯ ಮೇಲೆ ಅತ್ಯಾಚಾರ ನಡೆದಿದ್ದು ಸರ್ಕಾರ ಅವನನ್ನು ರಕ್ಷಿಸುತ್ತಿದೆ ಎಂಬ ಬಿಜೆಪಿಯ ಕಟ್ಟುಕತೆಯನ್ನು ಈ ಮಾಧ್ಯಮಗಳು ಮತ್ತೆಮತ್ತೆ ಬಿತ್ತರಿಸಿದವು. ಬಾಲಕಿಯ ಅಪಹರಣವನ್ನಾಗಲೀ ಅವಳನ್ನು ನಿರ್ಜನವಾದ ಗುಡ್ಡವೊಂದರ ಮೇಲೆ ಬಿಟ್ಟುಹೋದದ್ದನ್ನಾಗಲೀ ನೋಡಿದವರು ಯಾರೂ ಇಲ್ಲ, ಆದಾಗ್ಯೂ ಆ ಬಾಲಕಿಯನ್ನು ಗುಡ್ಡದಿಂದ ಕರೆದೊಯ್ದು ಅವಳ ಮನೆ ಮುಟ್ಟಿಸಿದ ಕಮಲಮ್ಮ ಎಂಬವರ ಬಗ್ಗೆ ರಾಜ್ಯದ ಪ್ರತಿಷ್ಠಿತ ಪತ್ರಿಕೆಯೊಂದರಲ್ಲಿ ಪ್ರಕಟವಾಗಿರುವ ಬರಹದ ಈ ಮಾತು ನೋಡಿ "ಇಡೀ ರಾಜ್ಯವನ್ನೇ ಬೆಚ್ಚಿಬೀಳಿಸಿದ ನಂದಿತಾಳ ಸಾವಿನ ಪ್ರಕರಣದಲ್ಲಿ ನಂದಿತಾಳನ್ನು ಕೀಚಕರಿಂದ ಪಾರು ಮಾಡಿದ ಕಮಲಮ್ಮ...." (ಪ್ರಜಾವಾಣಿ ತಾ. 7.11.14 ಪುಟ 4). ಬಾಲಕಿಯ ಸಾವಿನ ಕುರಿತು ತನಿಖೆ ನಡೆಸುತ್ತಿರುವ ಪೊಲೀಸರಿಗೆ ಸಹ "ಈವರೆಗೆ ಖಾತ್ರಿಯಾಗಿ ಗೊತ್ತಿಲ್ಲದ ಹಲವು ಸಂಗತಿಗಳ ಬಗ್ಗೆ ಪ್ರಜಾವಾಣಿಗೆ ಯಾವ ಸಂದೇಹವೂ ಇಲ್ಲ! ಕೈಬೆರಳಿನ ಪರೀಕ್ಷೆ ರೀತ್ಯಾ ಅತ್ಯಾಚಾರ ನಡೆದಿರಲಿಕ್ಕಿಲ್ಲ; ಆದರೆ ಆ ಪ್ರಯತ್ನವಂತೂ ನಡೆದಿದೆ! ಅತ್ಯಾಚಾರಕ್ಕೆ ಪ್ರಯತ್ನ ನಡೆಸಿದವರನ್ನು ಪ್ರಜಾವಾಣಿ 'ಕೀಚಕ' ಎಂದು ಹೆಸರಿಸುವ ಬದಲು ಯಾವುದಾದರೂ ಮುಸ್ಲಿಮ್ ಹೆಸರಿನಿಂದ ಕರೆಯುವುದು ಹೆಚ್ಚು ಯುಕ್ತಿಯುಕ್ತವಲ್ಲವೆ? ಒಂದೆರಡು ವರ್ಷಗಳ ಹಿಂದೆ ರಾಜ್ಯದಲ್ಲಿ ಬಿಜೆಪಿಗಳು "ಲವ್ ಜೆಹಾದ್"ನ ಕಟ್ಟುಕತೆಯನ್ನು ಪತ್ರಿಕೆಗಳ ಮೂಲಕ ಬಿತ್ತರಿಸುತ್ತಿದ್ದ ದಿನಗಳಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತಾಡುತ್ತ ಜಿ.ಕೆ. ಗೋವಿಂದರಾವ್, ತಮ್ಮ ಎಂದಿನ ಜೋಶ್‌ನಲ್ಲಿ "ರಾವಣ, ಕೀಚಕ, ಇವರೆಲ್ಲ ಯಾವ ಮತದವರು?" ಎಂದು ಕೇಳಿದ್ದು ನೆನಪಾಗುತ್ತಿದೆ. ಹಿಂದೂಗಳಲ್ಲ ಅತ್ಯಾಚಾರಿಗಳೇ ಇಲ್ಲವಾದ್ದರಿಂದ ಅವರು ಹಿಂದೂಗಳಂತೂ ಅಲ್ಲ.



ತೀರ್ಥಹಳ್ಳಿಯ ಬಾಲಕಿಯ ದುರ್ಮರಣವನ್ನು ಪ್ರಜಾವಾಣಿ ರೋಚಕವಾದ ಕೀಚಕ ಪ್ರಸಂಗವನ್ನಾಗಿಸಿದರೆ ಕನ್ನಡದ ಇನ್ನೊಂದು 'ಪ್ರತಿಷ್ಠಿತ' ಪತ್ರಿಕೆ ವಿಜಯವಾಣಿ, ಘಟನೆ ನಡೆದ ಮಾರನೆಯ ದಿನವೇ ಅದರಲ್ಲಿ ಪಾಲುಗೊಂಡವರು ಎನ್ನಲಾದ ಮುಸ್ಲಿಮ್ ಯುವಕರ ಹೆಸರುಗಳನ್ನು ಪ್ರಕಟಿಸಿ ಪತ್ರಿಕಾ ವೃತ್ತಿ ತಲುಪಬಹುದಾದ ಪಾತಾಳದ ಆಳದಲ್ಲಿ ಒಂದು ಹೊಸ ದಾಖಲೆಯನ್ನು ಸ್ಥಾಪಿಸಿತು. ಕೋಮುದ್ವೇಷ, ಉದ್ವಿಗ್ನತೆ, ಹಿಂಸೆಗಳಿಗೆ ಕಾರಣವಾಗುವ ಧರ್ಮಸೂಚಕ ಹೆಸರುಗಳನ್ನೂ ಸಂಕೇತಗಳನ್ನೂ ಗೋಪ್ಯವಾಗಿಡುವ ಶಿಷ್ಟಾಚಾರವನ್ನು ಬಹುತೇಕ ಪತ್ರಿಕೆಗಳು ಈವರೆಗೆ ಪಾಲಿಸಿಕೊಂಡುಬಂದಿವೆ. ಉದಾಹರಣೆಗೆ ದಿ ಹಿಂದು ಪತ್ರಿಕೆ ತೀರ್ಥಹಳ್ಳಿಯ ಘಟನೆಯ ಕುರಿತು, ಕಳೆದ ವಾರದ ಉದ್ದಕ್ಕೂ ಹಲವು ವರದಿಗಳನ್ನು ಪ್ರಕಟಿಸಿದೆ, ಆದರೆ ಒಂದು ವರದಿಯಲ್ಲೂ ಆರೋಪಿಗಳನ್ನು ಹೆಸರಿಸಿಲ್ಲ ಮಾತ್ರವಲ್ಲ ಆ ಬಾಲಕಿಯ ಹೆಸರನ್ನು ಸಹ ಕಾಣಿಸಿಲ್ಲ! ಇದಕ್ಕೆ ಪ್ರತಿಯಾಗಿ ಕನ್ನಡದ ಕೆಲವು ಪತ್ರಿಕೆಗಳು ಮೊದಮೊದಲು ತಮ್ಮ ವರದಿಗಳಲ್ಲಿ ಬಾಲಕಿಯ ಹೆಸರು ಮಾತ್ರ ನಮೂದಿಸಿದರೆ ಆನಂತರ ಹೆಸರಿನ ಕೊನೆಯಲ್ಲಿ 'ಪೂಜಾರಿ' ಎಂಬ ಜಾತಿಸೂಚಕವನ್ನು ಸೇರಿಸತೊಡಗಿದವು. ಅದಕ್ಕೊಂದು ಕಾರಣವಿದೆ; ಬಾಲಕಿ ಬಿಲ್ಲವ ಜಾತಿಯವಳಾಗಿದ್ದು ಧರ್ಮದ ಜೊತೆಗೆ ಜಾತಿಯ ನೆಲೆಯಲ್ಲೂ ಸಹ ಆ ಸಮುದಾಯದವರನ್ನು ಕೆರಳಿಸುವ ಉದ್ದೇಶದಿಂದ ಕರಾವಳಿ ಮತ್ತು ಮಲೆನಾಡಿನ ಬಿಜೆಪಿ ನಾಯಕರು ಅವಳ ಹೆಸರಿನ ಜೊತೆ ಅವಳ ಜಾತಿಯನ್ನು ಅಂಟಿಸ ತೊಡಗಿದ್ದರು; ಪತ್ರಿಕೆಗಳು ಈ ನಾಯಕರನ್ನೇ ಅನುಕರಿಸಿದ್ದವು.






ತೀರ್ಥಹಳ್ಳಿಯ ಘಟನೆ ಕುರಿತು ನಿಖರ ಮಾಹಿತಿ ಹಾಗಿರಲಿ, ಸಾಂದರ್ಭಿಕ ಸಾಕ್ಷ್ಯಾಧಾರಗಳು ಸಹ ಇದುವರೆಗೆ ಸಿಗದಿದ್ದರೂ, ಸ್ಥಳದಲ್ಲಿ ಹಾಜರಿದ್ದು ನಡೆದದ್ದನ್ನೆಲ್ಲ ಕಣ್ಣಾರೆ ಕಂಡವರ ಹಾಗೆ ಮಾಧ್ಯಮಗಳು ಅತ್ಯಾಚಾರದ ಮತ್ತು ಕೊಲೆಯ ಒಂದು ವೃತ್ತಾಂತವನ್ನು ಕಟ್ಟಿಕೊಟ್ಟಿವೆ. ಕೆಲವು ತಿಂಗಳ ಹಿಂದೆ ಪ್ರೇಮಲತಾ ಎಂಬ ಗೃಹಿಣಿ ನಾಡಿನ ಪ್ರತಿಷ್ಠಿತ ಮಠಾಧೀಶರೊಬ್ಬರಿಂದ ತನ್ನ ಮೇಲೆ ಸರಣಿ ಅತ್ಯಾಚಾರ ನಡೆದಿದೆ ಎಂದು ಪೊಲೀಸರಿಗೆ ದೂರು ಕೊಟ್ಟಿದ್ದರು. ಈ ದೂರನ್ನು ತಕ್ಷಣ ದಾಖಲಿಸಿಕೊಂಡ ಪೊಲೀಸರು ತಡಮಾಡದೆ ಪ್ರೇಮಲತಾರನ್ನು ಬಂಧಿಸಿದರು. ನ್ಯಾಯಾಲಯ, ಮಠಾಧೀಶರ ವಿರುದ್ಧ ಮಾಧ್ಯಮಗಳು ಏನನ್ನೂ ಪ್ರಕಟಿಸದಂತೆ ನಿರ್ಬಂಧ ಹೇರಿತು. ನ್ಯಾಯಾಲಯಕ್ಕೆ ಸಂವಿಧಾನದ ಬದಲು ಮಠಾಧೀಶರ ಅಣತಿಯೇ ನ್ಯಾಯಸಂಹಿತೆಯಾಗಿತ್ತು, ರಾಜ್ಯದ ನ್ಯಾಯ ವ್ಯವಸ್ಥೆಗಾಗಲೀ, ಮಾಧ್ಯಮಗಳಿಗಾಗಲೀ–ಯಥಾಪ್ರಕಾರ ಒಂದೆರಡು ಅಪವಾದಗಳನ್ನು ಹೊರತುಪಡಿಸಿ–ಆ ಗೃಹಿಣಿಯ ಸಂಕಟ ಕಾಣಿಸುತ್ತಿಲ್ಲ, ಎಲ್ಲವೂ ಕಾನೂನು ಪ್ರಕಾರವೇ ನಡೆಯುತ್ತಿದೆ; ಆದರೆ ಆಕೆಗೆ ನ್ಯಾಯ ಮಾತ್ರ ಸಿಗುತ್ತಿಲ್ಲ, ಈ ಲೋಕದ ನ್ಯಾಯ ಪ್ರೇಮಲತಾ ಅವರನ್ನು ಸಂಪೂರ್ಣವಾಗಿ ಕೈಬಿಟ್ಟಂತೆ ಕಾಣುತ್ತದೆ. ಈಗ ಅವರನ್ನು ದೇವರೇ ಕಾಪಾಡಬೇಕು. ಮುಸ್ಲಿಮರಿಗೆ ಈ ಪಾಡು ಯಾವತ್ತೋ ಬಂದಿದೆ. ಕಿಮ್ಮನೆ ರತ್ನಾಕರ್ ಸಚಿವರಾದರೇನಂತೆ? ಈ ವ್ಯವಸ್ಥೆಯಲ್ಲಿ ಅವರೂ ಅಸಹಾಯಕರೇ. ತೀರ್ಥಹಳ್ಳಿಯ ಬಾಲಕಿಯ ದುರ್ಮರಣ ಕುರಿತು ಅವರು ನೀಡಿದ ಹೇಳಿಕೆಗಳನ್ನೇ ನಮ್ಮ ಹೆಚ್ಚಿನ ಪತ್ರಿಕೆಗಳು ಸೆನ್ಸಾರ್ ಮಾಡಿವೆ! ಈ ಪ್ರಕರಣದಲ್ಲಿ ತಾನು ಹಸ್ತಕ್ಷೇಪ ಮಾಡಿಲ್ಲ ಎಂದು ದೇವರ ಮುಂದೆ ಆಣೆ ಪ್ರಮಾಣ ಮಾಡುವುದು ಬಿಟ್ಟು ಅವರಿಗೆ ಬೇರೆ ಯಾವ ಮಾರ್ಗವಿದೆ?

● ಜಿ.ರಾಜಶೇಖರ

ಸಮಾನ ಶಿಕ್ಷಣ ಮಾಲಿಕೆ

...ಕೆಳ ಮಧ್ಯಮವರ್ಗಗಳ ಪೋಷಕರು ತಮ್ಮ ಮಕ್ಕಳನ್ನು ಕಳಿಸುತ್ತಿರುವ ...ಗಳು) ಕುರಿದೊಡ್ಡಿಗಳಿಗಿಂತ ಸ್ವಲ್ಪ ಮೇಲ್ಮಟ್ಟದಲ್ಲಿವೆ ಅಷ್ಟೇ. ಇದರ ... ಜಾಗೃತಿ ಹಾಗೂ ಸರ್ಕಾರೀ ಶಾಲಾ ವ್ಯವಸ್ಥೆಯನ್ನು ಉತ್ತಮವಾಗಿಸುವ ... ಅವರನ್ನು ಸರ್ಕಾರೀ ಶಾಲಾ ವ್ಯವಸ್ಥೆಯ ಕಡೆಗೆ ಸೆಳೆಯುತ್ತದೆ.


...ದನ್ನು ಅನುಭವದ ಆಧಾರದಲ್ಲಿ ಇಲ್ಲಿ ಬರೆಯಲಾಗಿದೆಯೇ ಹೊರತು, ...ತ್ಯವಾಗಿಯಲ್ಲ, ಮಳವಳ್ಳಿ ತಾಲೂಕಿನ ಮಾದಹಳ್ಳಿ ಸರ್ಕಾರೀ ಶಾಲೆಯೇ ... ನಿದರ್ಶನ. ಮಂಗಳೂರಿನ ಸೆಂಟ್ ಆಗ್ನೆಸ್ ಕಾಲೇಜಿನ ಕನ್ನಡ ...ನ ಪ್ರೊ.ಭೂಮಿಗೌಡ ಮತ್ತು ಮಂಗಳೂರು ವಿಶ್ವವಿದ್ಯಾಲಯದ ...ಪ್ರಾಧ್ಯಾಪಕಿ ಪ್ರೊ.ಸಬಿಹಾ ಅವರುಗಳು ಭೂಮಿಗೌಡರ ಊರಿನ ...ರ ಜನರೊಂದಿಗೆ ಮಾಡಿದ ಪ್ರಯೋಗ ಅಲ್ಲಿ ಯಶಸ್ಸು ಕಂಡಿದೆ. ... ವರ್ಷಗಳ ಕೆಳಗೆ 18 ಮಕ್ಕಳನ್ನು ಮಾತ್ರ ಹೊಂದಿದ್ದು ಪಾಳು ...ಸ್ಥ ಮಾದಹಳ್ಳಿ ಸರ್ಕಾರೀ ಹಿರಿಯ ಪ್ರಾಥಮಿಕ ಶಾಲೆಯು ಇಂದು ... ಹತ್ತಿರ ಸಂಖ್ಯೆಯ ಮಕ್ಕಳೊಂದಿಗೆ ನಳನಳಿಸುತ್ತಿದೆ. ಅದಕ್ಕೊಂದು ...ರಂಗಮಂದಿರ, ಕಂಪ್ಯೂಟರ್ ಮತ್ತು ಇನ್ನಿತರ ಉಪಕರಣಗಳು ಬಂದಿವೆ. ...ಭಾಷೆಯಾಗಿ ಇಂಗ್ಲಿಷನ್ನು ಕಲಿಸಲು ವ್ಯವಸ್ಥೆ ಮಾಡಲಾಗಿದೆ. ಇದರ



ಕುರಿತು ಪ್ರತ್ಯೇಕ ಲೇಖನ ಬರೆಯಬಹುದಾದಷ್ಟು ಮಹತ್ವದ ಬೆಳವಣಿಗೆಗಳು ಅಲ್ಲಿ ಸಂಭವಿಸಿವೆ. ಹಾಗಾಗಿ ಅದರ ವಿವರಕ್ಕೆ ಹೋಗುತ್ತಿಲ್ಲ, ಆದರೆ ಬಹಳ ಖುಷಿಯಿಂದ ಮಾದಹಳ್ಳಿಯ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆ ಬಿಡಿಸಿ ಇಲ್ಲಿಗೆ ಸೇರಿಸುತ್ತಿರುವ ವಿದ್ಯಮಾನ ಅಲ್ಲಿ ನಡೆದಿರುವುದನ್ನು ಯಾರು ಬೇಕಾದರೂ ಹೋಗಿ ನೋಡಬಹುದು.

ಇದೇ ರೀತಿಯ ಪ್ರಯತ್ನವನ್ನು ಈ ರಾಜ್ಯದಲ್ಲಿ ಕನಿಷ್ಠ 100 ಕಡೆ ಆಯಾ ಶಾಲೆಗಳ ಶಿಕ್ಷಕರು, ಊರಿನ ಹಿರಿಯರು ಅಥವಾ ಸರ್ಕಾರೀ ಶಾಲೆಗಳ ಹಿರಿಯ ವಿದ್ಯಾರ್ಥಿಗಳು ಮಾಡುತ್ತಿದ್ದಾರೆ. ಅವುಗಳಲ್ಲಿ ಕನಿಷ್ಠ 10ರ ಕುರಿತು ಈ ಅಂಕಣಕಾರನಿಗೆ ನೇರ ಮತ್ತು ಸಂಪೂರ್ಣ ಮಾಹಿತಿಯಿದೆ. ಇಂತಹ ಪ್ರಯತ್ನ ನಡೆಯಲೇಬೇಕೆಂದು ಭಾವಿಸುತ್ತಿರುವ ಸಾವಿರಾರು ಶಿಕ್ಷಕರೂ ಇದ್ದಾರೆ. ಪ್ರಯತ್ನಕ್ಕೆ ಯಾರಾದರೂ ಮುಂದಾದರೆ ಅದಕ್ಕೆ ಕೈ ಜೋಡಿಸುವ ಉಮೇದು ಅವರಲ್ಲಿದೆ. (ಅಂತಹ ಉಮೇದು ಸತ್ತು ಹೋಗಿರುವ ಇನ್ನೂ ಹೆಚ್ಚಿನ ಶಿಕ್ಷಕರು ಇರುವುದನ್ನು ನಿರಾಕರಿಸುತ್ತಿಲ್ಲ; ಆದರೆ ಅದಷ್ಟೇ ಸತ್ಯವಲ್ಲ)

ಇದಕ್ಕಿಂತ ವ್ಯಾಪಕ ಜನಾಭಿಪ್ರಾಯ ಸಂಗ್ರಹಣೆಯನ್ನು ಮಾಡಬೇಕಾದರೆ, ಪ್ರಸ್ತುತ ಕರ್ನಾಟಕದ 50ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಪ್ರದರ್ಶಿತವಾಗುತ್ತಿರುವ 'ಅಭಿಮನ್ಯು' ಸಿನಿಮಾದ ವೀಕ್ಷಕರನ್ನು ಮಾತನಾಡಿಸಬೇಕು. ಅಖಿಲ ಭಾರತ ಸಮಾನ ಶಿಕ್ಷಣ ಜಾಥಾ ನಡೆಯುತ್ತಿರುವ ಸಂದರ್ಭದಲ್ಲೇ ಅದರ ಪ್ರಚಾರಕ್ಕಾಗಿ ಮಾಡಿದ ಸಿನಿಮಾವೇನೋ ಎಂಬಂತೆ, ಅಭಿಮನ್ಯು ಸಿನಿಮಾದ ಕಥೆ ಹಾಗೂ ನಿರೂಪಣೆ ಇದೆ. ಸಿನಿಮಾ ನೋಡಿ ಬಂದವರೆಲ್ಲರೂ ತಮ್ಮ ಮನದಾಳದಿಂದ ಖಾಸಗಿ ಶಾಲಾ ವ್ಯವಸ್ಥೆಯ ವಿರುದ್ಧ, ಶಿಕ್ಷಣವು ಒಂದು ದಂಧೆಯಾಗಿರುವುದರ ವಿರುದ್ಧ ಎಲ್ಲೆಡೆ ಮಾತನಾಡುತ್ತಿದ್ದಾರೆ. ಇದನ್ನು ಸಿನಿಮಾಕ್ಕೆ ಹೋಗಿ ಬಂದವರ ಬಾಯಲ್ಲಿ ನೀವೇ ಕೇಳಿದರೆ ಚೆನ್ನ. ●



ಕಾಕತ್ಕರ್ ಹುಚ್ಚು ಮನಸ್ಸಿನ ಹತ್ತಾರು ವ್ಯಥೆಗಳು

ಏನೋ ಅಪೂರ್ಣಗೊಂಡಂತೆ, ಈಡೇರದೇ ಉಳಿದಂತೆ ದೀರ್ಘ ನಿದ್ದೆಗೆ ಜಾರಿದ್ದಾರೆ ಕಾಕತ್ಕರ್. ಭಗ್ನ ಕನಸುಗಳೆಲ್ಲ ಅವಶೇಷವಾದಂತೆ ಮಲಗಿದ್ದಾರೆ. ಇನ್ನೆಂದಿಗೂ ಏಳಲಾರರು. ಕಪ್ಪಿಟ್ಟ ಮುಖ, ಮೂಗಿನ ಹೊಳ್ಳೆಗಳಿಗೆ ಹತ್ತಿ ಬಿಗಿದು ಕಟ್ಟಿದ ಶಿರವಸ್ತ್ರ ಮತ್ತು ಕಳೇಬರದುದ್ದಕ್ಕೂ ಹೂಹಾರಗಳು. ಆ ಸುಂದರ ನಗೆ, ಕೆಂಪು ಕೆಂಪು ಗಲ್ಲ, ನೀಳಕಾಯ, ಕರ್ಣಾಕರ್ಷಕ ಕಂಠ ಮತ್ತು ಅದೇ ಮೊನಚಾದ ಮಾತೇನಿದ್ದರೂ ಇನ್ನು ನೆನಪಷ್ಟೆ.

ಐವತ್ಮೂರು ಸಾಯುವ ವಯಸ್ಸೇನಲ್ಲ. ಆದರೆ ಎಲ್ಲಕ್ಕೂ ಒಂದು ಕೊನೆಯಿರಲೇಬೇಕಲ್ಲ!

'ಐಟ್ ಲಗಾ... ಇದು ನೋಡು ವರಸೆ ಅಂದ್ರೆ. ನೋಡಕ್ಕೆ ವೀಕ್ ಆಗಿ ಕಾಣಿಸ್ತೀನಿ ಅಂತ ಈ ಕಾಕತ್ಕರ್ ಕೈಲಿ ಏನೂ ಆಗಲ್ಲ ಅಂದ್ಕೊಂಡ್ ಬಿಟ್ರಾ? ಇದು ಗಟ್ಟಿ ಜೀವ. ನೋಡ್ತಾ ಇರು ಎಂಥಾ ಸಿನಿಮಾ ಮಾಡ್ತೀನಿ ಅಂತಾ. ಇಡೀ ಗಾಂಧಿನಗರಾನೇ ಮುಟ್ಟಿ ನೋಡ್ಕೋಬೇಕು. ಅಂಥಾದ್ದೊಂದು ಸ್ಟೋರಿ ನಾನೇ ಬರ್ದಿದ್ದೀನಿ. ಅದು ಮುಗೀತಿದ್ದಂತೆ ನಂದೇ ಒಂದು ನ್ಯೂಸ್ ಚಾನಲ್ ಶುರು ಮಾಡ್ತೀನಿ. ಯಾರೂ ಮಾಡಿರಬಾರದು, ಅಷ್ಟು ಡಿಫರೆಂಟಾಗಿ ಸುದ್ದಿ ಕೊಡ್ತೀನಿ. ಈ ನನ್ ಮಕ್ಕಳಿಗೇನ್ ಗೊತ್ತು, ಜನಾ ಹುಚ್ಚೆದ್ದು ನೋಡೋ ಥರ ಹೇಗೆ ಮಾಡ್ಬೇಕು ಅಂತ...?' ಇಲ್ಲಿಗೆ ಮೂರು ತಿಂಗಳ ಹಿಂದಷ್ಟೇ ಕಾಕತ್ಕರ್ ಸಿಕ್ಕ ಸಿಕ್ಕವರಿಗೆಲ್ಲ ಚುಚ್ಚುತ್ತಿದ್ದ ರೀತಿಯಿದು. ಆದರೆ ವಿಧಿ ನಿರ್ಧಾರವೇ ಬೇರೆಯಿತ್ತೆಂಬುದು ಪಾಪ ಅವರಿಗೆ ತಾನೇ ಹೇಗೆ ಅರ್ಥವಾದೀತು?

ಕರ್ನಾಟಕ ಕಂಡ ಅತ್ಯಂತ ವಿವಾದಾತ್ಮಕ ಪತ್ರಕರ್ತ ಬಾಲಕೃಷ್ಣ ಕಾಕತ್ಕರ್ ಇನ್ನಿಲ್ಲ. ಮೊದಲು ಪುಡಿ ರೌಡಿ ಗ್ಯಾಂಗೊಂದರಿಂದ ಮಾರಣಾಂತಿಕ ಪೆಟ್ಟು ತಿಂದೂ ಬದುಕುಳಿದದ್ದು, ಆನಂತರ ತನ್ನ ಕಾರಿನ ಡ್ರೈವರ್ ಮೇಲೆಯೇ ಗುಂಡು ಹಾರಿಸಿ ಜೈಲು ಪಾಲಾಗಿದ್ದು, ಅದೇ ಹೊತ್ತಿಗೆ ಕ್ರೈಂಸ್ಟೋರಿ ಕರ್ನಾಟಕದ ಮನೆ ಮಾತಾಗಿದ್ದು, ಅವರ ಕಂಚಿನ ಕಂಠಕ್ಕಾಗಿ, ಸಿನಿಮಾ ಡೈರೆಕ್ಟರ್‌ಗಳು ಸಾಲುಗಟ್ಟಿದ್ದು, ಇಷ್ಟೆಲ್ಲಾ ಜನಪ್ರಿಯತೆ, ಉತ್ಪತ್ತಿಯಿದ್ದಾಗಲೂ ಅವರ ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದು, ಅದರ ಬೆನ್ನಲ್ಲೇ ತಮ್ಮ ಇಳಿವಯಸ್ಸನ್ನೂ ಲೆಕ್ಕಿಸದೆ ಕಾಕತ್ಕರ್ ಇನ್ನೊಂದು ಮದುವೆಯಾಗಿದ್ದು, ಈಗ ತೀರ ಅನಿರೀಕ್ಷಿತವೆಂಬಂತೆ ಏಕಾಏಕಿ ಸಾವಿನ ಕುಣಿಕೆಗೆ ಸಿಲುಕಿದ್ದು ಅವರ ಬದುಕಿನ ವೈರುಧ್ಯಗಳಷ್ಟೇ ವಿಚಿತ್ರವೂ ಹೌದು. ವಿಕಟ ಕೂಡ.

ಕ್ರೈಂಸ್ಟೋರಿ

ಬಹುಶಃ ಅವರಷ್ಟು ವೇಗವಾಗಿ ಬೆಳೆದು ಅಷ್ಟೇ ಪಜೀತಿಗೆ ಬಿದ್ದ ಮತ್ತೊಬ್ಬ ಪತ್ರಕರ್ತನನ್ನು ಜನ ಕಂಡಿರಲಿಕ್ಕಿಲ್ಲ. 2005ರ ಹೊತ್ತಿಗೆ ಕಾಕತ್ಕರ್ ಎಂದರೇನೇ ಜನ 'ಐಟ್ ಲಗಾ' ಎಂದು ಚೀಪ್ಸ್ಗಿಳಿಯುತ್ತಿದ್ದ ಕಾಲವಿತ್ತು. ಮೊದಲು ಈ ಟೀವಿಯಲ್ಲಿ ಕ್ರೈಂ ಡೈರಿ, ಆನಂತರ ಉದಯ ವಾಹಿನಿಯಲ್ಲಿ ಕ್ರೈಂ ಸ್ಟೋರಿಗಳು ಆ ಮಟ್ಟದಲ್ಲಿ ಟೀವಿ ವೀಕ್ಷಕರನ್ನು ಹುಚ್ಚೆಬ್ಬಿಸಿತ್ತು. ಅದು ಕಾಕತ್ಕರ್ ಕಂಠದ ಮೋಡಿ. ಅಲ್ಲಿಯತನಕ ಕಾಕತ್ಕರ್ ಎಂಬ ಹೆಸರು ಸೀಮಿತವಾಗಿದ್ದು ಕನ್ನಡದ ಟ್ಯಾಬ್ಲೋಯ್ಡ್ ಲೋಕಕಷ್ಟೆ. ಹಿರಿಯ ಪತ್ರಕರ್ತ ವೈಕುಂಠರಾಜು ಸಂಪಾದಕತ್ವದಲ್ಲಿ ಬರುತ್ತಿದ್ದ ವಾರಪತ್ರಿಕೆಯೇ ಅವರ ಅಖಾಡವಾಗಿತ್ತು. ನಡುವೆ ಕೆಲದಿನಗಳ ಕಾಲ 'ರಂಗವಲ್ಲಿ' ಎಂಬ ಸಿನಿಮಾ ಪತ್ರಿಕೆಯನ್ನು ತಂದರಾದರೂ ಯಾಕೋ ಅದು ಕೈಹಿಡಿಯಲಿಲ್ಲ. ವಾರಪತ್ರಿಕೆ ಆ ಕಾಲದಲ್ಲಿ 'ಲಂಕೇಶ್ ಪತ್ರಿಕೆ'ಗೆ ಪರ್ಯಾಯವೆಂಬಂತೆ ಬಿಂಬಿಸಲ್ಪಟ್ಟಿದ್ದಕ್ಕೋ ಏನೋ ಕಾಕತ್ಕರ್ ಬರವಣಿಗೆಯೂ ಅಷ್ಟೇ ಮೊನಚಾಗಿತ್ತು. ಬಾಲಕೃಷ್ಣ ಕಾಕತ್ಕರ್ ಎಂಬುದನ್ನು ವೈಕುಂಠರಾಜು ತಮ್ಮದೇ ವಿಕಟಾರ್ಥದಲ್ಲಿ 'ಬಾಲಕ' ಎಂದು ಛೇಡಿಸುತ್ತಿದ್ದರು. ಕಾಕಪಾಲೀಯವೋ ಏನೋ ಕಾಕತ್ಕರ್ ಮನಸ್ಥಿತಿಯಲ್ಲೇ ಬಾಲಕನೊಬ್ಬ ಬೆಳೆಯದೇ ಉಳಿದುಬಿಟ್ಟಿದ್ದ!



ಬಾಲಕೃಷ್ಣ ಕಾಕತ್ಕರ್ ಇನ್ನೇನಿದ್ದರೂ ನೆನಪು ಮಾತ್ರ

ಗೆಳೆಯರ ಪಾಲಿಗೆ ಕಾಕ, ವೈಕುಂಠರಾಜು ಬಾಯಿಗೆ ಬಾಲಕ, ಲೇಖನಿಯಲ್ಲಿ ಕಾಕತ್ಕರ್ ಬರವಣಿಗೆಯಲ್ಲಿ ಸಾಧಿಸಿದ್ದಕ್ಕಿಂತಲೂ ವಿವಾದದಲ್ಲಿ ಸಿಲುಕಿದ್ದೇ ಹೆಚ್ಚು. ಬೆಂಗಳೂರಿನ ಪತ್ರಕರ್ತರ ವಲಯದ ಮಟ್ಟಿಗೆ 'ಕಾಕ-ಸಾಚಾ' ಜೋಡಿಯೆಂದರೇನೇ ಅನೇಕರ ಕಿವಿ ನೆಟ್ಟಗಾಗುತ್ತಿದ್ದ ಕಾಲವೂ ಇತ್ತು. ರಾಹು-ಕೇತುಗಳಂತೆ ಕಾಕಾ-ಸಾಚಾ ಜೋಡಿ ಯಾರದಾದರೂ ರಾಶಿಗೆ ಪ್ರವೇಶಿಸಿತೆಂದರೆ ಕತೆ ಮುಗಿದಂತೆಯೇ ಲೆಕ್ಕ. ಪತ್ರಿಕಾಗೋಷ್ಠಿಗಳಲ್ಲೂ ಅಷ್ಟೇ; ಕಾಕ ಸಾಚಾ ಬಂದರೆಂದರೆ ಗೋಷ್ಠಿ ಕರೆದವನ ಗ್ರಾಚಾರ ಕೆಟ್ಟಂತೆಯೆ. ಕಾಕನ ಜೊತೆ ಸದಾ ಓಡಾಡಿಕೊಂಡಿದ್ದ ಸಾಚಾ ಎಂದರೆ ಅದು ಫ್ರೀಲಾನ್ಸ್ ಪತ್ರಕರ್ತ ಸಾ. ಚಂದ್ರಶೇಖರ ರಾವ್!

ಇಬ್ಬರದ್ದೂ ಅಲೆಮಾರಿ ಬುದ್ಧಿ. ಎಲ್ಲಿಯೂ ನೆಲೆ ನಿಲ್ಲುವ ಜಾಯಮಾ... ಇಂಥದ್ದೇ ಪತ್ರಿಕೆ, ಇಂಥದ್ದೇ ಸಂಸ್ಥೆ ಎಂದಿಲ್ಲ. ಕೆಲವೊಮ್ಮೆ ಜಾಣಗ... ಮಾರ್ದನಿ. ಇನ್ನೊಮ್ಮೆ ವೈಕುಂಠ ರಾಜುರ ಗೋಧೂಳಿ. ಮತ್ತೊಮ್ಮೆ... ವೆಂಕಟೇಶ್‌ರ ಈ ಸಂಜೆ. ಮಗದೊಮ್ಮೆ ರಾಜಹನ್ಸ್ ಬಾಲಿಯವರ ಸಿ... ಪತ್ರಿಕೆ. ಮೂಲತಃ ಸಿನಿಮಾ ಪತ್ರಕರ್ತರಾಗಿಯೇ ಬರವಣಿಗೆಗಿಳಿದ ... ಪಾಲಿಗೆ ವೈಕುಂಠ ರಾಜು ಗಾಡ್‌ಫಾದರ್ ಆದರೆ ಗಾಡ್‌ಮದರ್ ಅ... ವಿಜಯಮ್ಮ. ಬೆಂಗಳೂರು ಪತ್ರಿಕೋದ್ಯಮದಲ್ಲಿ ಕುಚೋದ್ಯವೊಂದು ಚಾಲ್ತಿಯ... ಆ ಪ್ರಕಾರ ಸಿನಿಮಾ ಪತ್ರಕರ್ತರಾದವರಿಗೆ ಶತ್ರುಗಳೇ ಬೇಕಿಲ್ಲ. ಏಕ... ಪ್ರತಿನಿತ್ಯ ಒಂದಲ್ಲ ಒಂದು ಸಿನಿಮಾ ಸಂಬಂಧಿ ಪಾರ್ಟಿಗಳಿದ್ದೇ ಇರ... ಇಂಥ ಪ್ರತಿ ಸಿನಿಮಾಗೋಷ್ಠಿಯಲ್ಲೂ ಪತ್ರಕರ್ತರಿಗೆ ಕಂಠಮಟ್ಟ ಗು... ಹೊಟ್ಟೆ ಬಿರಿಯೇ ಹುಂಡು. ಒಮ್ಮೆ ಸಿನಿಮಾ ವರದಿಗಾರಿಕೆಯ ಚಟಕ್ಕೆ ಬಿದ್ದ... ಮುಗಿದೇ ಹೋಯಿತು. ಪ್ರತಿ ಸಂಜೆಯಾದರೆ ಸಾಕು ವಿಸ್ಕಿ, ಬ್ರಾಂಡಿ ಬೇಕೇ... ಕುಡಿಕುಡಿದೇ ಲಿವರ್ ತೂತು ಬಿದ್ದು ನಾಶವಾಗಿ ಹೋದ ಸಿನಿಮಾ ಪತ್ರ... ಸಾಲಿಗೆ ತನಗರಿವಿಲ್ಲದೆಯೇ ಸೇರ್ಪಡೆಯಾದವರು ಕಾಕತ್ಕರ್!

ಎದೆಗೇ ಚಾಕು

ಕುಡಿತ ಅವರ ಅತಿ ದೊಡ್ಡ ದೌರ್ಬಲ್ಯ. ಜೊತೆಗೆ ಕ್ರೈಂ ಬಗೆಗಿನ ವ್ಯಾಮೋ... ದಿನವೊಂದಕ್ಕೆ ಕಮ್ಮಿಯೆಂದರೂ ನಾಲ್ಕು ಪ್ಯಾಕ್ ಸಿಗರೇಟು ಸುಡಲೇ... ಇವೆಲ್ಲಕ್ಕೂ ಹೇಳಿ ಮಾಡಿಸಿದಂತಿದ್ದ ಹುಂಬತನ. ಇವೆಲ್ಲವನ್ನೂ ವಿ... ಪ್ರತಿಷ್ಠೆ ಬೇರೆ. ವೈಕುಂಠ ರಾಜು ವಾರಪತ್ರಿಕೆ ಒಂದು ಹಂತಕ್ಕೆ ಬ... ನಿಂತಿದ್ದ ಕಾಲವದು. ಅದೇ ಹೊತ್ತಿಗೆ ಯಾರೋ ಮನಚಂದಾ ... ಮಾರ್ವಾಡಿಯೊಬ್ಬನನ್ನು ಹಿಡಿದು ಹಾಕಿದ್ದ ವೈಕುಂಠ ರಾಜು ಮಗ ... 'ಗೋಧೂಳಿ' ಎಂಬ ಸಂಜೆ ಪತ್ರಿಕೆಯೊಂದನ್ನು ಶುರುವಿಟ್ಟರು. ಅ... ಮದುವೆಯಾಗಿದ್ದ ಕಾಕತ್ಕರ್ ಆ ಹೊತ್ತಿಗೆ ಬೆಂಗಳೂರು ಹೊರವಲಯ...



ತಾಯಿ-ತಂದೆ ಹಾಗೂ ಸಹೋದರಿಯರೊಂದಿಗೆ ಬಾಲಕೃಷ್ಣ ಕಾಕತ್ಕರ್

...ಯಲ್ಲಿದ್ದ ಕುರುಬರಹಳ್ಳಿಯಲ್ಲೊಂದು ಬಾಡಿಗೆ ಮನೆ ಹಿಡಿದರು. ...ವೃಷಭಾವತಿ ಮೋರಿಯ ದಂಡೆಯಲ್ಲಿ ಹೋಗಿ ಹೋಗಿ ಮನೆ ಮಾಡಿದ ...ನ ಮನಸ್ಥಿತಿಯೇ ಅವತ್ತು ಅನೇಕ ಪತ್ರಕರ್ತರಿಗೆ ವಿಚಿತ್ರವಾಗಿ ಕಂಡಿತ್ತು. ...ಕಾಲಕ್ಕೆ ಕುರುಬರಹಳ್ಳಿ ಈಗಿನಷ್ಟು ನಾಜೂಕಿರಲಿಲ್ಲ. ರಾಜಾಜಿನಗರದ ...ಥದು ಸ್ಲಮ್ಮಿನಂತೆ ಕಾಣಿಸುತ್ತಿತ್ತು. ಮನೆಕೆಲಸದವರು, ಪೇಂಟರ್‌ಗಳು, ...ಡ್ರೈವರ್‌ಗಳು, ತಳ್ಳುಗಾಡಿಯವರು, ಗಾರೆ ಕೆಲಸದ ಮಂದಿಯಿಂದಲೇ ...ಬಿದ್ದ ವೃಷಭಾವತಿ ಮೋರಿ ಏರಿಯಾದ ಕಟ್ಟಾ ಕೊಳಕು ಬಾರ್ ಒಂದರಲ್ಲಿ ...ನ 'ಪಟ್ಲಾಂಗ' ಶುರುವಾಯಿತು. ಅರೆಬರೆ ನಿರುದ್ಯೋಗಿ ಪತ್ರಕರ್ತರನ್ನು ...ತೆ ಹಾಕಿಕೊಂಡು ಬೆಳ್ಳಂಬೆಳಗ್ಗೆ ಕುಡಿಯಲು ಕೂತರೆಂದರೆ ಅದು ...ಗಿಯುತ್ತಿದ್ದದ್ದು ಬಾರ್ ಮುಚ್ಚುವ ಹೊತ್ತಿಗೇನೆ!

...ಹಾಗೆ ಬಾರಿನಲ್ಲಿ ಪರಿಚಯವಾಗಿದ್ದು ಅದೇ ಕೊಂಪೆಯ ಪೋರ್ಕಿ ಗ್ಯಾಂಗು. ...ಬಿಟ್ಟರೆ ಆ ಗ್ಯಾಂಗ್ ಪೂರ್ತಿ ತನಗೆ ಶಿಷ್ಯರಾಗಿ ಬಿಡುತ್ತಾರೆಂಬ ಭ್ರಮೆಗೆ ...ಕಾಕ ಬಾರಿಗೆ ಬಂದಾಗೆಲ್ಲ ಆ ಹುಡುಗರನ್ನು ಜೊತೆ ಹಾಕಿಕೊಳ್ಳುತ್ತಿದ್ದರು. ...ಬರುತ್ತ ಅವರ ಮೇಲೆ ಸಲಿಗೆ ಪಡೆದ ಕಾಕ ಒಂದು ಹಂತದಲ್ಲಿ ಗ್ಯಾಂಗಿನ ...ಬಾಸ್ಥನನ್ನೇ ಬಯ್ಯಲಾರಂಭಿಸಿದರು. ಅದೊಮ್ಮೆ ಎಂಥಾ ವಿಪರೀತಕ್ಕೆ ...ಯಿತೆಂದರೆ ಪುಡಿರೌಡಿಯೊಬ್ಬ ಕಾಕನ ಎದೆಗೇ ಚಾಕು ಚುಚ್ಚಿಬಿಟ್ಟ. ...ಬ್ಬರಿ ಮೂರು ತಿಂಗಳ ಕಾಲ ಸ್ಯಾನಿಟೋರಿಯ ಆಸ್ಪತ್ರೆ ಸೇರಿದ ಕಾಕ ...ಂದ ಹೊರಬರಲು ವರ್ಷಗಳೇ ಹಿಡಿದವು. ಕೊಲೆ ಯತ್ನದ ಕೇಸಿನಲ್ಲಿ ...ಸೇರಿದ ಆ ಪುಡಿ ರೌಡಿಗೆ ಸಜಾ ಆಗುವ ತನಕ ಕಾಕ ಹಠಕ್ಕೆ ಬಿದ್ದ. ...ಂತ ರೌಡಿ ಬಿಡುತ್ತಾನಾ? ಶಿಕ್ಷೆಯಾದರೂ ಪೆರೋಲಿನ ಮೇಲೆ ಬಂದವನೇ ...ನ್ನು ಮುಗಿಸೇ ಬಿಡಲು 'ಕ್ರೈಂ ಡೈರಿ' ಕಾರ್ಯಕ್ರಮ ನಡೆಯುತ್ತಿದ್ದ ಈ ಟೀವಿ ...ಗೇ ಲಾಂಗು ಮಚ್ಚು ಹಿಡಿದು ದಾಳಿಯಿಟ್ಟ.

...ಕ್ಕಿದ್ದರೆ ಅವತ್ತೇ ಕಾಕನ ಕತೆ ಮುಗಿಯುತ್ತಿತ್ತು. ಅದೃಷ್ಟವಶಾತ್ ಕಾಕ ...ಪಾದರಾದರೂ ಅವರ ಇಬ್ಬರು ಡ್ರೈವರ್‌ಗಳು ಮಾರಕವಾಗಿ ಗಾಯಗೊಂಡರು. ...ಕಿ ಒಬ್ಬನ ಕಾಲನ್ನೇ ರೌಡಿ ಕತ್ತರಿಸಿ ಹಾಕಿದ್ದ!

ರಿವಾಲ್ವರ್ ಪ್ರತಾಪ

...ಕ್ಕಸಿಕ್ಕಲ್ಲಿ ಕುಡಿತ ಮತ್ತು ಕ್ರೈಮಿನ ವ್ಯಾಮೋಹ ಪತ್ರಕರ್ತನೊಬ್ಬನನ್ನು ...ಅಪಾಯಕ್ಕೆ ಸಿಲುಕಿಸುತ್ತದೆ ಎಂಬುದಕ್ಕೆ ಇದಕ್ಕಿಂತ ಬೇಕೆ? ಈ ಮಧ್ಯೆ ...ಯ್ಡ್ ಪತ್ರಿಕೋದ್ಯಮದ ಆಕರ್ಷಣೆಗೆ ಬಿದ್ದು 'ರಾಜಧಾನಿ ಬೆಂಗಳೂರ್' 'ಹಾಯ್...!' ಥರದ್ದೇ ಪತ್ರಿಕೆಯೊಂದನ್ನು ಪ್ರಾರಂಭಿಸಿದರಾದರೂ ಅದಕ್ಕೆ ...ದ ಶಿಸ್ತು ಮತ್ತು ದೂರದೃಷ್ಟಿ ಕಾಕನಿಗಿರಲಿಲ್ಲ. ಒಂದೇ ವರ್ಷಕ್ಕೆ 'ರಾಜಧಾನಿ ...ಲೂರ್' ನಿಂತುಹೋಯಿತು. ಈ ಟೀವಿಯ ಜೊತೆ ಹಣಕಾಸಿನ ವಿಷಯದಲ್ಲಿ ...ರು ಮಾಡಿಕೊಂಡು ಉದಯ ಟೀವಿಯಲ್ಲಿ ಅದೇ ಟೈಪಿನ 'ಕ್ರೈಂ ಸ್ಟೋರಿ' ...ಭಿಸಿದ್ದು ಕಾಕತ್ಕರ್ ಪಾಲಿಗೆ ಅಕ್ಷರಶಃ ಸುಗ್ಗಿಯಾಗಿತ್ತು.

ಈ ಟೀವಿಯಲ್ಲಿ ಬೆಳಗೆರೆಯವರ ಕ್ರೈಂ ಡೈರಿಯಾದರೆ ಉದಯ ಟೀವಿಯಲ್ಲಿ ...ಕ್ರೈಂ ಸ್ಟೋರಿ. ಜುಗಲ್‌ಬಂದಿ ಎಂಬಂತೆ ಶುರುವಾದ ಕ್ರೈಂ ಧಾರಾವಾಹಿಗಳ ...ಟ ಯಾವ ಮಟ್ಟಕ್ಕೇರಿತೆಂದರೆ ಹೈಕೋರ್ಟ್ ಇಂಥ ಕ್ರೈಂ ಸೀರಿಯಲ್ಲುಗಳ ...ದ್ಧವೇ ಆದೇಶ ಹೊರಡಿಸಬೇಕಾಯಿತು. ಅಷ್ಟಾಗ್ಯೂ ಕ್ರೈಂ ಸೀರಿಯಲ್ಲುಗಳು ...ಲ್ಲ. ವಾರಪೂರ್ತಿ ಪ್ರಸಾರವಾಗುತ್ತಿದ್ದ ಕ್ರೈಂ ಸ್ಟೋರಿ ಕಾಕತ್ಕರ್ ಪಾಲಿಗೆ ...ಹೊಳೆಯನ್ನೇ ಹರಿಸಿತ್ತು. ಬೇರೇನಕ್ಕಲ್ಲದೆಹೋದರೂ ತನ್ನ ಮಾತಿನ ... ಮತ್ತು ಮಾದಕ ಕಂಠಕ್ಕೆ ಮನಸೋತು ಜನ ಕ್ರೈಂ ಸ್ಟೋರಿಗೆ ...ಬೀಳುತ್ತಾರೆಂಬುದು ಅವರ ನಂಬಿಕೆಯಾಗಿತ್ತು. ಹಾಗಂತ ಅದೇ ಮಾತಿನ ... ಐಟ್ಲಾ ಗಿಮ್ಮಿಕ್, ಅದೇ ಮಾಮೂಲಿಯ ಕಂಠವನ್ನು ಜನ ತಾನೇ ...ಷ್ಟು ಅಂತ ನೋಡಿಯಾರು?

...ವಿಷಯದ ಆಯ್ಕೆ, ನಿರೂಪಣೆಯಲ್ಲಿ ವೈವಿಧ್ಯತೆಗೆ ಬದಲಾಗಿ ಧ್ವನಿ ಮತ್ತು ...ಬನೆಗೇ ಮಹತ್ವ ಕೊಟ್ಟ ಕಾಕರ ಕ್ರೈಂಸ್ಟೋರಿ ಬರುಬರುತ್ತ ಏಕತಾನವಾಯಿತು. ...ತ್ತಿದ್ದ ದುಡ್ಡು, ಯಶಸ್ಸು, ಶ್ರೀಮಂತಿಗೆಗೆ ತಕ್ಕಂತೆ ನಾಗರಬಾವಿಯ ಜ್ಞಾನ ... ಲೇಔಟ್‌ನಲ್ಲೊಂದು ಮನೆ ಕಟ್ಟಿಸಿದರು. ಅಲ್ಲೇ ಎಡಿಟಿಂಗ್ ಸೂಟನ್ನು ...ಕೊಂಡರು. ಕುಣಿಗಲ್ ತಾಲ್ಲೂಕು ಮಾರ್ಕೋನಹಳ್ಳಿ ಡ್ಯಾಂ ಬಳಿ ...ತವೊಂದನ್ನು ಖರೀದಿಸಿದರು. ಬೆಂಗಳೂರಿನ ವಿವಿಧೆಡೆ ಸೈಟುಗಳು ...ವು. ಹೊನ್ನಾವರದ ಕಡಲದಂಡೆಯಲ್ಲೊಂದು ತೆಂಗಿನ ತೋಟ ಕೊಂಡರು. ... ಹುಟ್ಟುಗುಣ ಮಾತ್ರ ಬಿಡಲಿಲ್ಲ. ಸಂಜೆಯಾದರೆ ಸಾಕು ವಿಸ್ಕಿ ಬಾಟಲು ...ಕೊಂಡರೆಂದರೆ ಅದು ಮುಗಿಯುತ್ತಿದ್ದದ್ದು ನಡುರಾತ್ರಿ ನಂತರವೇ.


...ದು 2005ರ ನವೆಂಬರ್ 24. ಕಾಕನ ಕ್ವಾಲೀಸ್ ಡ್ರೈವರ್ ವೀರೇಶ್ ...ಜೊತೆ ಮತ್ತೊಬ್ಬ ಡ್ರೈವರ್ ರಾಜಶೇಖರ್ ಮತ್ತು ಬಾಬು, ಅನೀಲ್ ... ಇಬ್ಬರು ಆರ್‌ಟಿಓ ಏಜೆಂಟರನ್ನು ಜೊತೆ ಹಾಕಿಕೊಂಡಿದ್ದೇ ನಡುರಾತ್ರಿ ...ಹೊತ್ತಿಗೆ ಏಕಾಏಕಿ ಕಾಕನ ಮನೆಗೆ ನುಗ್ಗಿದ್ದಾನೆ. ಕೆಲಸದಿಂದ ಕಿತ್ತು ...ಸಿಟ್ಟಿತ್ತಲ್ಲ ಬಹುಶಃ ಕಾಕನನ್ನು ಮುಗಿಸುವ ಗುರಿಯಿಟ್ಟೇ ನುಗ್ಗಿರಬೇಕು. ...ತ ಕಾಕ ಜಗ್ಗುವ ಆಸಾಮಿಯಲ್ಲ, ರಿವಾಲ್ವರ್ ಎತ್ತಿದ್ದೇ ಡ್ರೈವರ್ ವೀರೇಶನ ... ಫೈರ್ ಮಾಡಿದ್ದಾರೆ. ಅದು ಆತನ ಕಿವಿ ಸೀಳಿಕೊಂಡು ಹೋಗಿದೆ. ...ದಿನ ತಾವೇ ಗಾಯಗೊಂಡ ವೀರೇಶನನ್ನು ಆಸ್ಪತ್ರೆಗೆ ಸೇರಿಸಿ ತಾವೇ ...ಸ್ ಠಾಣೆಗೆ ಹೋಗಿ ಕೊಲ್ಲಲು ಬಂದವರ ವಿರುದ್ಧ ದೂರು ...ಸಿದರೂ ಪರಿಸ್ಥಿತಿ ಅವರಿಗೇ ಉಲ್ಟಾ ಹೊಡೆದಿತ್ತು.



ಪತ್ನಿ ಆತ್ಮಹತ್ಯೆ

ಮರುದಿನ ಟೀವಿಗಳ ತುಂಬೆಲ್ಲ 'ಕಾಕತ್ಕರ್ ಕ್ರೈಂಸ್ಟೋರಿ' ಎಂದು ಚಿತ್ರವಿಚಿತ್ರ ಸುದ್ದಿಗಳನ್ನು ಪ್ರಸಾರಗೊಂಡವು. ಮಾಧ್ಯಮಗಳ ಹೊಟ್ಟೆಕಿಚ್ಚಿಗೆ ಕಾಕತ್ಕರ್ ತಲೆ ಕೊಡಬೇಕಾಯಿತು. ಕುಡಿದ ಮತ್ತಿನಲ್ಲಿ ಕಾಕ ತನ್ನ ಡ್ರೈವರ್ ಮೇಲೆಯೇ ಗುಂಡು ಹಾರಿಸಿದರೆಂದೂ, ಡ್ರೈವರ್ ಗುಂಡೇಟು ತಿಂದು ರಾಮಯ್ಯ ಆಸ್ಪತ್ರೆಗೆ ದಾಖಲಾಗಿದ್ದಾರೆಂದೂ, ಪೊಲೀಸರು ಕಾಕನ ಬಂಧನಕ್ಕೆ ಬಲೆ ಬೀಸಿದ್ದಾರೆಂದೂ ಒಂದೇ ಸಮನೆ ಬರುತ್ತಿದ್ದ ಸುದ್ದಿಗಳನ್ನು ನೋಡಿದ್ದೇ ಪೊಲೀಸ್ ವರಸೆಯೇ ಬದಲಾಯಿತು. ಕಾಕತ್ಕರ್ ವಿರುದ್ಧವೇ ಕೊಲೆ ಯತ್ನದ ಕೇಸು ದಾಖಲಿಸಿದ ಪೊಲೀಸರು ರಾತ್ರೋರಾತ್ರಿ ಬಂಧಿಸಿ ಜೈಲಿಗೆ ಹಾಕಿಬಿಟ್ಟರು.

ಅನಾರೋಗ್ಯದ ನೆಪದಲ್ಲಿ ಆಸ್ಪತ್ರೆ ಸೇರಿಕೊಂಡು ಹೇಗೋ ಬಚಾವಾಗಿ ಬಂದ ಕಾಕತ್ಕರ್ ಕೈಯಾರೆ ಯಡವಟ್ಟು ಮಾಡಿಕೊಂಡರು. ಕುಡಿತ ಅವರನ್ನು ಅಸದಳ ಪಜೀತಿಗೆ ಈಡು ಮಾಡಿತ್ತು. ಕ್ರೈಂಸ್ಟೋರಿಯ ಕೀರ್ತಿ, ಜನಪ್ರಿಯತೆ, ವರ್ಚಸ್ಸೆಲ್ಲವೂ ರಾತ್ರೋರಾತ್ರಿ ಮಣ್ಣು ಪಾಲಾಗಿತ್ತು. ಇದರಿಂದ ಪಾಠ ಕಲಿತಿದ್ದರೆ ಕಾಕತ್ಕರ್ ತಮ್ಮ ಜೀವಮಾನದಲ್ಲಿ ಮತ್ತೆಂದೂ ಚೇತರಿಸಿಕೊಳ್ಳಲಾಗದ ಧುರಿತವೊಂದಕ್ಕೆ ಸಿಲುಕುತ್ತಿರಲಿಲ್ಲವೇನೊ.



ಅದು ಅವರ ಪತ್ನಿ ಮನೋರಮಾ ರಶ್ಮಿಯವರ ದುರಂತ. ವಿಪರೀತ ಕುಡಿತ, ನಶೆಯಲ್ಲಿ ಕಳೆದ ಮಾನಸಿಕ ಸ್ಥಿಮಿತಕ್ಕೆ ಅಂತಿಮವಾಗಿ ಕೈಹಿಡಿದ ಪತ್ನಿಯನ್ನೇ ಕಾಕ ಅನುಮಾನಿಸತೊಡಗಿದರು. ಸಣ್ಣಪುಟದ್ದಕ್ಕೂ ಕೆಂಡಮಂಡಲರಾಗಿ ಪತ್ನಿಯನ್ನೇ ಪೀಡಿಸಲಾರಂಭಿಸಿದರು. ಇದು ಎಷ್ಟರಮಟ್ಟಿಗೆ ಬಂತೆಂದರೆ 2006ರ ಹೊತ್ತಿಗೆ ಪತ್ನಿ ರಶ್ಮಿಯೇ ಕಾಕನಿಂದ ದೂರವಾಗುವ ನಿರ್ಧಾರಕ್ಕೆ ಬಂದುಬಿಟ್ಟರು.

ಆದರೆ ಹೆಂಡತಿ ಹೆಸರಿಗೆ ಮಾಡಿದ ಆಸ್ತಿಯಿತ್ತಲ್ಲ, ಅದೆಲ್ಲವನ್ನೂ ತನಗೆ ಬರೆದುಕೊಡುವಂತೆ ಕಾಕ ಹಠಕ್ಕೆ ಬಿದ್ದ. ಇದರಿಂದ ಮತ್ತಷ್ಟು ಕಂಗೆಟ್ಟ ರಶ್ಮಿ ವರಸೆಯಲ್ಲಿ ತನಗೆ ಅಣ್ಣನಾಗಬೇಕಾದ ಇಂದುಶೇಖರ್ ಭಿಡೆ ಜೊತೆ ದೆಹಲಿಗೆ ಹೋಗಿ ಅಲ್ಲಿ ಹೋಟೆಲೊಂದರಲ್ಲಿ ತಂಗಿದ್ದು ಮರುದಿನ ಇಬ್ಬರೂ ಗಂಗಾನದಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುವ ತಯಾರಿಯಲ್ಲಿದ್ದರು. ಇದು ಹೇಗೋ ಕಾಕನಿಗೆ ಗೊತ್ತಾಗಿ ಕಾಕ ದೆಹಲಿಯಿಂದ ಅವರಿಬ್ಬರನ್ನೂ ಕರೆತಂದು ಪತ್ರಕರ್ತ ಶಶಿಧರ ಭಟ್ಟರ ಮನೆಯಲ್ಲಿ ಪಂಚಾಯ್ತಿ ಸೇರಿಸಿದ್ದ. ರಾತ್ರಿಯಿಡೀ ಪಂಚಾಯ್ತಿ ನಡೆದು ಪತ್ನಿ ತನ್ನ ಹೆಸರಲ್ಲಿದ್ದ ಆಸ್ತಿ ಹಿಂತಿರುಗಿಸುವುದು ಮತ್ತು ಪತ್ನಿಗೆ ಸೂಕ್ತ ಪರಿಹಾರ ಕೊಟ್ಟು ಬೇರ್ಪಡುವುದೆಂದು ನಿರ್ಧಾರಕ್ಕೆ ಬಂದಾಗಿತ್ತು.

ಕೈಕೊಟ್ಟ ಕಿಡ್ನಿ

ಆದರೆ ಪತ್ನಿ ರಶ್ಮಿಯ ನಿರ್ಧಾರವೇ ಬೇರೆಯಿತ್ತು. ಭಟ್ಟರ ಮನೆಯಲ್ಲಿ ಪತಿಪತ್ನಿ ಬೇರ್ಪಡುವ ನಿರ್ಧಾರವಾದ ನಾಲ್ಕು ಗಂಟೆಯೊಳಗೆ ಪತ್ನಿ ರಶ್ಮಿ ಸಾವಿಗೆ ಶರಣಾಗಿದ್ದರು. ಅಂದರೆ ಸಯನೈಡ್ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಾಗಿತ್ತು. ರಶ್ಮಿ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಕೇಳಿದ್ದೇ ಅಣ್ಣ ಇಂದುಶೇಖರ್ ಕೂಡ ಸಯನೈಡ್ ತಿಂದು ಆತ್ಮಹತ್ಯೆ ಮಾಡಿಕೊಂಡ. 2007ರ ಜನವರಿ 17 ಕಾಕನ ಪಾಲಿಗೆ ಭಯಾನಕವಾಯಿತು. ಮರುದಿನ ಟೀವಿಗಳೆಲ್ಲ ಕಾಕತ್ಕರ್ ಪತ್ನಿಯ ಆತ್ಮಹತ್ಯೆಯನ್ನೇ ಬ್ರೇಕಿಂಗ್ ನ್ಯೂಸ್ ಮಾಡಿಬಿಟ್ಟವು.

ಕೈಹಿಡಿದ ಮಡದಿಯ ಆತ್ಮಹತ್ಯೆ, ಅನಾಥನಾದ ಮಗನ ದುಸ್ಥಿತಿ, ಅದಕ್ಕೂ ಮುನ್ನ ಮನೆಯಲ್ಲೇ ನಡೆದ ಶೂಟೌಟ್, ಸಾಮಾಜಿಕವಾಗಿ ಆದ ಅವಮಾನ, ಅದಕ್ಕೆ ಸರಿಯಾಗಿ ಉದಯ ಟಿವಿ ಕ್ರೈಂ ಸ್ಟೋರಿಯನ್ನು ನಿಲ್ಲಿಸಿದ್ದರ ಸಂಕಷ್ಟ- ಹೀಗೆ ಏಟುಗಳ ಮೇಲೆ ಏಟು, ಪೆಟ್ಟಿನ ಮೇಲೆ ಪೆಟ್ಟು ಬಿದ್ದು ಕಾಕತ್ಕರ್ ಜರ್ಜರಿತರಾದರು. ಸಾಲದೆಂಬಂತೆ ಸಕ್ಕರೆ ಕಾಯಿಲೆ ಬೇರೆ. ಅದಕ್ಕೆ ಸಂಗಾತಿಯೋ ಎಂಬಂತೆ ಬಿಪಿ, ಕುಡಿತವೆಂಬುದು ಪ್ರಾರಬ್ಧಕರ್ಮದಂತಾಗಿ ಹೋಯಿತು. ಬೆಳ್ಳಂಬೆಳಗ್ಗೆಯೇ ಬಾಟಲು ಹಿಡಿಯುತ್ತಿದ್ದರು. ಸಿಗರೇಟು ಅನ್ನಾಹಾರವನ್ನೇ ಮೀರಿಸಿ ಮೈಗಂಟಿತ್ತು.

ಯಾರಾದರೂ ಪ್ರಶ್ನಿಸಿದರೆಂದರೆ ಇಷ್ಟರಲ್ಲೇ ಅದ್ಭುತ ಸಿನಿಮಾ ಮಾಡ್ತೀನಿ ಅನ್ನುತ್ತಿದ್ದರು. ನಾಗತಿಹಳ್ಳಿಯನ್ನು ಮನೆಗೆ ಕರೆಸಿಕೊಂಡು ಚಿತ್ರಕತೆಯ ತಯಾರಿಯನ್ನೂ ಮಾಡಿದ್ದರು. ಅದನ್ನು ಅರ್ಧಕ್ಕೇ ಕೈಬಿಟ್ಟು 'ಮೆಟ್ರೋ ಇದು ರೈಲಲ್ಲ ಜೈಲು' ಎಂಬ ಪುಸ್ತಕ ಬರೆದರು. ತಾನೇ ನ್ಯೂಸ್ ಚಾನಲ್ ಒಂದನ್ನು ಪ್ರಾರಂಭಿಸುತ್ತೇನೆಂದು ಪದೇಪದೇ ಬಾಂಬೆಗೆ ಹೋಗಿಬಂದರು. ಚಾನಲ್ ತೆರೆಯಲು ಪಾಲುದಾರಿಕೆಗೆ ದಿನಕ್ಕೊಬ್ಬರು ರೊಕ್ಕಸ್ಥರನ್ನು ಕಾಣುತ್ತಿದ್ದರು. ಆದರೆ ಯಾವುದಕ್ಕೂ ಕಾಲ ಕೂಡಿ ಬರಬೇಕಲ್ಲ. 2014ರ ಆಗಸ್ಟ್ ಹೊತ್ತಿಗೆ ಇದ್ದಕ್ಕಿದ್ದಂತೆ ತಲೆತಿರುಗಿ ಬಿದ್ದ ಕಾಕರನ್ನು ರಾಮಯ್ಯ ಆಸ್ಪತ್ರೆಗೆ ಸೇರಿಸಿದರೆ ಅಲ್ಲಿ ಗೊತ್ತಾಗಿದ್ದು ಅವರ ಎರಡೂ ಕಿಡ್ನಿಗಳು ವಿಫಲಗೊಂಡಿದ್ದು. ರಕ್ತದಲ್ಲಿ ಕ್ರಿಯೇಟಿನ್ ಪ್ರಮಾಣ ವಿಪರೀತವಾಗಿತ್ತು. ಮೊದಮೊದಲು ವಾರಕ್ಕೆ 2 ಬಾರಿ ನಡೆಸುತ್ತಿದ್ದ ಡಯಾಲಿಸಿಸ್ ಅಕ್ಟೋಬರ್ 1ರ ಹೊತ್ತಿಗೆ ಪ್ರತಿನಿತ್ಯ ಮಾಡುವಂತಾಯಿತು. ತಿಂಗಳು ಪೂರ್ತಿ ಎಂ.ಎಸ್. ರಾಮಯ್ಯ ಆಸ್ಪತ್ರೆಯ ಐಸಿಯುನಲ್ಲೇ ಕಳೆದು ಕಾಕತ್ಕರ್ ಬೆಂಡೆದ್ದು ಹೋದರು.

ನವೆಂಬರ್ 10...!

ಅದನ್ನು ಐಸಿಯು ಸಿಂಡ್ರೋಮ್ ಅನ್ನುತ್ತಾರಂತೆ. ತಾನು ಇಲ್ಲೇ ಇದ್ದರೆ ಜೀವ ಹೆಣವಾಗಿ ಬಿಡುತ್ತೇನೆ ಮೊದಲು ಮನೆಗೆ ಕರೆದೊಯ್ಯಿರಿ ಎಂದು ಪುಟ್ಟ ಮಗುವಿನಂತೆ ಹಠ ಹಿಡಿದರು. ವಿಧಿಯಿಲ್ಲದೆ ಡಿಸ್‌ಚಾರ್ಜ್ ಮಾಡಿಸಿ ಮನೆಗೆ ತಂದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತ್ತು. ಇದ್ದ ಇಬ್ಬರೂ ತಂಗಿಯರು ಅಣ್ಣನ ಆರೈಕೆಗೆ ನಿಂತುಬಿಟ್ಟರು. ಮಗ ಉತ್ಪಲ್ ಎಲ್ಲಾ ಕೆಲಸ ತೊರೆದು ತಂದೆಯ ಆರೈಕೆಗೆ ನಿಂತ. ಪ್ರತಿನಿತ್ಯ ರಾಮಯ್ಯ ಆಸ್ಪತ್ರೆಗೆ ಕರೆದೊಯ್ದು ಅಲ್ಲಿ ನಾಲ್ಕೈದು ಗಂಟೆಗಳ ಕಾಲ ಡಯಾಲಿಸಿಸ್ ಮಾಡಿಸಿ ಆನಂತರ ಮನೆಗೆ ಕರೆತರುವಷ್ಟರಲ್ಲಿ ಮನೆಯವರೆಲ್ಲ ಹೈರಾಣು.

ಇಲ್ಲ, ನಾನು ಎದ್ದು ನಿಲ್ತೀನಿ. ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡಿಸಿಕೊಂಡಾದರೂ ಚಾಲೆಂಜ್ ಮಾಡ್ತೀನಿ ಎಂದಿದ್ದರು ಕಾಕತ್ಕರ್. ಕಿಡ್ನಿ ಟ್ರಾನ್ಸ್‌ಪ್ಲಾಂಟ್‌ಗೆಂದು ತಯಾರಿಗಳೂ ನಡೆದಿದ್ದವು. ಆದರೆ ನವೆಂಬರ್ 10ರ ಆ ಬೆಳಿಗ್ಗೆಯಿತ್ತಲ್ಲ ಅದು ಕಠೋರ ಭೀಕರ. ಮುಂಜಾನೆ ಎಂಟೂವರೆ ಹೊತ್ತಿಗೆ ಇದ್ದಕ್ಕಿದ್ದಂತೆ ಎದೆಹಿಡಿದು ಕೊಂಡವರು ಏನೋ ಸುಸ್ತಾದಂತೆ, ಉಸಿರಾಡಲು ಪರದಾಡಿದಂತೆ ನಿಧಾನಕ್ಕೆ ಎದೆ ಹಿಡಿದುಕೊಂಡರು. ಕತ್ತು ಇದ್ದಕ್ಕಿದ್ದಂತೆ ನೆಲಕ್ಕೆ ವಾಲಿತು. ಮಗನ ಜೊತೆ ತಂಗಿಯರಿಬ್ಬರು ಏನಾಯಿತೆಂದು ಬಂದು ಕತ್ತೆತ್ತಿದರಂತೆ. ಎತ್ತಿ ಹಿಡಿದಿದ್ದ ಕತ್ತು ನಿಲ್ಲಲೇ ಇಲ್ಲ. ಎಡಕ್ಕೆ ವಾಲಿಬಿತ್ತು. ಆಸ್ಪತ್ರೆಗೆ ಕರೆದೊಯ್ಯುವ ಹೊತ್ತಿಗೆ ಕಾಲ ಮಿಂಚಿತ್ತು.

ಬಾಲಕೃಷ್ಣ ಕಾಕತ್ಕರ್ ಇನ್ನೇನಿದ್ದರೂ ನೆನಪು ಮಾತ್ರ. ಮೂಲತಃ ಮಹಾರಾಷ್ಟ್ರದ ಚಿತ್ಪಾವನ ಬ್ರಾಹ್ಮಣರಾಗಿಯೂ ಜಾತಿ ಮೀರಿ ನಿಂತರು. ದಲಿತ ಸಂಘಟನೆಗಳಿಗೆ ಸಾಥ್ ಕೊಟ್ಟರು. ದಲಿತ ಪರ ಹೋರಾಟದ ಸಮರ್ಥಕರಾದರು. ಮರಾಠಿ ಮನೆ ಭಾಷೆಯಾದರೂ ಯಾವ ಕನ್ನಡಿಗನೂ ನಾಚುವಂತೆ ಕನ್ನಡದಲ್ಲಿ ಬರೆದರು. ಅಸಂಖ್ಯಾತ ಸಣ್ಣಕತೆಗಳು, ಶಂಕರ್‌ನಾಗ್ ಕುರಿತಂತೆ ಬರೆದ ಪುಸ್ತಕ, ಮರಣ ಶಿಕಾರಿ ಎಂಬ ವಿಶಿಷ್ಟ ಕಾದಂಬರಿ ಮತ್ತು ಮೊನ್ನೆಯಷ್ಟೇ ಪ್ರಕಟಿಸಿದ 'ಮೆಟ್ರೋ ರೈಲಲ್ಲ ಇದು ಜೈಲು' ಎಂಬ ಕೃತಿಗಳು ಕನ್ನಡ ಸಾಹಿತ್ಯದ ಮಟ್ಟಿಗೆ ಕಾಕತ್ಕರ್ ಹೆಸರನ್ನು ಚಿರಸ್ಥಾಯಿಯಾಗಿಸುತ್ತವೆ. ಓರ್ವ ಪತ್ರಕರ್ತರಾಗಿ ಅನ್ಯಾಯಕ್ಕೆ ಎದೆಯೊಡ್ಡಿದರು. ನೆಲಗಳ್ಳರ ವಿರುದ್ಧ ಲೇಖನಿ ಮೂಲಕವೇ ಸೆಣಸಾಡಿದರು.

ಕಾಕತ್ಕರ್ ಹೆಸರಿನ ಜೊತೆಗೇ 'ಕ್ರೈಂ ಸ್ಟೋರಿ' ಎಂಬ ಶಬ್ದವೂ ಬಾಲಂಗೋಚಿಯಂತೆ ನಿಲ್ಲಬಹುದು. ಆದರೆ ಕಾಕತ್ಕರ್ ಯಾವತ್ತಿಗೂ ಕ್ರೈಂನ್ನು ವಿಕೃತಗೊಳಿಸಿದವರಲ್ಲ. ಅದೆಂಥಾ ಘೋರ ಅಪರಾಧವಾದರೂ ಅದನ್ನು ಮಾನವೀಯವಾಗೇ ವಿಶ್ಲೇಷಿಸಿದರು. ಅನಿವಾರ್ಯವೋ ಅನಿರೀಕ್ಷಿತವೋ ಹೊಟ್ಟೆಪಾಡೋ ಕಾಕತ್ಕರ್ ಕನ್ನಡ ತಾಯಿಯ ರಥವನ್ನು ಕೆಲ ಅಂಗುಲಗಳ ದೂರಕ್ಕಾದರೂ ಎಳೆದಿದ್ದಾರೆ. ಅವರ ಸಿಟ್ಟು ಅದೆಷ್ಟು ನಿಷ್ಕಾರಣವೋ ಸ್ನೇಹ ಕೂಡ ಅಷ್ಟೇ ನಿಷ್ಕಾರಣಿ.

ಕೊನೆಗೂ ಕಾಕತ್ಕರ್ ಎಂದರೆ ನೆನಪಿನಲ್ಲುಳಿಯುವುದು ಅದೇ ಶುಭ್ರ ನಗೆ ಚಂದದ ಮುಖ. ಸಿಗರೇಟು ಮತ್ತು ಸ್ನೇಹ ಭಾವ. ಅವಶೇಷವೇನಿದ್ದರೂ ಭಗ್ನ ಕನಸುಗಳು ಮತ್ತು ಈಡೇರದೆ ಉಳಿದ ಆಸೆಗಳು ಮಾತ್ರ.


● ರಾ. ಸೋಮನಾಥ್






ಮತ್ತೊಮ್ಮೆ ಬೀಸಲಿದೆ 'ಗರಂ ಹವಾ'


ಕಳೆದ ವಾರ ಕನ್ನಡ ಚಿತ್ರೋದ್ಯಮದ ಇತಿಹಾಸದಲ್ಲಿ ಮೈಲಿಗಲ್ಲಾಗಿದ್ದ 'ಕಸ್ತೂರಿ ನಿವಾಸ' ಎಂಬ ಕಪ್ಪು ಬಿಳುಪಿನ ಸಿನಿಮಾವು ಬಣ್ಣತೊತ್ತು ಬಿಡುಗಡೆಯಾಗಿದೆ. ಈ ವಾರ ಹಿಂದಿ ಸಿನಿಮಾ ಇತಿಹಾಸದಲ್ಲೇ ಶ್ರೇಷ್ಠ ಸಿನಿಮಾಗಳಲ್ಲಿ ಒಂದು ಎನಿಸಿಕೊಂಡಿರುವ 'ಗರಂ ಹವಾ' ಕೂಡ ಈಗ ಬಣ್ಣದ ರೂಪ ತಾಳಿ ಬಿಡುಗಡೆಯಾಗುತ್ತಿದೆ.



ಎಂ.ಎಸ್.ಸತ್ಯು

1947ರಲ್ಲಿ ಭಾರತದ ವಿಭಜನೆ ಮತ್ತು 1948ರಲ್ಲಿ ಮಹಾತ್ಮ ಗಾಂಧಿಯ ಕೊಲೆಯ ನಂತರ ಪಾಕಿಸ್ತಾನಕ್ಕೆ ಹೋಗದೆ ಆಗ್ರಾ ನಗರದಲ್ಲೇ ವಾಸಿಸಲು ನಿರ್ಧರಿಸುವ ಮುಸಲ್ಮಾನ ಕುಟುಂಬವೊಂದರಲ್ಲಾಗುವ ತಳಮಳವನ್ನು ಬಿಂಬಿಸುವ 'ಗರಂ ಹವಾ' ಚಿತ್ರವನ್ನು ನಿರ್ದೇಶಿಸಿದ್ದು ಕನ್ನಡಿಗರಾದ ಎಂ.ಎಸ್.ಸತ್ಯು ಎಂಬುದೇ ಹೆಮ್ಮೆಯ ಸಂಗತಿ. ಈ ಅದ್ಭುತ ಸಿನಿಮಾದ ತಯಾರಿಯಲ್ಲಿ ಭಾರತದ ಹತ್ತಾರು ಪ್ರಮುಖ ಚಿಂತಕರ, ಕಲಾವಿದರ, ಹೋರಾಟಗಾರರ ಪಾತ್ರವೂ ಇತ್ತು.

ಮೊದಲನೆಯದಾಗಿ ಈ ಚಿತ್ರದ ಕತೆ ಆಧರಿಸಿರುವುದು ಪ್ರಖ್ಯಾತ ಉರ್ದು ಲೇಖಕಿ ಇಸ್ಮತ್ ಚುಗ್ತಾಯ್ ಅವರ ಒಂದು ಸಣ್ಣ ಕತೆಯನ್ನು. ಆರಂಭದಲ್ಲಿ ಸತ್ಯು ಅವರು ಒಂದು ಸಿನಿಮಾ ನಿರ್ದೇಶಿಸಲು ಫಿಲಂ ಫೈನಾನ್ಸ್ ಕಾರ್ಪೊರೇಷನ್ ಸಂಸ್ಥೆಯಿಂದ ಆರ್ಥಿಕ ನೆರವನ್ನು ಕೋರಿ ಅದಕ್ಕೆ ಇನ್ನೊಂದು ಕತೆಯನ್ನು ಸಲ್ಲಿಸಿದ್ದರು. ಆದರೆ ಆ ಕತೆಯು ತುಂಬಾ ಗಾಢವಾಗಿದೆ ಎಂಬ ಕಾರಣಕ್ಕೆ ಆರ್ಥಿಕ ನೆರವನ್ನು ನೀಡಲು ಸಂಸ್ಥೆ ನಿರಾಕರಿಸಿತ್ತು. ಆಗ ಖ್ಯಾತ ಕವಿ ಕೈಫಿ ಆಜ್ಮಿ (ನಟಿ ಶಬಾನಾ ಆಜ್ಮಿ ಅವರ ತಂದೆ) ಮತ್ತು ಸತ್ಯು ಅವರ ಪತ್ನಿ ಶಮಾ ಜೈದಿ ಜೊತೆಗೂಡಿ ಇಸ್ಮತ್ ಚುಗ್ತಾಯ್ ಅವರ ಪುಟ್ಟ ಕತೆಯನ್ನಾಧರಿಸಿ ಒಂದು ಸ್ಕ್ರಿಪ್ಟ್ ತಯಾರಿಸಿದರು. ಕೈಫಿ ಅವರು ಸಂಭಾಷಣೆ ಮತ್ತು ಹಾಡುಗಳನ್ನೂ ರಚಿಸಿದರು. ಇವರಿಬ್ಬರು ತಯಾರಿಸಿದ್ದ ಚಿತ್ರಕತೆಯನ್ನು ಮೆಚ್ಚಿದ ಫಿಲಂ ಫೈನಾನ್ಸ್ ಕಾರ್ಪೊರೇಷನ್ ಸಾಲ ಕೊಡಲು ನಿರ್ಧರಿಸಿತು.


ಶಮಾ ಜೈದಿ


ಕೈಫಿ ಆಜ್ಮಿ


ಇಸ್ಮತ್ ಚುಗ್ತಾಯ್

ಚಿತ್ರದ ಪ್ರಮುಖ ಪಾತ್ರಕ್ಕೆ ಹಿರಿಯ ನಟ ಬಾಲರಾಜ್ ಸಹಾನಿ ಅವರನ್ನು ಆಯ್ಕೆ ಮಾಡಲಾಯಿತು. ಅವರ ಪತ್ನಿಯ ಪಾತ್ರಕ್ಕೆ ಕೈಫಿ ಆಜ್ಮಿ ಅವರ ಪತ್ನಿ ಶೌಖತ್ ಆಜ್ಮಿ ಅವರು ಸಿದ್ಧರಾದರು. ಅಂದಹಾಗೆ, ಸತ್ಯು, ಶಮಾ ಜೈದಿ, ಕೈಫಿ ಆಜ್ಮಿ, ಬಾಲರಾಜ್ ಸಹಾನಿ ಮತ್ತು ಶೌಖತ್ ಆಜ್ಮಿ ಇವರೆಲ್ಲರೂ ಎಡಪಂಥೀಯ ಚಿಂತನೆಯ ಇಪ್ಟಾ (ಇಂಡಿಯನ್ ಪೀಪಲ್ ಥಿಯೇಟರ್ ಆಸೋಸಿಯೇಶನ್) ದ ಸಕ್ರಿಯ ಸದಸ್ಯರಾಗಿದ್ದರು. ಅವರೆಲ್ಲರ ಸೂಕ್ಷ್ಮ ಗ್ರಹಿಕೆ ಮತ್ತು ಜನಪರ ಚಿಂತನೆ ಈ ಸಿನಿಮಾವನ್ನು ಮನಮುಟ್ಟುವಂತೆ ಮಾಡಿತು ಎಂದರೆ ತಪ್ಪಾಗಲಾರದು.


ಈ ಸಿನಿಮಾದಲ್ಲಿ ನಟಿಸಿದಾಗ ಬಾಲರಾಜ್ ಸಹಾನಿ ಅವರ ವಯಸ್ಸು 60. ಅವರ ವೃತ್ತಿ ಬದುಕಿನಲ್ಲೇ ಅತಿ ಶ್ರೇಷ್ಠ ಸಿನಿಮಾ ಇದಾಯಿತಲ್ಲದೆ ಅವರ ಅಭಿನಯಕ್ಕೆ ಭಾರತದಲ್ಲಿ ಮಾತ್ರವಲ್ಲ ಜಗತ್ತಿನಾದ್ಯಂತ ಮೆಚ್ಚುಗೆ ವ್ಯಕ್ತವಾಗಿತ್ತು, ಆದರೆ ಅದನ್ನು ಕಣ್ಣಾರೆ ನೋಡಲು, ಮನಸಾರೆ ಅನುಭವಿಸಲು ಸಹಾನಿ ಅವರು ಇರಲಿಲ್ಲ, ಯಾಕೆಂದರೆ ಈ ಸಿನಿಮಾದ ಡಬ್ಬಿಂಗ್ ಮುಗಿಸಿದ ಮಾರನೆ ದಿನವೇ ಅವರು ಕೊನೆಯುಸಿರೆಳೆದರು. ಅಂದಹಾಗೆ ಅವರು ಈ ಸಿನಿಮಾಗೆಂದು ನುಡಿದ ಕೊನೆಯ ಸಾಲುಗಳು "ಇನ್ಸಾನ್ ಕಬ್ ತಕ್ ಅಕೆಲಾ ಜೀ ಸಕ್ತ ಹೈ?"

ಈ ಸಿನಿಮಾದ ಮೂಲಕ ಚಿತ್ರಲೋಕಕ್ಕೆ ಪಾದಾರ್ಪಣೆ ಮಾಡಿದ ಮತ್ತೋರ್ವ ಅದ್ಭುತ ನಟನೆಂದರೆ ಫರೂಖ್ ಶೇಕ್. ಸಹಾನಿ ಅವರ ಭಂಡ ಮಗನ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಶೇಕ್ ಆಗಲೇ ಎಲ್ಲರ ಗಮನ ಸೆಳೆದಿದ್ದರು.

ಈ ಚಿತ್ರದಲ್ಲಿ ಸಹಾನಿ ಅವರ ಪ್ರೀತಿಯ ಪುತ್ರಿಯನ್ನು ಇಬ್ಬರು ಪುರುಷರು ಓಲೈಸುತ್ತಿರುತ್ತಾರೆ. ಆ ಪುತ್ರಿಯ ಪಾತ್ರದಲ್ಲಿ ನಟಿಸಿದ್ದು ಗೀತಾ ಸಿದ್ಧಾರ್ಥ್. ಈಕೆ ಬೇರೆ ಯಾರೂ ಅಲ್ಲ, ಹಲವು ವರ್ಷಗಳ ಹಿಂದೆ ಟಿವಿಯಲ್ಲಿ ತುಂಬಾ ಜನಪ್ರಿಯವಾಗಿದ್ದ 'ಸುರಭಿ' ಎಂಬ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದ ಸಿದ್ಧಾರ್ಥ್ ಕಕ್ ಅವರ ಪತ್ನಿ. ಈಕೆಯನ್ನು 'ಪಟಾವ್' ಮಾಡಲು ಯತ್ನಿಸುತ್ತಿರುವ ಯುವಕರಾಗಿ ಖ್ಯಾತ ಕಾಮೆಡಿಯನ್ ಜಲಾಲ್ ಆಘ ಮತ್ತು ಜಮಾಲ್ ಹಷ್ಮಿ ನಟಿಸಿದ್ದರು. ಈ ಜಮಾಲ್ ಹಷ್ಮಿ ಯಾರು ಎಂಬುದು ಬಹಳಷ್ಟು ಜನಕ್ಕೆ ಗೊತ್ತಿಲ್ಲ, ಅವರು ಖ್ಯಾತಿ ಬಾಲಿವುಡ್ ನಟ ತಬಸ್ಸುಮ್ ಹಷ್ಮಿ - ಅಲಿಯಾಸ್ ತಬು - ಳ ತಂದೆ.


ಇಪ್ಟಾದ ಮತ್ತೋರ್ವ ಖ್ಯಾತ ನಟರಾಗಿದ್ದ ಎ.ಕೆ.ಹಂಗಲ್, ಯೂನಸ್ ಪರ್ವೆಜ್ ಮತ್ತು ಯೋಗ ತಜ್ಞೆ ರಮ್ಮಾ ಬನ್ಸ್ (ನಟ ಜಲಾಲ್ ಆಘಾ ಅವರ ತಾಯಿ) ಕೂಡ ಚಿತ್ರದ ಉಳಿದ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರು.

ಸಹಾನಿ ಅವರ ತಾಯಿಯ ಪಾತ್ರದಲ್ಲಿ ಖ್ಯಾತ ಘಜಲ್ ಗಾಯಕಿ ಬೇಗಂ ಅಖ್ತರ್ ಅವರು ನಟಿಸಬೇಕೆಂಬುದು ನಿರ್ದೇಶಕ ಸತ್ಯು ಅವರ ಆಶೆಯಾಗಿತ್ತು, ಆದರೆ ಆ



ಗಾಯಕಿಯ ಪತಿ ಸಿನಿಮಾದಲ್ಲಿ ತನ್ನ ಮಡದಿ ನಟಿಸಕೂಡದೆಂದು ತಕರಾರು ಎತ್ತಿದ್ದರಿಂದ ಸತ್ಯು ಅವರ ಆಶೆ ಈಡೇರಲಿಲ್ಲ, ಆಗ ಆಗ್ರಾ ನಗರದ ಕಶ್ಮೀರಿ ಬಜಾರಿನಲ್ಲಿ ವೇಶ್ಯಾಗೃಹ ನಡೆಸುತ್ತಿದ್ದ ಬದರ್ ದೇವಿ ಎಂಬ ಹಣ್ಣುಹಣ್ಣು ಮುದುಕಿಯನ್ನು ಸಂಧಿಸಿದ ಸತ್ಯು ಅವರು ಈ ಪಾತ್ರದಲ್ಲಿ ನಟಿಸಬೇಕೆಂದು ಆಕೆಯನ್ನು ಕೇಳಿಕೊಂಡರು. ಸತ್ಯು ಅವರ ಪ್ರಸ್ತಾಪವನ್ನು ಕೇಳಿ ಬದರ್ ದೇವಿ ಕಣ್ಣೀರಿಡಲಾರಂಭಿಸಿದರು. ಯಾಕೆಂದರೆ ಆಕೆ ಯುವತಿಯಾಗಿದ್ದಾಗ ಸಿನಿಮಾ ಎಂಬ ಮಾಯಾಲೋಕಕ್ಕೆ ಬೆರಗಾಗಿ ಮುಂಬೈಗೆ ಓಡಿಹೋಗಿದ್ದಳು. ಆದರೆ ಅಲ್ಲಿ ಆಕೆಗೆ ಸೂಕ್ತ ಅವಕಾಶಗಳು ಸಿಕ್ಕಿರಲಿಲ್ಲ, ಆಗ ಪ್ರಖ್ಯಾತವಾಗಿದ್ದ ವಾಡಿಯಾ ಮೂವಿಟೋನ್ ಎಂಬ ಸಂಸ್ಥೆಯಲ್ಲಿ ಕೆಲಕಾಲ ಎಕ್ಸ್‌ಟ್ರಾ ಆಗಿ ದುಡಿದ ಬದರ್ ದೇವಿ ಒಂದಿಷ್ಟು ಕಾಸನ್ನು ಉಳಿಸಿ ಆಗ್ರಾಕ್ಕೆ ಹಿಂದಿರುಗಿ ಮೈಕಸುಬು ಮಾಡಿಕೊಂಡು ಜೀವಿಸಿದ್ದಳು. ಯೌವನದಲ್ಲಿ ಈಡೇರದಿದ್ದ ತನ್ನ ಕನಸು ಇಳಿವಯಸ್ಸಿನಲ್ಲಾದರೂ ಈಡೇರಿದ್ದರಿಂದ ಬದರ್ ದೇವಿ ಭಾವುಕಳಾಗಿದ್ದಳು. ಆಕೆಗೆ ಸಿನಿಮಾದಲ್ಲಿ ನಟಿಸಿದ ಅನುಭವ ಇಲ್ಲದಿದ್ದರೂ ಈ ಸಿನಿಮಾದಲ್ಲಿ ಆಕೆ ಅದ್ಭುತವಾಗಿ ನಟಿಸಿ ಸೈ ಎನಿಸಿಕೊಂಡರು. ಅದರಲ್ಲೂ ಆಕೆ ಪ್ರಾಣ ಕಳೆದುಕೊಳ್ಳುವ ಮುನ್ನ ತನ್ನ ಹಳೆಯ ಮನೆಯ ಸುತ್ತ ಕಣ್ಣಾಡಿಸುತ್ತ ಗತಕಾಲದ ವೈಭವವನ್ನು ನೆನಪು ಮಾಡಿಕೊಳ್ಳುವ ದೃಶ್ಯವನ್ನು ಯಾವ ಸಿನಿಮಾ ಪ್ರೇಮಿಯೂ ಮರೆಯುವುದಿಲ್ಲ. ಈ ಸಿನಿಮಾದಲ್ಲಿ ಬದರ್ ದೇವಿಯ ಪಾತ್ರಕ್ಕೆ ದನಿ ನೀಡಿದವರು ಮತ್ತೋರ್ವ ಖ್ಯಾತ ನಟಿ ದೀನಾ ಪಾಠಕ್.


ಗೀತಾ ಸಿದ್ಧಾರ್ಥ್



'ಗರಂ ಹವಾ' ಒಂದು ದೃಶ್ಯ ಕಾವ್ಯವಾಗಿ ಮೂಡಿಬಂದಿರುವುದರ ಹಿಂದೆ ಇಶಾನ್ ಆರ್ಯ ಎಂಬ ಛಾಯಾಗ್ರಾಹಕರ ಕೌಶಲ ಇದೆ. ಜೊತೆಗೆ ಸರೋದ್ ವಾದಕ ಉಸ್ತಾದ್ ಬಹದೂರ್ ಖಾನ್ ಅವರ ಸಂಗೀತವೂ ಈ ಚಿತ್ರದ ಕಲಾತ್ಮಕತೆಯನ್ನು ಹೆಚ್ಚಿಸಿದೆ.

ಫಿಲಂ ಫೈನಾನ್ಸ್ ಕಾರ್ಪೊರೇಷನ್ ಈ ಸಿನಿಮಾ ನಿರ್ಮಿಸಲು 7.5 ಲಕ್ಷ ರೂ. ನೀಡಿತ್ತು, ಅದು ಸಾಲದಾದಾಗ ಸತ್ಯು ಅವರು ತಮ್ಮ ಸ್ನೇಹಿತರಿಂದ 2.5 ಲಕ್ಷ ರೂ... ಪಡೆದಿದ್ದರು. ಜೊತೆಗೆ ಇನ್ನೆಷ್ಟೋ ಜನ ಈ ... ವಿವಿಧ ರೀತಿಯಲ್ಲಿ ನೆರವು ನೀಡಿದ್ದರು.

1973ರಲ್ಲಿ ಸತ್ಯು ಅವರು ಬಹಳ ಕಷ್ಟಪಟ್ಟು ... ಸಿನಿಮಾವನ್ನು ಮುಗಿಸಿದರಾದರೂ ಅದರ ಬಿಡ... ಸುಲಭವಾಗಿರಲಿಲ್ಲ, ಆರಂಭದಲ್ಲಿ ಮುಂಬೈ ಸೆ... ಬೋರ್ಡ್ 'ಗರಂ ಹವಾ' ಸಿನಿಮಾವು ದೇಶದಲ್ಲಿ ಕೋ... ಭಾವನೆಯನ್ನು ಕೆರಳಿಸುವಂತಿದೆಯಾದ್ದರಿಂದ ... ಬಿಡುಗಡೆ ಮಾಡುವುದಿರಲಿ, ಇದನ್ನು ಬ... ಮಾಡಬೇಕೆಂದು ಶಿಫಾರಸ್ಸು ಮಾಡಿತ್ತು, ಆಗ ಸತ್ಯು ಅ... ಚಿತ್ರವನ್ನು ರಿವ್ಯೂ ಸಮಿತಿಯ ಮುಂದೆ ಪ್ರದರ್ಶಿಸಿ... ಆ ಸಮಿತಿ ಮುಂಬೈ ಬೋರ್ಡ್‌ನಂತೆ ಕಠಿಣ ನಿಲು... ತೆಗೆದುಕೊಳ್ಳದಿದ್ದರೂ ಬಿಡುಗಡೆಗೆ ನೆರವನ್ನೇನು ನೀಡ... ಹೇಗಾದರು ಮಾಡಿ ಸಿನಿಮಾವನ್ನು ಬಿಡು... ಮಾಡಬೇಕೆಂದು ನಿರ್ಧರಿಸಿದ ಸತ್ಯು ಅವರು ರಾ... ಭವನದಲ್ಲಿ ಆಗಿನ ಪ್ರಧಾನಿ ಇಂದಿರಾ ಗಾಂಧಿ ಅ... ಒಂದು ವಿಶೇಷ ಸ್ಕ್ರೀನಿಂಗ್ ಏರ್ಪಡಿಸಿದರು. ಇಂ... ಗಾಂಧಿಯವರೇ ಸಿನಿಮಾವನ್ನು ಮೆಚ್ಚಿದ್ದರಿಂದ ... ಬಿಡುಗಡೆಗೆ ಸಹಕಾರಿಯಾಯಿತು.

ಆದರೂ ಈ ಹಿಂದಿ ಚಿತ್ರ ಮೊದ... ಬಿಡುಗಡೆಗೊಂಡಿದ್ದು ಬೇರೆಲ್ಲೂ ಅಲ್ಲ, ಬೆಂಗಳೂರಿ... ಸಾಗರ್ ಮತ್ತು ಸಂಗೀತ ಚಿತ್ರಮಂದಿರಗಳಲ್ಲಿ ತೆ... 'ಗರಂ ಹವಾ' ಪ್ರೇಕ್ಷಕರ ಮೆಚ್ಚುಗೆಯನ್ನು ಪಡೆ... ಆನಂತರವೇ ಅದು ಮುಂಬೈ ಮತ್ತು ಇತರೆ ನಗರ... ಕಾಣಿಸಿಕೊಂಡಿದ್ದು.

ಅದೇ ವರ್ಷ 'ಗರಂ ಹವಾ' ಪ್ರತಿಷ್ಠಿತ ಪ... ದಿ'ಓರ್ ಪ್ರಶಸ್ತಿಗಾಗಿ ನಡೆದ ಸ್ಪರ್ಧೆಯ... ಭಾಗವಹಿಸಿತ್ತಾದರೂ ಅದು ಫ್ರಾನ್ಸಿಸ್ ಫೋರ್ಡ್ ಕಪ್ಪೊ... ಅವರ 'ದಿ ಕಾನ್ವರ್ಸೇಶನ್' ಸಿನಿಮಾದ ಎದುರು ಸೋ...


ಆದರೇನಂತೆ, ಕೋಮು ಭಾವನೆಯನ್ನು ಕೆರಳಿ... ಎಂಬ ಕಾರಣಕ್ಕೆ ನಿಷೇಧಕ್ಕೊಳಗಾಗಬೇಕೆಂಬ ಅಭಿಪ್ರಾ... ಗುರಿಯಾಗಿದ್ದ 'ಗರಂ ಹವಾ' ಆ ವರ್ಷ 'ರಾ... ಐಕ್ಯತೆ'ಗಾಗಿ ನೀಡುವ ರಾಷ್ಟ್ರ ಪ್ರಶಸ್ತಿಗೆ ಪಾತ್ರವಾ... ಎಂಬುದೇ ಅಚ್ಚರಿ ಮೂಡಿಸುವ ವಿಷಯ.

ಕತೆ, ನಟನೆ, ನಿರ್ದೇಶನ, ಕ್ಯಾಮೆರಾ ಕೆಲಸ, ಸಂ... ಸಂಭಾಷಣೆ... ಹೀಗೆ ಎಲ್ಲವೂ ಅತ್ಯದ್ಭುತ... ಮೂಡಿಬಂದಿರುವ 'ಗರಂ ಹವಾ' ಸಿನಿಮಾ ಈಗ ನ... ವರ್ಷಗಳ ನಂತರ ಬಣ್ಣ ಹೊತ್ತು ಇದೇ ಶುಕ್ರವಾರ... ತೆರೆಗೆ ಬರುತ್ತಿದೆ. ಸಾಹಿತ್ಯ, ಕಲೆ ಮತ್ತು ಸಿ... ಅಭಿಮಾನಿಗಳು ಯಾವ ಕಾರಣಕ್ಕೂ ಈ ಅವಕಾ... ಕಳೆದುಕೊಳ್ಳದೆ ಈ '.. ಹವಾ'ಕ್ಕೆ ಮಾರು ಹೋಗುವ... ಸಂಶಯವೇ ಇಲ್ಲ.

● ಸಾವ...


ಸಲೀಮ್ ಮಿರ್ಜಾ ಪಾತ್ರದಲ್ಲಿ ಸಹಾನಿ ಮತ್ತು ಅವರ ಸಿನಿಮಾ ಕುಟುಂಬ


ಬಾಲರಾಜ್ ಸಹಾನಿ


ಬದರ್ ದೇವಿ ಒಂದು ದೃಶ್ಯದಲ್ಲಿ






…ಸ್ತೂರಿ ನಿವಾಸ' ಬರೀ ಸಿನಿಮಾ ಅಲ್ಲ!!?

…ಶಾ. ರಾಜ್‌ಕುಮಾರ್ ಅವರಿಗಿದ್ದ ಆಕರ್ಷಕ …ನಲ್ಲಿನ ಸೆಳೆತವನ್ನು ನಾವೆಲ್ಲ ಹರೆಯದಲ್ಲಿ ಅನುಭವಿಸಿ … ರಾಜ್ ಸಿನಿಮಾ ರಿಲೀಸ್ ಅಂದ್ರೆ ಆದೊಂದು … ವಾತಾವರಣ. ಮೊದಲ ಶೋನಲ್ಲಿ ತೆರೆಯ ಮೇಲೆ …ನ್ನು ನೋಡುವ ಕುತೂಹಲ - ತವಕ - ಧಾವಂತ. … ಜಾವಕ್ಕೆ ಎದ್ದು 5 ಗಂಟೆಗೆ ವೀರಭದ್ರ ಟಾಕೀಸ್‌ನ … ಕೊಡುವ ಸರಳುಗಳ ನಡುವೆ ತೂರಿಕೊಂಡು …ಬ್ಬರಿ ನಾಲ್ಕು ಗಂಟೆಗಳ ಕಾಲ ಒತ್ತಾಟ ತಳ್ಳಾಟದ … ಟಿಕೆಟ್ ಪಡೆದುಕೊಂಡರೆ ದೇಶಗೆದ್ದ ಸಂಭ್ರಮದ …ವು.

…ಜ್ ತೆರೆಯ ಮೇಲೆ ಬಂದರೆ, ಶಿಳ್ಳೆ-ಕೇಕೆ, ಕರ್ಪೂರ … ಕಾತುರ, ತೆರೆಗೆ ದುಡ್ಡು ಬೀರಿ ಖುಷಿ ಪಡುವವರು, … ಸೈಜಿನ ಹಾರ ಹಿಡಿದು ಅಣ್ಣೋರ ಭಾವಚಿತ್ರಕ್ಕೆ …ಂತೆ ಮಾಡಿ ಕಾಲಿಗೆ ಬಿದ್ದು ಬರುವುದು … -ಎರಡೇ… ಈಗ ನಿಂತು ಯೋಚಿಸಿದರೆ ಅದೆಲ್ಲ …ರಿಸುವ ಪ್ರಸಂಗಗಳಾಗಬಹುದು. ಆದರೆ ಆ ಕಾಲಕ್ಕೆ …ಬಂದ್ರೆ ಅಂತಿಮ ಅಷ್ಟೇ… ಅವರ ವಿರುದ್ಧ ಯಾರೂ …ಡುವಂತಿಲ್ಲ. ಅದು ನಮ್ಮ ಆಸ್ತಿ, ಕನ್ನಡಿಗರ …ಾನದ ಸಂಕೇತ. ದುಃಖ, ನಗು, ಸಂಭ್ರಮ, …ರ್ಣತೆ, ಸ್ನಿಗ್ಧತೆಯ ಸಾಕಾರ. ಅವರು ನಮ್ಮೆಲ್ಲರ …ತಮ್ಮ, ತಂದೆ, ಮೊಮ್ಮಗ, ಅಜ್ಜ ದೇವರು…. … ಕೇಡಿ, ರಾಕ್ಷಸ, ಪೋಲೀಸ್, ಬಬ್ರುವಾಹನ, …ನ, ಕೃಷ್ಣ, ಶ್ರೀನಿವಾಸದೇವರು, ಮಯೂರ, …ಶಿಪು, ರಾವಣ, ತುಕಾರಾಮ್, ಕನಕ, ಸರ್ವಜ್ಞ, …ಂದ್ರಸ್ವಾಮಿ.. ಕೊನೆಗೆ ಹೆಣ್ಣುವೇಷ.. ಯಾವುದೇ



… ಜೀವಕಳೆ ತುಂಬಿ ಪರಕಾಯ ಪ್ರವೇಶ ಮಾಡಿ …ಗರನ್ನ ಮಂತ್ರಮುಗ್ಧ ಮಾಡಿಬಿಡುವ ಆಕರ್ಷಣೆ… …ಜ್ ಅಭಿನಯದ ವೈಖರಿ. ಅದು ಅಭಿನಯವಲ್ಲ.. …ಸುವುದು… ಈಗ ಇಡೀ ಕರ್ನಾಟಕ ಮತ್ತೆ ಅಂತದೇ …ಣದಲ್ಲಿದೆ. ಇಡೀ ನಾಡೇ 'ಕಸ್ತೂರಿ ನಿವಾಸ'ದ …ಹಾಡುತ್ತಿದೆ.

…73 ರಾಜ್ ಚಿತ್ರಬದುಕಿನ ಸುವರ್ಣಯುಗ. ಸಾಲು … ಸೂಪರ್‌ಹಿಟ್ ಚಿತ್ರಗಳನ್ನು ನೀಡಿದ ರಾಜ್, … ಆರತಿ, ಭಾರತಿಯರ ಸಂಗಮವೇ ಮನೆಮಾತಾದ …ದು. 'ಬಂಗಾರದ ಮನುಷ್ಯ' ಬಂದು ಇಡೀ ನಾಡೇ … ಧ್ಯಾನಿಸಿಕೊಂಡ ಸಿನಿಮಾ. ಚಿತ್ರರಂಗದ ಇತಿಹಾಸ …ದೆಂದೂ ಬರೆಯದ ದಾಖಲೆಗಳನ್ನು ಸೃಷ್ಟಿಮಾಡಿ …ದ ಆ ಸಿನಿಮಾದ ನಂತರ ತೆರೆಗೆ ಬಂದ 'ಕಸ್ತೂರಿ … ರಾಜ್‌ರನ್ನು ಇನ್ನೊಂದು ಎತ್ತರಕ್ಕೆ ಒಯ್ದಿತ್ತು, …ವಾಗಿ, ತ್ಯಾಗಶೀಲನಾಗಿ, ಬಂಗಾರದ ಮನುಷ್ಯನಾಗಿ … ರಾಜ್‌ರನ್ನು ಮತ್ತೊಂದು ಸುಖದ-ಸಂಭ್ರಮದ … ನೋಡುವ ಕಾತುರದ ರಸಿಕರಿಗೆ ಆರಂಭದಲ್ಲಿ … [illegible] ಹಾಡುವ 'ಲೋಲೋ' … [illegible] ಪ್ರತಿಕ್ರಿಯೆ … ಈ ಚಿತ್ರ, ನಿಧಾನಕ್ಕೆ, ರಾಜ್‌ರ

ಭಾವಾಭಿನಯದಿಂದ ಪ್ರಸಿದ್ಧವಾಯಿತು. ಜೊತೆಗೆ ದೊರೆ-ಭಗವಾನ್‌ರ ಸೂಕ್ಷ್ಮ ಕುಸುರಿಯಂತಹ ನಿರ್ದೇಶನ, ಜಿ. ಬಾಲಸುಬ್ರಹ್ಮಣ್ಯಂರವರ ಕಥೆ, ಜಿ.ಕೆ. ವೆಂಕಟೇಶ್‌ರವರ ಅಮರ ಸಂಗೀತ, ಚಿ. ಉದಯಶಂಕರ್‌ರವರ ಸಾಹಿತ್ಯ ಅಶ್ವತ್ಥ್, ಜಯಂತಿ, ಭಾರತಿ, ಆರತಿಯವರ ಕಣ್ತುಂಬಿಸುವ ಅಭಿನಯ… ರಾಜ್‌ಕುಮಾರ್‌ರವರು ಪ್ರತಿ ಫ್ರೇಮ್‌ನಲ್ಲೂ ಒಳಹೊಕ್ಕು ಧ್ಯಾನಿಸಿ ಅಭಿನಯಿಸುವ ಭಾರವಾದ ದೃಶ್ಯಗಳು… ಒಂದೇ- ಎರಡೇ…? ಅದನ್ನು ನೋಡಿಯೇ ಎದೆತುಂಬಿ ಕೊಳ್ಳಬೇಕು.

ಈಗ ಮತ್ತೆ ಆ ಅವಕಾಶ ಕಪ್ಪು ಬಿಳುಪಿನಿಂದ ಬಣ್ಣಕ್ಕೆ ಬದಲಾಗಿದೆ. 'ಸತ್ಯಹರಿಶ್ಚಂದ್ರ' ಸಿನಿಮಾವನ್ನ ವರ್ಣಮಯ ಮಾಡಿದ್ದ ದಿವಂಗತ ಕೆ.ಸಿ.ಎನ್.ಗೌಡ್ರು, ಕೋಟ್ಯಂತರ ರೂಪಾಯಿ ಸುರಿದು ಕನ್ನಡದ ಶ್ರೀಮಂತ ಸಿನಿಮಾವೊಂದನ್ನು ನೋಡುಗರ ಕಣ್ತಂಪಿಗೆ ಕೊಟ್ಟಿದ್ದರು. ಅವರ ನಂತರ ಗೌಡ್ರು ಮಗ ಶ್ರೀ ಕೆ.ಸಿ.ಎನ್. ಮೋಹನ್ ಈಗ ನವೆಂಬರ್ ಸಡಗರಕ್ಕೆ ಅರ್ಥಪೂರ್ಣ ಮುನ್ನುಡಿಯಂತೆ ರಾಜ್‌ರವರ ಚಿತ್ರಜೀವನದ ಮಹಾಕಾವ್ಯವೇ ಆಗಿದ್ದ 'ಕಸ್ತೂರಿ ನಿವಾಸ'ವನ್ನು ವರ್ಣರಂಜಿತ ಮಾಡಿ ಬಿಡುಗಡೆ ಮಾಡಿದ್ದಾರೆ.

ಮೊನ್ನೆ ಸೀನಣ್ಣ ಮತ್ತು ನನ್ನ ಕಿರಿಯ ಮಿತ್ರ ವಿನಯ್ ಅವರೊಡನೆ ಆ ಸಿನಿಮಾಕ್ಕೆ ಹೋಗಿದ್ದೆ. ಸಿನಿಮಾ ಲೋಕದ ಬಗ್ಗೆ ಅಪಾರವಾಗಿ ತಿಳಿದುಕೊಂಡಿರುವ ಅಪರೂಪದ ಪತ್ರಕರ್ತ ಮತ್ತು ಲೇಖಕ ಸೀನಣ್ಣ, ಕ್ರೀಡಾಪಟು ಮತ್ತು ಸುಖಾಸುಮ್ಮನೆ ಸಿನಿಮಾ ನೋಡುವ ವಿನಯ್‌ನ ನಡುವೆ ನಾನು ಮೌನವಾಗಿ ಕುಳಿತು ಸಿನಿಮಾ ನೋಡಿ ಬಂದೆ. ಮೂರು ದಶಕಗಳಿಂದ ಹತ್ತಾರು ಬಾರಿ ನೋಡಿದ್ದ ಆ ಸಿನಿಮಾವನ್ನ ಬಣ್ಣದ ಸಡಗರದಲ್ಲಿ ನೋಡುವುದೇ ಒಂದು ಆನಂದ. ರಾಜ್‌ರವರದು ಮೊದಲರ್ಧ ಸಿನಿಮಾದ ಅಭಿನಯದ ಗತ್ತು ಕಡೇ ಅರ್ಧದ ತೀವ್ರ ಯಾತನಾಮಯ ಜೀವನಗಾಥೆಯಂತೆ ದೊರೆ-ಭಗವಾನ್ ಕಡೆದಿಟ್ಟಿರುವುದನ್ನು ಎದೆಭಾರ ಮಾಡಿಕೊಂಡೇ ನೋಡುವುದು ಅನಿವಾರ್ಯ.

ಒಂದು ಬೆಂಕಿಪೊಟ್ಟಣ ಫ್ಯಾಕ್ಟರಿಯ ಆರ್ಥಿಕ ಸಂಹಿತೆಯ ಕಥೆಯಾದರೂ ಇದರೊಂದಿಗೆ ಹೆಂಡತಿ ಮಗುವನ್ನು ದುರಂತದಲ್ಲಿ ಕಳೆದುಕೊಂಡ ನಾಯಕ, ಅನಾಥನಾಗಿದ್ದ ಮಿತ್ರ ಚಂದ್ರುಗೆ ಹಾಗೂ ನೀಲಾಳಿಗೆ ಬದುಕು ನೀಡುವ 'ದೇವರು' ಆಗಿ ಚಿತ್ರಿತಗೊಂಡ ನಾಯಕ ಚಂದ್ರುವನ್ನ ಅಮೆರಿಕಕ್ಕೆ ಹೊಸ ತಂತ್ರಜ್ಞಾನದ ತಿಳಿವಳಿಕೆಗೆ ಕಳುಹಿಸುವ ಮೂಲಕ ಶುರುವಾಗುವ ಚಿತ್ರದ ತಿರುವುಗಳು ಕೊನೆವರೆಗೂ ಹಣಕಾಸು.. ಬದುಕು.. ಬಾಂಧವ್ಯ.. ಕಸ್ತೂರಿ ನಿವಾಸ ಮನೆತನದ ಆಕಾಶ ನೋಡದ ಅಂಗೈಗಳ ನಡುವೆ ಲಾಳಿ ಇಡುತ್ತದೆ. ಸೂಚ್ಯವಾಗಿ ಬಂಡವಾಳ.. ಹೊಸ ಆರ್ಥಿಕತೆ.. ಅಮೆರಿಕೀಕರಣ.. ಮುಕ್ತ ಆರ್ಥಿಕತೆ ಮತ್ತು ಸಾಂಪ್ರದಾಯಿಕ ಕೈಗಾರಿಕೆಗಳ ನಡುವಣ ಹೊಯ್ದಾಟ ಹಾಗೂ ಸೋಲು-ಗೆಲುವುಗಳನ್ನು ಬಿಂಬಿಸುವ ಈ ಸಿನಿಮಾ 43 ವರ್ಷಗಳ ಹಿಂದೇನೇ ಈ ಹೊತ್ತಿನ ನಾಡಿನ ಮುಂಗಾಣ್ಕೆಯನ್ನು ನೀಡುತ್ತದೆ.

ಆ ನಡುವೆ ಸೂಕ್ಷ್ಮವಾದ ಕೆಲ ಸಂಗತಿಗಳು ಚಿತ್ರಿತವಾಗುತ್ತವೆ. ಯಾವ ಕೋನದಿಂದ ನೋಡಿದರೂ ರಾಜ್‌ಗೆ ಮತ್ತೆ ಮದುವೆ ಆಗುವ ಆಸೆಯಿಲ್ಲದಿದ್ದರೂ ತನ್ನ ಬಂಧುವಿನಂತಿದ್ದ ಸೇವಕ ರಾಮಯ್ಯನ ನವಿರಾದ ಒತ್ತಾಯಕ್ಕೆ ಮಣಿದು, ನೀಲಾಳಿಗೆ ಪತ್ರ ಬರೆದು ಅವನೊಡನೆ ಕಳುಹಿಸುತ್ತಾನೆ. ಇತ್ತ ಅಮೆರಿಕದಿಂದ ಬಂದ ಚಂದ್ರು-ನೀಲಾರ ಬದುಕಿನಲ್ಲಿ ಚಂದ್ರುವಿನ ಅನಾಥ ಮಗುವಿನ ಕಾರಣಕ್ಕೆ ಅದೂ ಈ ರವಿ(ಬಾಸ್-ರಾಜ್‌ಕುಮಾರ್)ಯ ಒತ್ತಾಯದಿಂದ ಬೇರೆ ಬೇರೆ



ಘಟನೆಗಳು ಘಟಿಸಿ ಕೊನೆಗೆ ಅವರು ಮದುವೆಯಾಗುವ ಹಂತಕ್ಕೆ ಬಂದಿರುತ್ತಾರೆ. ಇದ್ಯಾವುದರ ಪರಿವೆಯೇ ಇಲ್ಲದ ನಾಯಕ ರವಿ ಸಂಜೆ 6ಕ್ಕೆ ಬರುವುದಾಗಿ ಪತ್ರ ಕಳುಹಿಸಿದ್ದ ನೀಲಾಳಿಗೆ, ಆಕೆ ತನ್ನನ್ನೇ ಮದುವೆಯಾಗಲು ಒಪ್ಪಿಗೆ ತಿಳಿಸಲು ಬರುವಳೆಂಬ ಸಡಗರಕ್ಕೆ ಪುಳಕಿತನಾಗುವ ನಾಯಕ ಸೂಟು-ಬೂಟಿನಲ್ಲಿ ಸಿದ್ಧಗೊಂಡು, ಕನ್ನಡಿಯಲ್ಲಿ ಮುಖ ನೋಡಿಕೊಂಡು ತಲೆಬಾಚಿಕೊಳ್ಳುವುದು, ಆಗ ಮುಂದಲೆಯಲ್ಲಿ ಒಂದು ಬಿಳಿಕೂದಲು ಕಾಣಿಸಿಕೊಳ್ಳು ವುದನ್ನು ಯಾರೂ ನೋಡಬಾರದೆಂದು ಬಾಗಿಲುಹಾಕಿ ಕೊಂಡು ಕಿತ್ತುಕೊಳ್ಳುವ ದೃಶ್ಯದಲ್ಲೇ ನಿರ್ದೇಶಕ ಮುಂದೆ ನಡೆಯುವ ಘಟನೆಯನ್ನ ಸೂಕ್ಷ್ಮವಾಗಿ ಸಾಂಕೇತಿಕವಾಗಿ ಕಟ್ಟಿಕೊಟ್ಟಿದ್ದಾರೆ.

ನೀಲಾ ಬಂದು ಮಾತನಾಡುತ್ತಾ… 'ನೀವು ಒಪ್ಪುವುದಾದರೆ..' ಅಂತ ತಾನು ತೆಗೆದುಕೊಂಡ ನಿರ್ಧಾರವನ್ನು ತಿಳಿಸಲು ಅಂಜಿಕೆ ಪಡುತ್ತಿರುವ ಇವಳ ಮಾತನ್ನು ತಡೆದು… 'ಹೌದು, ಸಂಗಾತಿ ಆಯ್ಕೆ ಬಹಳ ಮುಖ್ಯ. ಅವಸರ ಬೇಡ… ನಿಧಾನಕ್ಕೆ ಯೋಚನೆ ಮಾಡು, ಯಾವುದೇ ದುಶ್ಚಟಗಳಿಲ್ಲದ, ದುಡುಕಿಲ್ಲದ ಸಂಗಾತಿಯನ್ನಾರಿಸಿಕೊಳ್ಳುವುದು…' ಅಂತಿರುವಾಗಲೇ ನೀಲಾ, 'ಇದ್ಯಾವುದೂ ಚಂದ್ರುವಿಗಿಲ್ಲ!! ಬಾಸ್' ಅಂದುಬಿಡುತ್ತಾಳೆ. ತನ್ನನ್ನು ಮದುವೆಯಾಗಲು ಬಂದಿರುವಳೆಂದು ತಿಳಿದು ಖುಷಿಯಲ್ಲಿದ್ದ ನಾಯಕನ ಮುಖ ವಿವರ್ಣವಾಗಿ ಆತ ಮೆಟ್ಟಿಲೇರಿ ಭಾರವಾದ ಹೆಜ್ಜೆಯಿಡುತ್ತಾ… ಆಸರೆಯಾಗಿ ಮೆಟ್ಟಿಲ ಕಂಬಿಗೆ ಮುಖವೂರಿ ಸಂಕಟವನ್ನನುಭವಿಸುವ ದೃಶ್ಯವನ್ನು ನೋಡಿಯೇ ಅನುಭವಿಸಬೇಕು.

ಹೀಗೆ ನಿಧಾನಕ್ಕೆ ಎಲ್ಲವನ್ನೂ ನಾಯಕ ರವಿ ಕಳೆದುಕೊಳ್ಳುತ್ತಿರುವಾಗಲೇ ಆ ಎಲ್ಲಾ ಸಂಪತ್ತಿನ ಒಡೆಯನಾಗುವ ಚಂದ್ರು ಕಡೆಗೆ ಹರಾಜಿಗೆ ಬಂದ ಕಸ್ತೂರಿ ನಿವಾಸವನ್ನೇ ಕೊಂಡುಕೊಳ್ಳುತ್ತಾನೆ.. ಅದೇ ಮನೆಯ ಔಟ್‌ಹೌಸ್‌ನಲ್ಲಿ ವಾಸಿಸುವ ಪರತ್ತಿನೊಂದಿಗೆ ಬಾಳುವ ರವಿ ಮಂಕಾಗುತ್ತಾ ಚಂದ್ರನ ಪ್ರಖರ ಬೆಳದಿಂಗಳಂತಹ ಬದುಕಿಗೆ ತನ್ನ ಇಡೀ ಜೀವನದ ಬೆಳಕೆಲ್ಲವನ್ನೂ ಧಾರೆಯೆರೆಯುತ್ತಾನೆ. ಮಗು ರಾಣಿಯಿಂದ ಶುರುವಾದ ಕಥೆಯ ತಿರುವುಗಳು ಆಕೆಯ ಅಕಾಲ ಮರಣದಿಂದ ಮತ್ತೊಂದು ತಿರುವು ಪಡೆದು, ಅಕ್ಷರಶಃ ಬೀದಿಗೆ ಬೀಳುತ್ತಾ


ನಾಯಕ ರವಿ. ರಾಮಯ್ಯನ ಗುಡಿಸಿಲಿನಲ್ಲಿ ವಾಸಮಾಡುತ್ತಾ ಅದೇ ಸೂಟು-ಬೂಟಿನಲ್ಲಿ ಕಾಲೆಳೆದುಕೊಂಡು ಮೊಣಕಾಲಿಗೆ ಕೈ ತೂರಿಸಿ ಮಲಗುವ ಆ ಸಣ್ಣಗಡ್ಡದ ರಾಜ್‌ರ ಅಭಿನಯ ನಿಜಕ್ಕೂ ಸ್ಮರಣೀಯ, ಎದೆಭಾರ. ಹೀಗಿದ್ದಾಗ ಅಲ್ಲಿಗೆ ಮತ್ತೊಂದು ಕೋರಿಕೆ ಇಡಲು ನೀಲಾ ಬರುತ್ತಾಳೆ. ಆಗ ರಾಜ್ ಎದ್ದು ಒಳಗೆಹೋಗಿ, 'ಪ್ರಭೂ… ನನ್ನಲ್ಲಿರುವುದನ್ನು ಮಾತ್ರ ಆಕೆ ಕೇಳಲಿ' ಎಂದು ದೇವರಲ್ಲಿ ಬೇಡುವ ದೃಶ್ಯ.. ಅದಕ್ಕೂ ಮೊದಲು 'ಈಗಲ್ ಬ್ರಾಂಡ್'ನಿಂದ ಹತವಾದ 'ಪಾರಿವಾಳ ಬ್ರಾಂಡ್'ನ ಉದ್ಯಮವನ್ನ ನೆನಪಿಸುವಂತೆ ಒಂದು ಹದ್ದು ರವಿಯ ಜೀವದ ಪಾರಿವಾಳವನ್ನ ಎದುರಿಸಿದಂತೆ, ಅದಕ್ಕೆ ನಾಯಕ 'ಹೋಗು ಆ ಹದ್ದನ್ನು ಎದುರಿಸಿ ಬಾ' ಅಂತ ಹಳಹಳಿಸುವ ದೃಶ್ಯ.. ಕಡೆಗೆ ನೀಲಾಳ ಊಟಕ್ಕೆ ಆ ಪಾರಿವಾಳವನ್ನೇ ಮಾರಿ, ಅದರಿಂದ ಅವಳನ್ನು ಉಪಚರಿಸಿದ ನಂತರ, 'ನಿನ್ನ ಕೋರಿಕೆಯೇನು' ಅಂತ ಚಡಪಡಿಸಿ ನಾಯಕ ಕೇಳುತ್ತಾನೆ. ಆಗ ಆಕೆ 'ಮಗುವಿಗೆ ನೀವು ನನ್ನ ಮದುವೆಯಲ್ಲಿ ಕೊಟ್ಟ ಚಿನ್ನದ ಪಾರಿವಾಳ ಬೇಡವಂತೆ, ನಿಮ್ಮ ನಿಜವಾದ ಪಾರಿವಾಳವನ್ನು ಕೊಡಿ' ಅಂತಾಳೆ. ವೇದನೆಯಿಂದ ಮುಖ ಕಿವುಚಿಕೊಂಡ ರವಿ ಹಿತ್ತಲಲ್ಲಿ ಮಕಾಡೆ ಬಿದ್ದು ಪ್ರಾಣ ಬಿಡುತ್ತಾನೆ. 'ನೀನು ಉಂಡಿದ್ದು ಅದೇ ಪಾರಿವಾಳ ಮಾರಿದ ಹಣದಿಂದ ತಾಯೀ' ಅನ್ನುವ ರಾಮಯ್ಯನ ಧ್ವನಿಯಲ್ಲಿ ಇಡೀ ಕಸ್ತೂರಿ ನಿವಾಸದ ಕಥೆಯ ತಿರುಳೇ ಅಡಗಿದೆ. ಕಡೆಗೆ ಮಕಾಡೆ ಮಲಗಿದ ರಾಜ್, ಅದೇ ಸೂಟು-ಬೂಟಿನಲ್ಲಿ ಮುಷ್ಟಿಯನ್ನು ನೆಲಕ್ಕೆ ಹಚ್ಚಿ ಸತ್ತಿರುತ್ತಾರೆ… ಹೀಗೆ ಪುಟಾಣಿ ರಾಣಿ-ಪಾರಿವಾಳಗಳೇ ಚಿತ್ರದ ಸೂತ್ರ ಮತ್ತು ಸಾಂಕೇತಿಕವಾಗಿ ಸೆಳೆಯುವ ಕಥೆ ಪ್ರೇಕ್ಷಕನ ಕಣ್ಣಲ್ಲಿ ನೀರು, ಭಾವಪೂರ್ಣ ಮ್ಲಾನತೆ, ಸಿನಿಮಾ ಮುಗಿದಾಗ ಎಲ್ಲರೂ ಮೌನವಾಗಿ ಭಾರವಾದ ಹೃದಯದಿಂದ ಹೊರ ನಡೆಯುವುದನ್ನು ಕಂಡಾಗ, 'ಇದು ಸಿನಿಮಾ ಅಲ್ಲ, ನಿಜವಾದ ಮಹಾಕಾವ್ಯ' ಅನ್ನಿಸಿತು.

ನೀವೆಲ್ಲಾ ಕೂತು ನೋಡಬೇಕು. ಸ್ನೇಹ, ಪ್ರೀತಿ, ಬಾಂಧವ್ಯ, ಸಿರಿತನ, ಎಲ್ಲವೂ ಅಹಂಕಾರದ ತೆವಲಿನ ತಾಟಕವಾಗಿರುವ ಈ ಹೊತ್ತಿನಲ್ಲಿ 'ಕಸ್ತೂರಿ ನಿವಾಸ'ವನ್ನು ಗೆಳೆಯರೊಂದಿಗೆ, ಕುಟುಂಬದೊಂದಿಗೆ ನೋಡಿ ಒಂದಿಷ್ಟು ಕಲಿಯಬಹುದು ಅನ್ನಿಸುತ್ತದೆ.

ಕಾಕತಾಳೀಯವೆಂದರೆ, ಆ ಸಿನಿಮಾಕ್ಕೆ, ಹೈದ್ರಾಬಾದ್‌ನಿಂದ 500 ರೂಪಾಯಿ ಕೊಟ್ಟು ತರಿಸಿದ ಪಾರಿವಾಳ ಅದೇ ಹೈದ್ರಾಬಾದ್‌ನಲ್ಲಿ ವಾಸವಾಗಿರುವ ಸಿನಿಮಾದ ರಾಣಿ, ಈಗ ನಾವು ನೋಡುತ್ತಿರುವ ವರ್ಣಮಯ ಕಸ್ತೂರಿ ನಿವಾಸ. 'ಆಡಿಸಿದಾತ ಬೇಸರ ಮೂಡಿ ಆಟ ಮುಗಿಸಿದ… ಸೂತ್ರವ ಹರಿದ ಬೊಂಬೆಯ ಮುರಿದ ಮಣ್ಣಾಗಿಸಿದ… ಕಂಬನಿ ಧಾರೆ ಹರಿಸಲು ನನ್ನ ಜೀವ ಉಳಿಸಿದ… ಅಯ್ಯೋ ಜೀವ ಉಳಿಸಿದ…' ಇದು ಜಿ.ಕೆ. ವೆಂಕಟೇಶ್ ಹಾಡಿದ ಅಮರ 'ಲೋಲೋ' ಸಾಂಗ್. ಆದರೆ, ಅಷು [illegible] ಇದು ಚಿತ್ರದ ಮತ್ತು ನಮ್ಮೆಲ್ಲರ ಬದುಕಿನ ಅರ್ಥಪೂರ್ಣ ಗಾಥೆಯಾಗಿದೆ.

● ಡಾ. ಕುಂಸಿ ಉಮೇಶ್

ಕೊನೆಯ ನರಬಲಿ





ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್
nvasanth1@hotmail.com

ಮುಂದಿನ ನಾಲ್ಕು ದಿನಗಳಲ್ಲಿ ಯಾವುದೇ ನರಬಲಿಯ ಸುದ್ದಿ ಬರಲಿಲ್ಲ, ಹಾಗಾಗಿ ಅಲ್ಲಿನ ಜನ ನಾವು ಈಗಾಗಲೇ ಕೊಂದ ಹುಲಿ ನರಭಕ್ಷಕನೇ ಎಂದು ನಮಗೆ ಅಭಿನಂದನೆ ಹೇಳಿದರು. ಕೆಲವರ ಪ್ರಕಾರ ಅಲ್ಲಿ ಒಂದೇ ಹುಲಿಯಿದ್ದು ಅದು ಸಾಕುಪ್ರಾಣಿ ಮತ್ತು ಮಾನವ ಇಬ್ಬರಿಗೂ ಕಂಟಕವಾಗಿತ್ತು. ಆದರೆ ನರಭಕ್ಷಕ ಹುಲಿ ತನ್ನ ಸಂಗಾತಿಯ ಸಾವಿನ ನಂತರ ಬೇರೆ ಕಡೆ ಹೋಗಿರದಿದ್ದರೆ ಇಂದಲ್ಲಾ ನಾಳೆ ಮತ್ತೆ ನರಬಲಿಯಾಗುತ್ತದೆ ಎಂದು ನಮಗೆ ಖಾತ್ರಿಯಾಗಿತ್ತು. ಆ ನಾಲ್ಕು ದಿನಗಳನ್ನು ನಾವು ಚಿತ್ರದುರ್ಗದವರೆಗಿನ ರಸ್ತೆ ಮತ್ತು ಕಾಡಿನ ದಾರಿಗಳಲ್ಲಿ ಸುತ್ತುತ್ತಲೇ ಕಳೆದೆವು.

ಐದನೆಯ ದಿನ ಮಧ್ಯಾಹ್ನದ ಹೊತ್ತಿಗೆ ನಾವು ನಿರೀಕ್ಷಿಸಿದ್ದ ಆದರೆ ಆಶಿಸದಿದ್ದ ಸುದ್ದಿ ಬಂದಿತು. ಚಿತ್ರದುರ್ಗದ ಅಮಲ್ದಾರರು ಕಳಿಸಿದ ಮಾಹಿತಿಯ ಪ್ರಕಾರ ಅಲ್ಲಿನ ಜೋಗಿಮಟ್ಟಿ ಎನ್ನುವ ಬೆಟ್ಟದ ಬುಡದಲ್ಲಿದ್ದ ಗುಡಿಸಿಲೊಂದರಿಂದ ಹಿಂದಿನ ದಿನ ಸಾಯಂಕಾಲ ಹುಲಿ ಹದಿನಾಲ್ಕು ವರ್ಷದ ಬಾಲಕನೊಬ್ಬನನ್ನು ಹೊತ್ತೊಯ್ದಿತ್ತು. ನಾವು ತಕ್ಷಣ ಆ ಗುಡಿಸಲಿನ ಹತ್ತಿರ ಹೋದೆವು. ಅಲ್ಲಿನ ನಿವಾಸಿಗಳು ಹೇಳಿದ ಪ್ರಕಾರ ಹುಲಿ ಬಾಲಕನನ್ನು ಬೆಟ್ಟದ ಮೇಲೆ ಹೊತ್ತೊಕೊಂಡು ಹೋಗಿತ್ತು ಮತ್ತು ಸದ್ಯಕ್ಕೆ ಅದು ಅಲ್ಲಿದ್ದ ಹಾಳುಕೋಟೆಯಲ್ಲಿ ಆಶ್ರಯ ಪಡೆದಿತ್ತು. ನಾವು ಕೆಲವು ಜನರನ್ನು ಒಟ್ಟು ಮಾಡಿಕೊಂಡು ಬಾಲಕನ ಶವವನ್ನು ಹುಡುಕಲು ಹೊರಟೆವು. ಕತ್ತಲಾಗಲು ಇನ್ನು ಕೇವಲ ನಾಲ್ಕು ಗಂಟೆಗಳ ಸಮಯ ಮಾತ್ರ ಉಳಿದಿತ್ತು.

ನಾವು ಬೆಟ್ಟವನ್ನು ಹತ್ತುವ ಕಾಲುದಾರಿಯಲ್ಲಿ ಮುಂದುವರೆದಂತೆ ಬಾಲಕನ ಯಾವುದೇ ಕುರುಹುಗಳು ಸಿಗಲಿಲ್ಲ, ಹಾಗಾಗಿ ಹುಲಿ ಬಂಡೆಗಳ ಸಂದಿನಿಂದ ಹಾದುಹೋಗಿರುವ ಸಾಧ್ಯತೆ ಇತ್ತು. ನಮ್ಮ ಜನ ಬಂಡೆಗಳನ್ನು ಹತ್ತಿ ಎಲ್ಲಾ ದಿಕ್ಕಿನಲ್ಲಿ ನೋಡುತ್ತಿರುವಾಗ ಸ್ವಲ್ಪ ದೂರದ ಮರವೊಂದರಲ್ಲಿ ಹದ್ದುಗಳು ಕುಳಿತಿರುವುದು ಕಂಡಿತು. ಬಂಡೆ ಮತ್ತೆ ಪೊದೆಗಳನ್ನು ದಾಟಿಕೊಂಡು ಆ ಸ್ಥಳಕ್ಕೆ ಹೋದಾಗ ಹುಲಿ ಮತ್ತು ಹದ್ದುಗಳು ಸಂಪೂರ್ಣ ತಿಂದು ಹಾಕಿದ್ದ ಶವದ ಅವಶೇಷಗಳನ್ನು ನೋಡಿದೆವು.

ಹುಲಿ ಆ ಸ್ಥಳಕ್ಕೆ ಮತ್ತೆ ಬರುವ ಸಾಧ್ಯತೆಗಳಿರಲಿಲ್ಲ, ಆದರೂ ನಮ್ಮ ಜನ ಹದ್ದುಗಳು ಕುಳಿತಿದ್ದ ಮರದಲ್ಲಿ ಮಚಾನನ್ನು ಕಟ್ಟಿದರು. ಮ್ಯಾಕ್ ಮತ್ತು ಇಬ್ಬರು ಸಹಾಯಕರು ಅದರಲ್ಲಿ ಕುಳಿತುಕೊಂಡರು. ಬೆಟ್ಟವನ್ನೇರಿ ಪಾಳುಬಿದ್ದ ಕೋಟೆಯಲ್ಲಿ ಹುಡುಕುವಷ್ಟು ಸಮಯವಿದ್ದುದರಿಂದ ನಾನು ಉಳಿದ ನಾಲ್ಕು ಜನ ಸಹಾಯಕರ ಜೊತೆ ಮುಂದುವರಿಯಲು ನಿರ್ಧರಿಸಿದೆ.

ಮತ್ತೆ ಕಾಲುದಾರಿಯನ್ನು ಹಿಡಿದು ನಾವು ಸುಮಾರು 5 ಗಂಟೆಯ ಹೊತ್ತಿಗೆ ಕೋಟೆಯನ್ನು ತಲುಪಿದೆವು. ಕೋಟೆಯ ಗೋಡೆಗಳು ಶಿಥಿಲವಾಗಿದ್ದು ಅಲ್ಲೆಲ್ಲಾ ಲಂಟಾನ ಪೊದೆಗಳು ಆವರಿಸಿಕೊಂಡಿದ್ದವು. ನನ್ನ ಸಹಾಯಕರನ್ನು ಹತ್ತಿರದಲ್ಲಿದ್ದ ಮರದ ಮೇಲೆ ಕುಳಿತು ಕಾಯಲು ಹೇಳಿ ನಾನೊಬ್ಬನೇ ಕೋಟೆಯ ಒಳಗೆ ಹೊರಟೆ.

ಕೋಟೆಯಲ್ಲಿ ಅಂತಿಮ ಬೇಟೆ!

ಲಂಟಾನ ಪೊದೆಗಳ ಒಳಗೆ ಕತ್ತಲು ಆವರಿಸಿಕೊಂಡಿದ್ದು ಕೆಲವೇ ಗಜಗಳಿಗಿಂತ ಹೆಚ್ಚಿನ ದೂರ ಕಾಣುತ್ತಿರಲಿಲ್ಲ, ಆದರೊಳಗೆ ನುಗ್ಗಿ ಮುಂದೆ ಹೋಗುವುದು ತೀರಾ ಅಪಾಯಕಾರಿಯಾಗಿತ್ತು, ಆದ್ದರಿಂದ ಮುರುಕಲು ಗೋಡೆಯ ಮೇಲೆ ಎಚ್ಚರಿಕೆಯಿಂದ ನಡೆಯತೊಡಗಿದೆ. ಈ ನಡಿಗೆ ನಿಧಾನವಾಗಿತ್ತಲ್ಲದೆ ಬಹಳ ಕಷ್ಟಕರವಾದುದ್ದಾಗಿತ್ತು. ನಾನು ಕೋಟೆಯ ಇನ್ನೊಂದು ತುದಿಯನ್ನು ತಲುಪುವಷ್ಟರಲ್ಲಿ ಬೆವರಿನಿಂದ ತೊಯ್ದು ಏದುಸಿರು ಬಿಡುತ್ತಿದ್ದೆ. ಅಲ್ಲಿ ಪಶ್ಚಿಮದ ಬಾನಂಚಿನಲ್ಲಿ ಮುಳುಗುತ್ತಿದ್ದ ಸೂರ್ಯನ ಹೊಂಗಿರಣಗಳು ನನ್ನೆದುರಿಗೆ ಹಾಸಿಕೊಂಡಿತ್ತು.

ಬಹಳ ವರ್ಷಗಳ ಹಿಂದೆ ನಾನು ಚಿತ್ರದುರ್ಗದ ಕೋಟೆಯನ್ನು ನೋಡಿದ್ದೆ. ನನಗೆ ತಿಳಿದಿದ್ದ ಪ್ರಕಾರ ನಾನಿದ್ದ ಸ್ಥಳದಿಂದ ಮುಂದೆ ಗೋಡೆಗಳಿಂದ ಆವೃತವಾದ ಸಣ್ಣಸಣ್ಣ ಜಾಗಗಳಿದ್ದವು. ಹಾಗಾಗಿ ಗೋಡೆಯ ಮೇಲೆಯೇ ನಡೆದುಹೋಗುವುದೂ ಅಸಾಧ್ಯವಾಗಿತ್ತು, ಕೆಳಗಿದ್ದ ಲಂಟಾನ ಪೊದೆಗಳಲ್ಲಿ ಇಳಿದು ಹಾದುಹೋಗುವುದು ನನಗೆ ಇಷ್ಟವಿಲ್ಲದಿದ್ದರೂ ಅನಿವಾರ್ಯವಾಗಿತ್ತು. ಸುಮಾರು ನೂರ ಗಜ ಪೊದೆಗಳಲ್ಲಿ ನಡೆದು ಹೋದರೆ ಮುಂದೆ ಮತ್ತೆ ಗೋಡೆಯನ್ನೇರಿ ನಡೆಯಬಹುದಿತ್ತು. ಸಮಯವೂ ಬಹಳ ಕಡಿಮೆ ಇದ್ದುದರಿಂದ ನಾನು ಅಪಾಯವನ್ನು ಎದುರಿಸಲೇಬೇಕಿತ್ತು.

ಹಾಗಾಗಿ ಗೋಡೆಯಿಂದ ಇಳಿದು ಸಾಧ್ಯವಾದಷ್ಟು ನಿಶಬ್ದವಾಗಿ ಪೊದೆಗಳಲ್ಲಿ ನಡೆಯತೊಡಗಿದೆ. ಚುಚ್ಚುತ್ತಿರುವ ಮುಳ್ಳುಗಳ ನೋವು ಒಂದು ಕಡೆ ಬಾಧಿಸಿದರೆ ಪೊದೆಗಳನ್ನು ಹಾಯುವಾಗ ಆಗುತ್ತಿದ್ದ ಸದ್ದು ನನ್ನನ್ನು ಎದೆಗುಂದಿಸುತ್ತಿತ್ತು. ಇಲ್ಲಿನ ಯಾವುದೋ ಗೋಡೆಗಳ ಮಧ್ಯೆ ಹುಲಿ ಅಡಗಿಕೊಂಡಿದೆ ಎಂದು ನನಗೆ ಖಚಿತವಾಗಿತ್ತು. ತೀವ್ರ ಆತಂಕದಲ್ಲಿದ್ದ ನನಗೆ ಹುಲಿ ಎಲ್ಲೋ ಹತ್ತಿರದಲ್ಲೇ ಇದ್ದು ನನ್ನನ್ನು ಗಮನಿಸುತ್ತಿದೆ ಮತ್ತು ಆಕ್ರಮಣ ಮಾಡಲು ಸರಿಯಾದ ಸಮಯಕ್ಕಾಗಿ ಕಾಯುತ್ತಿದೆ ಎಂದು ನನ್ನ ಆರನೇ ಇಂದ್ರಿಯ ಹೇಳಿತು. ನಾನು ಆದಷ್ಟು ಬೇಗ ಲಂಟಾನದಿಂದ ಹೊರಬರದಿದ್ದರೆ ಅಪಾಯ ಕಟ್ಟಿಟ್ಟಬುತ್ತಿ ಎಂದುಕೊಳ್ಳುತ್ತಾ ಭಯದಿಂದ ನಡುಗುತ್ತಿದ್ದರೂ ನನ್ನ ನಡಿಗೆಯನ್ನು ತೀವ್ರಗೊಳಿಸಿದೆ.

ಮುಂದುವರಿಯುತ್ತಾ ಮೂವತ್ತು, ಇಪ್ಪತ್ತು, ನಂತರ ಹದಿನೈದು ಗಜ ದೂರವನ್ನು ಕ್ರಮಿಸುವುದು ಉಳಿದಿತ್ತು. ಆಗ ನನ್ನ ಎಡಗಡೆಯಿದ್ದ ಪೊದೆಗಳ ಮರೆಯಿಂದ ಕೋಪದಿಂದ ಗುರುಗುಟ್ಟುತ್ತಿದ್ದ ಹುಲಿಯ ತಲೆ ಹೊರಬಂದಿತು. ಕಿವಿಯನ್ನು ಹಿಂದಕ್ಕೆ ಚಾಚಿ, ಬಾಯಿಯನ್ನು ಅಗಲವಾಗಿ ತೆರೆದು ಅದು ಆಕ್ರಮಣಕ್ಕೆ ಸಿದ್ಧವಾಗಿತ್ತು.

ಹುಲಿ ಮುಂದಕ್ಕೆ ಜಿಗಿದಂತೆ ನನ್ನ ಬಂದೂಕಿನಿಂದ ಸಿಡಿದ ಗುಂಡು ಅದರ ಬಾಯಿಯ ಮೂಲಕ ಹಾದುಹೋಗಿತ್ತು. ಸ್ವಲ್ಪ ಎತ್ತರದ ಸ್ಥಳಕ್ಕೆ ಹೋಗಲು ನಾನು ದೌಡಾಯಿಸುವಷ್ಟರಲ್ಲಿ ಲಂಟಾನ ಮುಳ್ಳುಗಳು ನನ್ನ ಕಣ್ಣಿನ ಹೊರತಾಗಿ ಇಡೀ ದೇಹದ ಮಾಂಸವನ್ನು ಸೀಳಿಕೊಂಡು ಗಾಯಮಾಡಿತು.

ತಲೆಯ ಹಿಂದಿನ ಭಾಗ ನನ್ನ ಗುಂಡಿನಿಂದ ಸ್ಫೋಟವಾಗಿದ್ದರೂ ಹುಲಿ ನನ್ನ ಬೆನ್ನುಹತ್ತಿತ್ತು. ಉಳಿದ ಹದಿನೈದು ಗಜ ದೂರವನ್ನು ಓಡಿ ನಾನು ಹಿಂತಿರುಗಿ ನಿಂತು ನೋಡುವಷ್ಟರಲ್ಲಿ ಅದು ನನ್ನಿಂದ ಎರಡೇ ಗಜ ದೂರದಲ್ಲಿತ್ತು. ಹುಲಿಯ ತಲೆಚಿಪ್ಪಿನಲ್ಲಿ ದೊಡ್ಡ ರಂಧ್ರವಾಗಿರುವುದು ನನಗೆ ಸ್ಪಷ್ಟವಾಗಿ ಕಾಣುತ್ತಿತ್ತು. ಭಯದಿಂದ ನಡುಗುತ್ತಲೇ ನಾನು ಒಂದು, ಎರಡು, ಮೂರು-ಹೀಗೆ ಮೂರು ಗುಂಡುಗಳನ್ನು ಚಲಾಯಿಸಿದೆ. ಹುಲಿ ಪಕ್ಕಕ್ಕೆ ಹೊರಳಿ ಬಿದ್ದುಕೊಂ... ಹೆದರಿಕೆಯಿಂದ ಎಚ್ಚರ ತಪ್ಪುವ ಸ್ಥಿತಿಯಲ್ಲಿದ್ದ ನಾನು ಮುರುಕು ಗೋಡೆ... ಹತ್ತಿ ಸುಸ್ತಾಗಿ ಕುಳಿತುಕೊಂಡೆ.

ಹತ್ತು ನಿಮಿಷಗಳ ನಂತರ ಬಹಳ ಕಷ್ಟದಿಂದ ಎದ್ದುನಿಂತೆ. ... ಸತ್ತುಬಿದ್ದಿದ್ದ ಜಾಗವನ್ನು ತಪ್ಪಿಸಿ ನಡೆಯುತ್ತಾ ನಾಲ್ಕು ಜನ ಸಹಾಯ... ಬಿಟ್ಟು ಹೋಗಿದ್ದ ಸ್ಥಳಕ್ಕೆ ಬಂದೆ. ಹುಲಿಯ ಘರ್ಜನೆ ಮತ್ತು ... ಗುಂಡುಗಳ ಶಬ್ದವನ್ನು ಆಲಿಸಿದ್ದ ಅವರು ಹುಲಿ ನನ್ನನ್ನು ಕೊಂದಿದೆ ... ತೀರ್ಮಾನಿಸಿ ರಾತ್ರಿಯನ್ನು ಮರದಲ್ಲಿಯೇ ಕುಳಿತು ಕಳೆಯುವುದೋ ಅ... ಈಗಲೇ ಊರಿನ ಕಡೆ ಓಡಿಹೋಗುವುದೋ ಎಂದು ಚರ್ಚಿಸುತ್ತಿ... ನಾವು ಎಲ್ಲರೂ ಸೇರಿ ಹಿಂತಿರುಗುವಾಗ ಮಾರ್ಗದಲ್ಲೇ ಮ್ಯಾಕ್ ... ಉಳಿದ ಸಹಾಯಕರು ಸಿಕ್ಕಿದರು. ಗುಂಡುಗಳ ಶಬ್ದವನ್ನು ಕೇಳಿದ ... ನಿಜವಾದ ಸ್ನೇಹಿತನಂತೆ ನನ್ನ ಸಹಾಯಕ್ಕೆ ಧಾವಿಸಿದ್ದ. ನನ್ನ ರಕ್ತಸಿಕ್ತ ಮುಖ... ನೋಡಿ ಹುಲಿ ನನ್ನನ್ನು ಗಾಯಗೊಳಿಸಿದೆ ಎಂದು ಓಡಿಬಂದು ನ... ಹಿಡಿದುಕೊಂಡ.



ನನ್ನ ಪೈಪ್‌ನಿಂದ ನಿರಂತರವಾಗಿ ಬುಸುಬುಸು ತಂಬಾಕನ್ನು ಸೇ... ಅವರಿಗೆ ಎಲ್ಲವನ್ನೂ ವಿವರಿಸಿದೆ. ಹುಲಿಯ ಭಯಾನಕ ಮುಖವನ್ನು ಕ... ಅಡಿಗಳ ದೂರದಲ್ಲಿ ನೋಡಿದಾಗ ಮತ್ತೆ ತಂಬಾಕನ್ನು ಸೇದಲು... ಬದುಕಿರಲಾರೆ ಎಂದು ನನಗೆ ಅನ್ನಿಸಿದ್ದು ನಿಜ.

ಕುಲಕಸುಬಿಗೆ ಕೊನೆಯಾಯಿತೇ?

ಹುಲಿಯ ಶವವನ್ನು ಪರೀಕ್ಷಿಸಿದಾಗ ಅದು ಹೆಣ್ಣು ಎನ್ನುವ... ಗಮನಿಸಿದೆವು. ಇದೇ ನರಭಕ್ಷಕ ಹುಲಿ ಎನ್ನುವುದರಲ್ಲಿ ಯಾ... ಅನುಮಾನವಿರಲಿಲ್ಲ, ಆದರೆ ಅದು ನರಭಕ್ಷಕನಾಗಿ ಪರಿವರ್ತನೆಯಾಗಿರು... ಯಾವುದೇ ಕಾರಣಗಳು ಗೊತ್ತಾಗುವಂತಿರಲಿಲ್ಲ. ನಾನು ಮೊದಲೇ ಹೇಳ... ಈ ಜಿಲ್ಲೆಯಲ್ಲಿ ತಲೆತಲಾಂತರಗಳಿಂದ ನರಭಕ್ಷಕ ಹುಲಿಗಳಿದ್ದು ಈ ... ಕೂಡ ಅಂತಹ ಸಂತತಿಗೆ ಸೇರಿದ್ದಾಗಿರಬಹುದು. ಮ್ಯಾಕ್ ಕೊ... ಗಂಡುಹುಲಿಯ ಜೊತೆಗೆ ಇದರ ಗೆಳೆತನ ಇತ್ತೀಚಿನದ್ದಾಗಿತ್ತು. ಹಾಗಾ... ಗಂಡುಹುಲಿಗೆ ತನ್ನ ಚಟವನ್ನು ಇದು ಇನ್ನೂ ಅಂಟಿಸಿರಲಿಲ್ಲ. ಈ ... ಹುಲಿ ಜೀವಂತವಾಗಿ ಉಳಿದಿದ್ದರೆ ತನ್ನ ಮರಿಗಳಿಗೂ ನರಮಾಂಸದ ರುಚಿ... ತೋರಿಸಿ ಕುಲಕಸುಬನ್ನು ಮುಂದುವರೆಸಲು ಸಹಾಯ ಮಾಡುತ್ತಿತ್ತು... ಎರಡು ಹುಲಿಗಳ ಜೊತೆ ಮೂರನೆಯದೊಂದು ನರಭಕ್ಷಕ ... ಇರಬಹುದೆಂಬ ನಮ್ಮ ಊಹೆ ಸುಳ್ಳಾಗಿತ್ತು. ಮುಂದೆ ಈ ಜಿಲ್ಲೆ... ಯಾವುದೇ ನರಬಲಿಗಳಾದ ಸುದ್ದಿ ವರದಿಯಾಗಲಿಲ್ಲ.

ಒಂದು ಸಾಕುಪ್ರಾಣಿಗಳ ಕೊಲೆಗಡುಕ ಮತ್ತು ಇನ್ನೊಂದು ನರಭಕ್ಷಕ... ಎರಡು ಹುಲಿಗಳು ಒಟ್ಟಾಗಿ ಬೇಟೆಯಾಡುತ್ತಿದ್ದುದನ್ನು ನಾನು ಇಲ್ಲಿಯ... ಕಂಡು ಕೇಳಿ ತಿಳಿದಿರಲಿಲ್ಲ. ಹೆಣ್ಣುಹುಲಿಗೆ ಬಲಿಯಾದ ಟಾಡ್ ಮತ್ತು ... ಸಾಕಷ್ಟು ಜನರ ಸಾವಿನ ಸೇಡು ಕೊನೆಗೂ ಪೂರ್ತಿಯಾಗಿತ್ತು.

ಮನರೇಗಾ ಯೋಜನೆಗೆ ಚರಮಗೀತೆ

ಟಿವಿ ಚರ್ಚೆಗಳೇ ಇರಲಿ, ಸಾರ್ವಜನಿಕ ವೇದಿಕೆಗಳೇ ರಲಿ ಅಲ್ಲೆಲ್ಲಾ 'ಮೋದಿ' ಮತ್ತು 'ಅಭಿವೃದ್ಧಿ' ಂತ್ರೋಚ್ಚಾರ ಮಾಡದೆ ಹೋದರೆ ಮಾತು ಪೂರ್ಣವೆಂದೇ ಮೋದಿ ಸರ್ಕಾರದ ವಕ್ತಾರರ ವಳಿಕೆಯಾಗಿರುವಂತಿದೆ. ಇದಕ್ಕೆ ಅಂಕಗಳು ಕಾರಣವೇ




ವಾ ಬಹುಮಾನಗಳು ಕಾರಣವೇ ಎಂಬುದಿನ್ನೂ ಮುಬಂದಿಲ್ಲ! ಇಲ್ಲಿ ಗಮನಾರ್ಹ ವಿಚಾರವೇನೆಂದರೆ ೀದಿಯನ್ನೂ ಒಳಗೊಂಡಂತೆ ಇವರ್‍ಯಾರೂ ತೋಮುಖ ಅಭಿವೃದ್ಧಿ ಬಗ್ಗೆ ಸೊಲ್ಲೆತ್ತುತ್ತಲೇ ಇಲ್ಲ. ಣ ಬಹು ಸರಳ. ಅವರ 'ಅಭಿವೃದ್ಧಿ'ಯ ವ್ಯಾಖ್ಯಾನ ೀ ಕಾರ್ಪೊರೇಟ್ ಧಣಿಗಳು ಮತ್ತು ಶ್ರೀಮಂತ ಮಾಲಿಕರಿಗಷ್ಟೆ ಸೀಮಿತವಾಗಿದೆ. ಬಡ, ದಮನಿತ ಗಳೆಲ್ಲ ವ್ಯಾಪ್ತಿಯಿಂದ ಹೊರಗಿವೆ.

ಮೋದಿ ಸರ್ಕಾರ ಈಗ ಮಹಾತ್ಮ ಗಾಂಧಿ ರಾಷ್ಟ್ರೀಯ ಮೀಣ ಉದ್ಯೋಗ ಖಾತರಿ ಯೋಜನೆಗೆ (ಮನರೇಗಾ) ಉದ್ದೇಶಿಸಿರುವ ತಿದ್ದುಪಡಿಗಳು ಮಾನವ ಅಭಿವೃದ್ಧಿ ಸೂಚ್ಯಂಕ ಇನ್ನಷ್ಟು ಕುಸಿಯಲಿರುವುದರ ಸ್ಪಷ್ಟ ಸೂಚನೆಗಳನ್ನು ನೀಡುತ್ತಿವೆ. ಮೊದಲನೆಯದಾಗಿ ಮನರೇಗಾ ಯೋಜನೆಯನ್ನು ಕೇವಲ ಹಿಂದುಳಿದ ಮತ್ತು ಬುಡಕಟ್ಟುಗಳ ಜಿಲ್ಲೆಗಳಿಗಷ್ಟೆ ಸೀಮಿತಗೊಳಿಸುವ ಮಾತು ಕೇಳಿಬರುತ್ತಿದೆ. ಎರಡನೆಯದಾಗಿ ಮನರೇಗಾದ ನಿಧಿ ಬಳಕೆಯ ಅನುಪಾತವನ್ನು 60:40ರಿಂದ 51:49ಕ್ಕೆ ಬದಲಾಯಿಸಬೇಕೆಂದು ಸೂಚಿಸಲಾಗಿದೆ. ಇದು ನಿಸ್ಸಂಶಯವಾಗಿಯೂ ಯೋಜನೆಯನ್ನು ನಿಧಾನಕ್ಕೆ ನಿರ್ನಾಮಮಾಡುವ ದಿಕ್ಕಿನಲ್ಲಿ ಪ್ರಥಮ ಹೆಜ್ಜೆಯಾಗಿದೆ.

ಮನರೇಗಾ ಯೋಜನೆ ಸಮರ್ಪಕವಾಗಿಲ್ಲ, ಅಲ್ಲಿ ಭ್ರಷ್ಟಾಚಾರವಿದೆ, ಹಣ ಪೋಲಾಗುತ್ತಿದೆ ಎಂದು ಮುಂತಾದ ಆರೋಪಗಳು ಕೇಳಿಬರುತ್ತಿವೆ. ಆದರೆ ಮನಸ್ಸು ಮಾಡಿದರೆ ಭ್ರಷ್ಟಾಚಾರ ಮುಂತಾದವುಗಳನ್ನು ತಡೆಗಟ್ಟುವುದು ಕಷ್ಟವೇನಲ್ಲ. ಇವೆಲ್ಲದಕ್ಕಿಂತಲೂ ಮುಖ್ಯವಾಗಿ ನಮ್ಮ ಮೊದಲ ಆದ್ಯತೆ ಇರಬೇಕಾದುದು ಮಾನವನ ಸರ್ವತೋಮುಖ ಅಭಿವೃದ್ಧಿಯ ವಿಚಾರಕ್ಕೆ. ನಾವು ನೋಡಬೇಕಾಗಿರುವುದು ಮನರೇಗಾ ಕಡುಬಡವರಿಗೆ ಉದ್ಯೋಗ ಖಾತರಿಯನ್ನು ಒದಗಿಸುವಲ್ಲಿ ಯಶಸ್ವಿಯಾಗಿದೆಯೇ ಎಂದು.

ಉದ್ಯೋಗ ಒದಗಿಸಲಾಗಿರುವ ಜಾಗಗಳಲ್ಲಿ ಬಡವರಿಗೆ ಮನರೇಗಾ ಯೋಜನೆಯ ಪ್ರಯೋಜನ ಸಿಗುತ್ತಿದೆಯೇ ಎಂಬ ಪ್ರಶ್ನೆಗೆ ಬಹುತೇಕವಾಗಿ ಹೌದು ಎಂಬ ಉತ್ತರ ಸಿಗುತ್ತದೆ. ಅಕೌಂಟಬಿಲಿಟಿ ಇನಿಷಿಯೆಟಿವ್ ಎಂಬ ಸಂಸ್ಥೆ ನಡೆಸಿರುವ ಸಮೀಕ್ಷೆಯೊಂದು ಹೊರಗೆಡವಿರುವ ಕೆಲವು ಅಂಕಿಅಂಶಗಳನ್ನು ನೋಡೋಣ. 2010-11ರ ಸಾಲಿನಲ್ಲಿ ದೇಶದ ಒಟ್ಟು ಗ್ರಾಮೀಣ ಬಡಕುಟುಂಬಗಳ ಪೈಕಿ ಶೇಕಡಾ 45ರಷ್ಟು ಕುಟುಂಬಗಳು ನರೇಗಾ ಉದ್ಯೋಗಗಳಿಗೆ ಅರ್ಜಿ ಹಾಕಿವೆ. ಆದರೆ ಅವುಗಳ ಪೈಕಿ ಉದ್ಯೋಗ ಲಭಿಸಿರುವುದು ಶೇಕಡಾ 56ರಷ್ಟು (ಶೇಕಡಾ 45ರ ಶೇಕಡಾ 56ರಷ್ಟು) ಕುಟುಂಬಗಳಿಗೆ ಮಾತ್ರ. ಮಿಕ್ಕ 44 ಕುಟುಂಬಗಳಿಗೆ ಉದ್ಯೋಗ ಒದಗಿಸಲಾಗಿಲ್ಲ. ಇದರರ್ಥ ಉದ್ಯೋಗಗಳಿಗೆ ಬೇಡಿಕೆ ಇದೆ. ಆದರೆ ಬೇಡಿಕೆಯ ಪೂರೈಕೆಯಲ್ಲಿ ವೈಫಲ್ಯಗಳಾಗಿವೆ. ಬಡ ರಾಜ್ಯಗಳಲ್ಲಿ ಮನರೇಗಾ ಉದ್ಯೋಗಗಳ ಸೃಷ್ಟಿ ಕಡಮೆಯಾಗಿದೆ ಎಂದು ಸಮೀಕ್ಷೆ ಹೇಳುತ್ತದೆ. ಬಡ ರಾಜ್ಯಗಳು ಉದ್ಯೋಗ ಸೃಷ್ಟಿಯಲ್ಲಿ ವಿಫಲವಾಗಿವೆ ಎಂದು ಇತರ ಸಮೀಕ್ಷೆಗಳೂ ಹೇಳುತ್ತಿವೆ. ದೇಶದ ಶೇಕಡಾ 59ರಷ್ಟು ಗ್ರಾಮೀಣ ಬಡವರು (ಬಿಪಿಎಲ್) ಇರುವಂಥ ಪ.ಬಂಗಾಳ, ಬಿಹಾರ, ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶಗಳಲ್ಲಿ ಬರೀ 34% ಉದ್ಯೋಗಗಳು ಸೃಷ್ಟಿಯಾಗಿವೆ. ಅದೇ ವೇಳೆ ಕೇವಲ 8% ಬಡವರು (ಬಿಪಿಎಲ್) ಇರುವಂಥ ಆಂಧ್ರ ಪ್ರದೇಶ ಮತ್ತು ತಮಿಳ್ನಾಡುಗಳಲ್ಲಿ ಶೇಕಡಾ 23ರಷ್ಟು ಉದ್ಯೋಗಗಳು ಸೃಷ್ಟಿಯಾಗಿರುವುದು ಕಂಡುಬರುತ್ತದೆ. ಅಂದರೆ ಅತ್ಯಧಿಕ ಬೇಡಿಕೆ ಇದ್ದ ಬಡರಾಜ್ಯಗಳಲ್ಲಿ ಉದ್ಯೋಗಗಳು ಇರಲಿಲ್ಲ, ಆದರೆ ಬಡವರು ಕಡಿಮೆ ಸಂಖ್ಯೆಯಲ್ಲಿರುವ ರಾಜ್ಯಗಳಲ್ಲಿ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲಾಗಿದೆ. ಇಂತಹ



ಪರಿಸ್ಥಿತಿಯ ನಿರ್ಮಾಣಕ್ಕೆ ಮುಖ್ಯ ಕಾರಣ ಆಯಾ ರಾಜ್ಯಗಳ ಸಾಮರ್ಥ್ಯವೇ ಹೊರತು ಇನ್ನೇನೂ ಅಲ್ಲ. ರಾಜ್ಯವೊಂದರ ಸಾಮರ್ಥ್ಯವನ್ನು ನಿರ್ಧರಿಸುವುದು ಹಣಕಾಸು, ಸಿಬ್ಬಂದಿ ಮತ್ತು ಪ್ರೇರಣೆ ಎಂಬ ಮೂರು ಅಂಶಗಳು. ಬಡ ರಾಜ್ಯಗಳಲ್ಲಿ ಹಣಕಾಸಿನ ಕೊರತೆ, ಸಿಬ್ಬಂದಿಯ ಕೊರತೆ, ಪ್ರೇರಣೆಯ ಕೊರತೆ ಇದೆ. ಆದರೆ ಇವೆಲ್ಲವೂ ಆಡಳಿತ ವೈಫಲ್ಯಗಳು. ಯೋಜನೆಯ ವೈಫಲ್ಯಗಳಲ್ಲ.

ಎರಡನೆಯ ತಿದ್ದುಪಡಿಯಾಗಿ ಶೇಕಡಾ 51ರಷ್ಟು ನಿಧಿಗಳನ್ನು ಕಾರ್ಮಿಕರ ಸಂಬಳಕ್ಕೆ ಮತ್ತು ಮಿಕ್ಕ ಶೇಕಡಾ 49ರಷ್ಟನ್ನು ಸಾಮಗ್ರಿಗಳಿಗಾಗಿ ಬಳಸಬೇಕೆಂದು ಸೂಚಿಸಲಾಗಿದೆ. ಇದರಿಂದಾಗಿ ಯಂತ್ರಗಳ ಬಳಕೆ ಹೆಚ್ಚಾಗಿ ಉದ್ಯೋಗಗಳ ಸಂಖ್ಯೆ ಕಡಮೆಯಾಗಿ ಭ್ರಷ್ಟಾಚಾರ ಇನ್ನಷ್ಟು ಜಾಸ್ತಿಯಾಗುವ ಎಲ್ಲಾ ಸಾಧ್ಯತೆಗಳೂ ಇವೆ. ಎರಡೂ ತಿದ್ದುಪಡಿಗಳ ಒಟ್ಟು ಪರಿಣಾಮವಾಗಿ ಈಗಿರುವುದಕ್ಕಿಂತಲೂ ಕಡಮೆ ಉದ್ಯೋಗಗಳು ಸೃಷ್ಟಿಯಾಗಲಿರುವುದರಲ್ಲಿ ಅನುಮಾನವಿಲ್ಲ. ಆಗ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗುತ್ತದೆ. ಮನರೇಗಾ ಯೋಜನೆಗೆ ಚರಮಗೀತೆ ಹಾಡಲು ನೆಪ ಸಿದ್ಧವಾಗುತ್ತದೆ. ಮೋದಿ ಸರ್ಕಾರದ 'ಅಭಿವೃದ್ಧಿ'ಯ ಹಾದಿ ಇನ್ನಷ್ಟು ಸುಗಮವಾಗುತ್ತದೆ.

(ಆಧಾರ: ದ ಹಿಂದೂ, 8-11-2014)

ಕಾಂಗ್ರೆಸ್ ದುಶ್ಯಾಸನರು ಯಾರು ಮೇಡಂ?

ಥೂತ್ತೇರಿ

ತೀರ್ಥಹಳ್ಳಿಯ ನಂದಿತಾ ಎಂಬ ಹೆಣ್ಣು ಮಗಳನ್ನು ಟಕದ ಭಂಡ ಬಾಳಿನ ಬಿಜೆಪಿಗಳು ಕೈಗೆತ್ತಿಕೊಂಡು, ಗೆ ರೇಪು ಮಾಡಿಸಿದರು. ಅದೂ ಮೂವರಿಂದ. ಅದೂ ರ ಹುಡುಗರಿಂದ. ಇದೆಲ್ಲಾ ಆದಮೇಲೆ ಆಕೆಗೆ ವಿಷ ಸಿ ಬಿಟ್ಟುಹೋದರು. ಈ ಪ್ರಕರಣಕ್ಕೆ ಅವರು ಬಳಸಿದ್ದು ಕಾರು. ನಂತರ ತೀರ್ಥಹಳ್ಳಿ ಬಂದ್ ಮಾಡಿಸಿದರು. ಬಂದ್ ಮಾಡಿಸಿದರು. ರಾಘವನ ವಿಷಯದಲ್ಲಿ ಮಿಗೆ ಅಕ್ಕಿ ಕಾಳಾಕಿಕೊಂಡು ಮಲಗಿದ್ದ ಸಾಗರದ ಗಳು ಅದನ್ನೂ ಬಂದ್ ಮಾಡಿಸಿದರು. ಇದಿಷ್ಟೂ ದೆಂಬಂತೆ ಚೆಡ್ಡಿ ವೀರರೆಲ್ಲಾ ಶೋಭಕ್ಕನ ಸಮೇತ ರ್ಥಹಳ್ಳಿಗೆ ಹೋಗಿ ಸಭೆ ಮಾಡಿ, ಬೆಂಗಳೂರಲ್ಲಿ ಖ್ಯಮಂತ್ರಿ ಮನೆಗೆ ಮುತ್ತಿಗೆ ಹಾಕಿ ದಿಗ್ವಿಜಯನ ನಗೆ ದರು. ಅತ್ತ ತೀರ್ಥಹಳ್ಳಿ ಘಟನೆಯ ಬಗ್ಗೆ ಸತ್ಯಸಂಗತಿ ಧಿಸಿರುವ ಸಿಐಡಿ ಪ್ರಕಾರ, ನಂದಿತಾಳ ಮೇಲೆ ಯಾವ ಪ್ಪ ನಡೆದಿಲ್ಲ. ಅವಳ ಕೊಲೆಯೂ ನಡೆದಿಲ್ಲ. ಇಂಗ್ಲಿಷ್ ಡಿಯಂನಲ್ಲಿ ಓದಬೇಕಾದ ಯಾತನೆ ಮತ್ತು ಕೀಳರಿಮೆ ರದೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂಬ ಸಂಗತಿ ರಬಿದ್ದಿದೆಯಲ್ಲಾ, ಇದರಿಂದ ಚೆಡ್ಡಿಗಳು ತಮ್ಮ ಮಾನ ಜಾದ ಗತ್ತಿನಲ್ಲಿ ತಲೆಮರೆಸಿ ಕೊಂಡಿವೆಯಂತಲ್ಲಾ. ಗಳು ಮಾಡಿದ ಅನಾಹುತಕ್ಕೆ ತೀರ್ಥಹಳ್ಳಿಯ ವಂತರೂ "ಥೂ, ಈ ಬಿಜೆಪಿಗಳು ಭಂಡ ಬಾಳಿಗೆ ಹಾಕ" ಎಂದು ಉಗಿದರಂತಲ್ಲಾ ಥೂತ್ತೇರಿ!

* * *

ನಡೆಯುದೇ ಇರುವ ಘಟನೆಯನ್ನ ರಾಜ್ಯದಾದ್ಯಂತ , ಕರ್ನಾಟಕಕ್ಕೆ ಕಿಚ್ಚು ಹಚ್ಚಬೇಕೆಂದಿದ್ದ ಚೆಡ್ಡಿಗಳು ಗಿಯ ತಂದೆಯನ್ನು ಯಮಾರಿಸಿದರಂತಲ್ಲಾ. ಅತನಿಂದ ಮಗಳನ್ನು ರೇಪು ಮಾಡಿ ವಿಷ ಕುಡಿಸಿದ ಸಾಬರ ಮಗನನ್ನು ಅರೆಸ್ಟು ಮಾಡಿ ಎನ್ನುವ ಹೇಳಿಕೆ ಕೊಡಿಸುತ್ತ ವಿಷಪ್ರಾಶನದ ಪ್ರಸಂಗ ಅಪ್ಪನ ಕಡೆಗೇ ಕೊಳ್ಳುತ್ತಿರುವುದನ್ನು ನೋಡಿ ಚೆಡ್ಡಿಗಳು ಪಲಾಯನ ಸಿದ್ದಾರಂತಲ್ಲಾ. ವಾಸ್ತವವಾಗಿ ಚೆಡ್ಡಿಗಳಿಗೆ ಬೇಕಿರುವುದು ರೇಪಿನ ಸಂಗತಿ ಅಷ್ಟೆ. ಈ ಸಂಗತಿಯ ಬೆನ್ನು ಈಶ್ವರಪ್ಪ ಎಂಬ ಅಸುರ ಸಿದ್ದರಾಮಯ್ಯನ ಮಗಳು ಮತ್ತು ಜಾರ್ಜ್‌ನ ಮಗಳು ಮೇರಿಯ ರೇಪಾದರೆ ತನಿಖೆ ನಡೆಸಬಲ್ಲರು ಎಂದು ಹೇಳಿದನಲ್ಲಾ, ಎಂಬ ಈಶ್ವರಪ್ಪನಂತಹ ಗಿರಾಕಿಯಿಂದ ಹೋರಟದೆಯಲ್ಲಾ, ಹೇಳುವುದೇನೆಂದರೆ ಅಕ್ಕನ ಮಗಳಿಗೆ ಮದುವೆಯಾಗಿದ್ದಾಗಿ. ಹಾಕ ಇಷ್ಟವಿದ್ದರೂ ಈಶ್ವರಪ್ಪನ ರೇಪಿಗೆ ಒಳಗಾಗಬೇಕಾಯ್ತು. ಈಗ ರೇಪಿನ ರುಚಿ ಹಿಡಿದಿರುವ ಈ ರಾಕ್ಷಸ ಎಲ್ಲರಿಗೂ ಅದನ್ನೇ ಹೇಳುತ್ತಾನೆ. ವಾಸ್ತವವಾಗಿ ಈಶ್ವರಪ್ಪನ ಹೆಂಡತಿ ನೋಡಿದರೆ ಯಾರಿಗಾದರೂ ವೈರಾಗ್ಯವುಂಟಾಗುತ್ತದೆ. ಅಂತಹ ಮಹಿಳೆ ಬಗ್ಗೆ ಮಾತನಾಡಿದ್ದಕ್ಕೆ ಕ್ಷಮೆಯಿರಲಿ. ವಾಸ್ತವವಾಗಿ ನಾನು ಕ್ಷಮೆ ಕೇಳುವವನಲ್ಲ, ಕಾಂಗ್ರೆಸ್ ಪಾರ್ಟಿಯ ಮಾನ ಉಳಿಸಲು ಕ್ಷಮೆ ಕೇಳಿದೆ' ಎಂದನಲ್ಲಾ, ಥೂತ್ತೇರಿ!!

* * *

ಕಾಂಗ್ರೆಸ್‌ನ ಮಾನಕ್ಕಾಗಿ ಕ್ಷಮೆ ಕೇಳಿದೆ ಎಂದು ಡಿಸೋಜ ಹೇಳುತ್ತಿರುವಾಗಲೇ, ಇತ್ತ ತೇಜಮ್ಮ ಎಂಬ ಬಾಯಿಬೇದಿ ಮಹಿಳೆ ಕಾಂಗ್ರೆಸ್ಸಿನಲ್ಲಿ ದುಶ್ಯಾಸನರಿದ್ದಾರೆ ಎಂದು ಠುಸ್ ಬಾಂಬ್ ಎಸೆದು ಬಿಟ್ಟಿದ್ದಾಳಲ್ಲಾ. ಈ ಬಗ್ಗೆ ಮಾತನಾಡಿಸಿ ಮಜ ತೆಗೆದುಕೊಳ್ಳುವ ಆಸೆಯಿಂದ ಫೋನ್ ಮಾಡಿದರೆ ರಿಂಗಾಯ್ತು.



ರಿಂಗ್‌ಟೋನ್: "ಜೋಕೆ ನಾನು ಬಳ್ಳಿಯ ಮಿಂಚು, ಕಣ್ಣು ಕತ್ತಿಯ ಅಂಚು ಬಲೆಗೆ ಬಿದ್ದಾಗಲೇ ಅರಿವೆ ನೀ ಸಂಚೂ...."

"ಹಲೋ ಯಾರು?"

"ನಾನು ಮೇಡಂ ಯಾಹು."

"ಹೇಗಿದ್ದಿರಿ ಯಾಹು?"

"ನಾನು ಚೆನ್ನಾಗಿದೀನಿ. ಹೇಗಿದೆ ಹೊಸ ಜಾಗ?"

"ಇಲ್ಲಿ ತುಂಬ ಚೆನ್ನಾಗಿದೆ. ನಾನೀಗ ಪಾರ್ಟಿ ವಕ್ತಾರೆ."

"ಓಹೋ, ಅದಕ್ಕೆ ಡಿಬೇಟ್ ಧ್ವನಿ ಬಂದಿದೆ."

"ಮಾತಾಡ್ಬೇಕು. ಹೆಣ್ಣು ಮಕ್ಕಳು ಸುಮ್ಮನಿದ್ರೆ ಈ ಗಂಡಸರು ಸವಾರಿ ಮಾಡ್ತರೆ."

"ಸವಾರಿ ಮಾಡ್ಬೇಕೇಕಲ್ಲ ಮೇಡಂ. ಇಲ್ದೆಯಿದ್ರೆ ಜೀವನ ನಡಿಯೋದ್ಹಂಗೆ? ಇನ್ನೊಂದು ಮೇಡಂ ಕಾಂಗ್ರೆಸ್‌ನಲ್ಲಿ ದುಶ್ಯಾಸನರಿದ್ದಾರೆ ಅಂತ ಹೇಳಿದ್ದಿರಿ. ಅದ್ಯಾರು?"

"ಅದನ್ನ ಸಮಯ ಬಂದಾಗ ಹೇಳ್ತಿನಿ."

"ಕುಮಾರಸ್ವಾಮಿಯಂಗೆ ಹೇಳ್ತಿರಲ್ಲ ಮೇಡಂ. ಇದೇ ಸೂಕ್ತ ಸಂದರ್ಭ ಹೇಳಿ."

"ಸಮಯ ಬರುತ್ತೆ, ಹೇಳ್ತಿನಿ."

"ನೀವು ಉದಯ ಟಿ.ವಿಲಿದ್ದಾಗ ಎಸ್.ಎಂ.ಕೃಷ್ಣನ್ನ ನಂಬರ್ ಒನ್ ಮುಖ್ಯಮಂತ್ರಿ ಅಂತ ಹೊಗಳಿ ಹೊಗಳಿ ಕಾಂಗ್ರೆಸ್ ಸೇರಿಕೊಂಡ್ರಿ. ಅವ್ರುರೇನಾರ ನಿಮ್ಮ ಸೆರಗಿಗೆ ಕೈಹಾಕಿದ್ರ?"

"ಅವ್ರುರಂಥೋರಲ್ಲ, ಜಂಟ್ಲ್‌ಮ್ಯಾನ್."

"ಆ ವಯಲಾರ್ ರವಿ ಜೊತೆ ತುಂಬಾ ಮಾತಾಡ್ತಿದ್ರಿ. ಅವ್ರುರೇನಾರ ಅಂಗೆ ಮಾಡಿದ್ರ?"

"ಆತ ಮುದುಕ ಪಾಪ."

"ಇಲ್ಲ ನಮ್ಮ ಕನಕಪುರದ ಹೋರಿ ಕೆಲಸನೆ ಇರಬೇಕು ಬಿಡಿ ಮೇಡಂ."

"ಆತನೂ ಅಲ್ಲ."

"ಚನ್ನಪಟ್ಟಣದ ಎಮ್ಮೆಲ್ಗೆ ಅಂತದ್ದೊಂದು ಚಟ ಇದೆ ಅಂತ ಕೇಳಿದ್ದೆ. ಯಾಕಂದ್ರೆ ಚಿನ್ನದಂತ ಹೆಂಡತಿ ಬಿಟ್ಟು ಆಫೀಸಿನ ಟೈಪಿಸ್ಟ್‌ನ ಸೆರಗು ಹಿಡಕೊಂಡು ಸೀರೆನೆ ಕಳಚಿದ್ದನಂತೆ."

"ಆತನೂ ಅಲ್ಲ."

"ಸಿಎಂ ಲಿಂಗಪ್ಪ?"

"ಅವನ ಹೆಸರು ಕೇಳಕ್ಕೂ ಅಸಹ್ಯ."

"ಜೇಡರಳ್ಳಿ?"

"ಅವ್ರುರೆಲ್ಲಾ ಒಳ್ಳೆ ಜನ."

"ಸಿದ್ದರಾಮಯ್ಯ?"

"ಅವ್ರುರಂತವ್ರುರಲ್ಲ."

"ಇನ್ಯಾರು ಹೇಳಿ ಮೇಡಂ"

"ಈಗೇಳಲ್ಲ ನಾನು. ಮುಂದೆ ಅಂತಹ ಸಮಯ ಬಂದೇ ಬರುತ್ತೆ."

"ಪುರುಷ ರಾಜಕಾರಣಿಗಳನ್ನ ಸಂತೋಷಪಡಿಸಿದ್ರೆ ಸ್ಥಾನಮಾನ ಸಿಗುತ್ತೆ ಅಂದಿದ್ದಿರಿ. ತಾವು ಎಂ.ಪಿ.ಯಾದಾಗ ಯಾರ ಮನಸ್ಸನ್ನ ಸಂತೋಷಪಡಿಸಿದ್ರಿ?"

"ಆಗ ಅಂತ ಸ್ಥಿತಿ ಇರಲಿಲ್ಲ."

"ಈಗಿದೆ ಅಂತೀರಾ?"

"ಹೌದು."

"ಹಾಗಿದ್ರೆ ಯಾಕೆ ಮೇಡಂ ಸುಮ್ಮನಾದ್ರಿ? ಏನಾರ ಮಾಡಿ ಎಮ್ಮೆಲ್ಸಿ, ಮಂತ್ರಿ, ಹೋಗ್ಲಿ ನಿಗಮ ಮಂಡಳಿಗಾರ ಟ್ರೈ ಮಾಡಬಹುದಿತ್ತು?"

"ನನಿಗೆ ಅಂತ ಚಿಲ್ಲರೆ ಅಪೇಕ್ಷೆಗಳಿಲ್ಲ."

"ಒಂದು ಪಾರ್ಟಿ ವಕ್ತಾರೆ ಅನ್ನದು ಚಿಲ್ಲರೆ ಕೆಲಸ ಅಲ್ಲವೆ?"

"ಮುಂದೆ ಒಳ್ಳೆ ಸ್ಥಾನ ಸಿಗತ್ತೆ."

"ಅಂದ್ರೆ ಪುರುಷ ರಾಜಕಾರಣಿಗಳ ತೃಪ್ತಿಪಡಿಸಬೇಕು?"

"ಬಿಜೆಪಿಲಿ ಅಂತ ಸ್ಥಿತಿಯಿಲ್ಲ."

"ಶೋಭಾ ಕರಂದ್ಲಾಜೆ ಜೊತೆ ಮಾತಾಡ್ತಿರಾ?"

"ಬೇಕಾಗಿಲ್ಲ?"

"ಬಿಜೆಪಿ ಪುರುಷ ರಾಜಕಾರಣಿಗಳಾದ ರೇಣುಕಾಚಾರಿ, ಹರತಾಳು ಹಾಲಪ್ಪ ಉಡುಪಿ ಭಟ್ಟ, ನಿಮ್ಮ ಅಣ್ಣನಂಗಿರೊ ಈಶ್ವರಪ್ಪನ ಅತ್ಯಕೋಗಿ ಮಾತಾಡಿದ್ದೀರಾ?"

"ಇನ್ನೂ ಮಾತಾಡಿಲ್ಲ."

"ನೀವಿನ್ನು ಉತ್ತರ ಕರ್ನಾಟಕದ ಕಡೆ ಬಿಜೆಪಿಗಳ ಜೊತೆ ಮಾತಾಡಿಲ್ಲ ಮೇಡಂ. ಅವರ ಜೊತೆ ನೀವು ಮಾತಾಡಿದ್ರೆ ಕಾಮಾಟಿಪುರದಲ್ಲಿದ್ದೀನೇನೂ ಅನ್ಸುತ್ತೆ."

"ಹೌದಾ?"

"ಅಯ್ಯೋ, ಆ ಹಲ್ಕ ಮಾತು, ಪಾನ್ ಪರಾಗ್, ಗುಟ್ಕಾ, ಆ ನಗು ಕೇಳಿದ್ರೆ ನಿಮಗೆ ಕಾಂಗ್ರೆಸ್ ತವರುಮನೆ ತರ ಕಾಣುತ್ತೆ."


"ಕಾಂಗ್ರೆಸ್ ಹಾಳುಬಿದ್ದ ಮನೆ."

"ಅಂಗನ್ನ ಬ್ಯಾಡಿ ಮೇಡಂ. ನಿಮ್ಮ ಬಾಯಿಂದ್ಲೆ ಹಾಳಾಗ್ತ ಎಲ್ಲಾ ಸಲ್ಲದ ಹೆಂಗಸಾಗ್ತಾಯಿದ್ದಿರಿ. ಒಂದಲ್ಲ ಒಂದಿನ ಕಾಂಗ್ರೆಸ್ನೇ ನಿಮ್ಮ ಓಲ್ಡೇಜ್ ಪಿಂಚಣಿ ತಾಣ ಆಗಬಹುದು. ಯಾಕೆಂದ್ರೆ ನೀವು ಇವತ್ತು ಬದುಕ್ತಾ ಇರದು, ಹೊಟ್ಟೆ ತುಂಬಾ ಉಣ್ತಾಇರದು ಕಾಂಗ್ರೆಸ್ ಅನ್ನ. ಅದನ್ನ ನೆನೆಸಿಕೊಂಡು ನಿಮ್ಮಂಗೆ ಕಷ್ಟದಿಂದ ಮೇಲೆ ಬಂದ ಉಮಾಶ್ರೀ ಬಗ್ಗೆ ಹಗುರವಾಗಿ ಮಾತಾಡಿದ್ರೆ ನಿಮ್ಮ ಸೆರಗೆಳೆದು ಹಾಳಾದ ಗಂಡಸರು ಬಾಯಿ ಬಿಟ್ಟು ಮಾತಾಡಬೇಕಾಗುತ್ತೆ."

"ಮಾತಾಡ್ಲಿ, ಐ ಡೋಂಟ್ ಕೇರ್."

"ಥೂತ್ತೇರಿ!!!"

ಪೋಲಿಯೋ ನಿಯಂತ್ರಿಸಿದ ಮಾನವತಾವಾದಿ ವೈದ್ಯ ಜೊನಸ್ ಸಾಕ್



ಡಾ. ಟಿ.ಎಸ್. ಚನ್ನೇಶ್
channeshts@gmail.com

ಕಳೆದ ಅಕ್ಟೋಬರ್ 28ರಂದು ಪೋಲಿಯೋ ವ್ಯಾಕ್ಸೀನ್ ಕಂಡುಹಿಡಿದ ವೈದ್ಯ ವಿಜ್ಞಾನಿ ಜೊನಸ್ ಸಾಕ್‌ರ ನೂರನೇ ಹುಟ್ಟುಹಬ್ಬದ ದಿನ. ಅಂದು ಅವರ ನೆನಪಿಗಾಗಿ ಇಂಟರ್‌ನೆಟ್‌ನಲ್ಲಿ ಗೂಗಲ್ ಹುಡುಕು ತಾಣ ತನ್ನ ಮೇಲುತುದಿಯಲ್ಲಿ ಒಂದು ಡೂಡಲ್ ಪ್ರದರ್ಶಿಸಿತ್ತು. ಮಹಾನ್ ಮಾನವತಾವಾದಿಯೆಂದೇ ಪರಿಚಿತರಾದ ಸಾಕ್, ಒಬ್ಬ ಅಪರೂಪದ ವೈದ್ಯ. ಕಳೆದ ಶತಮಾನದ ಅತ್ಯಂತ ಭೀಕರ ರೋಗವೆಂದು ಹೆಸರಾಗಿದ್ದು, ಮಕ್ಕಳನ್ನು ಬಲಿತೆಗೆದುಕೊಂಡು, ಅನೇಕರನ್ನು ಜೀವನಪರ್ಯಂತ ಅಂಗವಿಕಲರನ್ನಾಗಿಸುತ್ತಿದ್ದ ಪೋಲಿಯೋಗೆ ಒಂದು ಶಾಶ್ವತ ಕೊನೆ ಮುಟ್ಟಿಸಿದ್ದ ವಿಜ್ಞಾನಿ ಅವರು. ಮಾತ್ರವಲ್ಲ, ಆ ಕಾಲಕ್ಕೆ ಕನಿಷ್ಠ 7000 ದಶಲಕ್ಷ ಡಾಲರ್ ಗಳಿಸಬಹುದಾಗಿದ್ದ ಅನ್ವೇಷಣೆಗೆ ಪೇಟೆಂಟ್ ಮಾಡಿಸದೆ ಉಚಿತವಾಗಿ ಮಾನವತೆಗಾಗಿ ದೇಣಿಗೆ ನೀಡಿದ ವೈದ್ಯ. ಇವತ್ತಿನ ದಿನಗಳಲ್ಲಿ ತುಂಬಾ ಅಪರೂಪದ ವೈದ್ಯನೇ ಸರಿ. ಇಂದಿನ ವೈದ್ಯಕೀಯ ವ್ಯವಸ್ಥೆಯಲ್ಲಿ ಕಾಣದ ಇಂತಹ ವಿಶೇಷ ಗುಣದಿಂದಲೇ ಆತನನ್ನು "ಜೈವಿಕ-ತತ್ವಶಾಸ್ತ್ರದ ಪಿತಾಮಹ"ನೆಂದು ಕರೆಯಲು ಸಾಧ್ಯವಾಯಿತು. ಅಷ್ಟಕ್ಕೂ ಏಕೆ ಪೇಟೆಂಟ್ ಮಾಡಿಸಲಿಲ್ಲ? ಎಂಬ ಪ್ರಶ್ನೆಗೆ ಅವರ ಉತ್ತರ ತೀರಾ ಭಿನ್ನವಾಗಿದೆ. ಅವರು ಹೇಳಿದ್ದು ಹೀಗೆ, "ಏಕೆ ಪೇಟೆಂಟ್? ಇಲ್ಲ! ಯಾರಾದರೂ ಸೂರ್ಯನಿಗೆ ಪೇಟೆಂಟ್ ಮಾಡಿಸುವರೇ?"

ಹೆಚ್ಚೂಕಡಿಮೆ ಪೋಲಿಯೋ ನಿರ್ಮೂಲನೆಯಾದ ಈ ಸಂದರ್ಭದಲ್ಲಿ ಅದರ ಭೀಕರತೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇ. ಅದರಲ್ಲೂ 1930 ರಿಂದ 1950ರ ನಡುವೆ ಪೋಲಿಯೋ ವೈರಸ್ ತುಂಬಾನೇ ಕಾಡಿತ್ತು. ಅಮೆರಿಕವಂತೂ ಅದರ ಭಯಾನಕತೆಗೆ ನಲುಗಿಹೋಗಿತ್ತು. ಇಡೀ ಪಾಶ್ಚಾತ್ಯ ರಾಷ್ಟ್ರಗಳು ಪೋಲಿಯೋಗೆ ಹೆದರಿ ಕಂಗಾಲಾಗಿದ್ದವು. ಪೋಲಿಯೋ ಪೀಡಿತರ ಮಲದಿಂದ ಸೋಂಕು ಹರಡುತ್ತಿದ್ದು, ಮಲಮೂತ್ರಗಳ ತಾಣಗಳೇ ಇರುವಂತಹ ಭಾರತೀಯ ಸಂದರ್ಭದಲ್ಲಿ ಅದನ್ನು ಊಹಿಸಿಕೊಳ್ಳುವುದೇ ಕಷ್ಟ.

ಪೋಲಿಯೋ ಹಿಂದಿನ ಸಂಕಟಗಳು

ಹಿಂದೆಲ್ಲಾ ಪೋಲಿಯೋ ಸೋಂಕು ತಗುಲಿತೆಂದರೆ ಲಕ್ಷಾಂತರ ಮಕ್ಕಳು ಅಂಗವಿಕಲತೆಗೆ ಒಳಗಾಗುತ್ತಿದ್ದರು. ಕೆಲವರು ಸೋಂಕು ತಗುಲಿದರೂ ಅದರ ಯಾವುದೇ ಚಿಹ್ನೆಗಳನ್ನೂ ತೋರಿಸದೆ ಕೇವಲ ಸಾಮಾನ್ಯ ಶೀತ ಬಂದವರಂತೆ ನರಳುತ್ತಿದ್ದರು. ಕೆಲವೊಮ್ಮೆ ಕುತ್ತಿಗೆ ಬಿಗಿತದ ಜತೆಗೆ ಒಂದಷ್ಟು ನೋವು ಇರುತ್ತಿತ್ತು. ಕೆಲವು ಮಕ್ಕಳಿಗೆ ವಿಪರೀತವಾದ ನೋವಿನಿಂದ ನರಳಾಟದ ಪರಿಸ್ಥಿತಿ. ಅನೇಕರು ಕಾಲುಗಳ ಸ್ವಾಧೀನ ಕಳೆದುಕೊಂಡು ಶಾಶ್ವತವಾಗಿ ಕುಂಟರಾಗುವ ಸಂಭವವೇ ಹೆಚ್ಚಾಗಿರುತ್ತಿತ್ತು. ಕೆಲವೊಮ್ಮೆ ಉಸಿರಾಟದ ತೊಂದರೆಯೂ ಸೇರಿಕೊಂಡು ಸೋಂಕು ಉಂಟಾದ ದೇಹದ ಭಾಗ ಲಕ್ವ ಹೊಡೆದಂತೆ ಆಗುತ್ತಿತ್ತು. ಯಾವುದೇ ಭಾಗವು ಸೋಂಕು ತಗುಲಿದ್ದರೆ ಆ ಭಾಗವು ಹೆಚ್ಚು ತೊಂದರೆಗಳನ್ನು ಅನುಭವಿಸಬೇಕಾಗುತ್ತಿತ್ತು. ಆಯಾ ಭಾಗದ ನರಗಳು ಸ್ವಾಧೀನ ಕಳೆದುಕೊಂಡು ಶಕ್ತಿಹೀನವಾಗಿ ನಿಷ್ಕ್ರಿಯವಾಗಿ ಬಿಡುತ್ತಿದ್ದವು. ಕೆಲವೊಮ್ಮೆ ಲಕ್ವದ ತೀವ್ರತೆಯು ಹೆಚ್ಚಾಗಿ 2ರಿಂದ 4 ದಿನಗಳೊಳಗೆ ವಿಪರೀತ ಜ್ವರಕ್ಕೆ ನರಳುವಂತಾಗಿ ಜ್ವರ ಇಳಿದನಂತರ ಮಾಮೂಲಿನಂತೆ ಕಾಣುತ್ತಿದ್ದರು. ಆದರೂ ಸಾಮಾನ್ಯವಾಗಿ 2ರಿಂದ 10 ಪ್ರತಿಶತ ಮಂದಿ ಮಾತ್ರವೇ ಸಾವಿಗೆ ಒಳಗಾಗುತ್ತಿದ್ದರು. ಇತರೇ ಅನೇಕರು ಶಾಶ್ವತ ಅಂಗವಿಕಲತೆಯನ್ನು ಅನುಭವಿಸಬೇಕಾಗುತ್ತಿತ್ತು. ಸಾಮಾನ್ಯವಾಗಿ ಸೋಂಕು ತಗುಲಿದ 6ರಿಂದ 20 ದಿನಗಳೊಳಗೆ ತೊಂದರೆಗಳು ಆರಂಭವಾಗುತ್ತಿದ್ದವು.


ಭಾರತವು ಇಂದು ಪೋಲಿಯೋ ಮುಕ್ತವೆಂದು ಘೋಷಿಸಲಾಗಿದೆ. ಭಾರತದಲ್ಲಿ 1985ರಲ್ಲಿ ಬಾಯಿಯ ಮೂಲಕ (ಓರಲ್) ವ್ಯಾಕ್ಸೀನಿನ ಹನಿಯನ್ನು ಹಾಕಲು ಆರಂಭಿಸಲಾಯಿತು. 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಬಾಯಲ್ಲಿ ಹನಿಗಳನ್ನು ಹಾಕುವ ಮೂಲಕ ಪೋಲಿಯೋ ಹೋರಾಟವನ್ನು ನಡೆಸಲಾಗುತ್ತಿದೆ. ಸಾಮಾನ್ಯವಾಗಿ ಪ್ರತೀ ವರ್ಷವೂ ಡಿಸೆಂಬರ್‌ನಲ್ಲಿ ಇದರ ಕ್ಯಾಂಪೇನ್ ನಡೆಸಲಾಗುತ್ತದೆ. ಪ್ರತೀ ಸಂದರ್ಭದಲ್ಲಿಯೂ ಲಕ್ಷಾಂತರ ಮಂದಿಯ ಸಹಕಾರದಿಂದ ಪೋಲಿಯೋ ಕ್ಯಾಂಪೇನ್ ನಡೆಸಲಾಗುತ್ತದೆ.

ವ್ಯಾಕ್ಸೀನ್ ಎಂದರೆ ರೋಗಕಾರಕಗಳಿಂದಲೇ ದೇಹಕ್ಕೆ ಪ್ರತಿರೋಧವನ್ನು ರೋಗ ತರಿಸುವುದಕ್ಕೇ ಮೊದಲೇ ಒದ್ದುವುದಾಗಿದೆ. ಅಂದರೆ ರೋಗದ ಜೀವಿಗಳಿಂದಲೇ ಸಿದ್ಧಪಡಿಸಿದ ಒಂದಷ್ಟು ವಸ್ತುವನ್ನು ರೋಗ ಬರುವುದಕ್ಕೂ ಮೊದಲೇ ದೇಹಕ್ಕೆ ಸೋಂಕು ತಗುಲಿಸಿದರೆ, ಮುಂದೊಮ್ಮೆ ರೋಗ ತರುವ ರೋಗಾಣು ತಗುಲಿದರೂ ದೇಹ ಅಂತಹ ಪರಿಸ್ಥಿತಿಯನ್ನು ಎದುರಿಸಲು ಮೊದಲೇ ಅಣಿಯಾಗಿರುತ್ತದೆ. ಆದರೆ ಇದೆಲ್ಲಾ ಹೀಗೆ ಹೇಳಿದಷ್ಟು ಸುಲಭದ ಕೆಲಸವಲ್ಲ. ಬಳಸುವ ರೋಗಕಾರಕ ಜೀವಿಗಳ ಪ್ರಮಾಣ ಅದರ ರೀತಿ ರಿವಾಜುಗಳೆಲ್ಲಾ ಬಹಳ ನಿಖರವಾಗಿ, ಕರಾರುವಾಕ್ಕಾಗಿ ಮಾಡಬೇಕಿರುತ್ತದೆ. ಇವನ್ನೆಲ್ಲಾ ಅರ್ಥಪೂರ್ಣವಾಗಿ ಅಳೆದು, ಅಧ್ಯಯನ ಮಾಡಿ, ಸಂಶೋಧಿಸಿ ಒಂದು ಗೊತ್ತಾದ ಪ್ರಮಾಣಕ್ಕೆ ನಿರ್ಧರಿಸಿರುತ್ತಾರೆ. ಇವೆಲ್ಲಾ ಅತ್ಯಂತ ನಿರ್ಜೀವಿ ವಾತಾವರಣದಲ್ಲಿ ಅನುಶೋಧನೆಗೊಂಡಿರುತ್ತವೆ. ಇಂದು ನಮ್ಮ ದೇಶದಲ್ಲಿ ಬಳಸುತ್ತಿರುವ ಹನಿ ಪೋಲಿಯೋ ವ್ಯಾಕ್ಸೀನ್ ಜೊನಸ್ ಸಾಕ್ ಅವರದ್ದಲ್ಲ. ಅದೊಂದು ಭಿನ್ನ ಕಥೆ. ಜೊನಸ್ ಸಾಕ್ ಅವರು ಕಂಡುಹಿಡಿದ ಜಾಡಿನಲ್ಲೇ ಮತ್ತಷ್ಟು ಸಂಶೋಧಿಸಿ ಆಲ್ಬರ್ಟ್ ಸಾಬಿನ್ ಎಂಬ ಮತ್ತೋರ್ವರು ಇನ್ನೊಂದು ಬಗೆಯ ವ್ಯಾಕ್ಸೀನನ್ನು ಕಂಡುಹಿಡಿದಿದ್ದರು. ಅದೇನು ಮತ್ತೊಂದು ಬಗೆಯೆಂದರೆ? ಏನು ವ್ಯತ್ಯಾಸ?

ಜೊನಸ್ ಸಾಕ್ ಶೋಧಿತ ವ್ಯಾಕ್ಸೀನ್ ಸಂಪೂರ್ಣ ನಿರ್ಜೀವಿ ವ್ಯಾಕ್ಸೀನು. ಆದರೆ ಸಾಬಿನ್ ಶೋಧಿಸಿದ್ದು ಅಟೆನ್ಯುಯೇಟೆಡ್ ಅಂದರೆ ಸ್ವಲ್ಪವೇ ಪ್ರಮಾಣದ ಜೀವಿಗಳೂ ಇರುವಂತಹ ವ್ಯಾಕ್ಸೀನು. ವ್ಯತ್ಯಾಸವೆಂದರೆ ಸಾಕ್ ಅವರ ವ್ಯಾಕ್ಸೀನ್ ಅನ್ನು ಇಂಜಕ್ಷನ್ ಮುಖಾಂತರವೇ ರಕ್ತನಾಳಗಳಿಗೆ ಚುಚ್ಚಬೇಕಿತ್ತು. ಜತೆಗೆ ಇದು ಸ್ವಲ್ಪ ದುಬಾರಿ ಕೂಡ. ಅಲ್ಲದೆ ಚುಚ್ಚುವ ಸೂಜಿ ಮುಂತಾದ ಸಲಕರಣೆಗಳ ಆರೋಗ್ಯಕರ ನಿರ್ವಹಣೆಯೂ ಸೇರಿತ್ತು. ಇಂತಹ ಸಂದರ್ಭದಲ್ಲಿ ಕೇವಲ ಬಾಯಲ್ಲಿ ಎರಡು ಹನಿ ಹಾಕುವ ಮೂಲಕ ಪ್ರತಿರೋಧವನ್ನು ತರಬಲ್ಲ ಸೋವಿಯಾದ ವ್ಯಾಕ್ಸೀನ್‌ಗೆ ಬಡ ರಾಷ್ಟ್ರಗಳು ಮುಂದೆ ಬಿದ್ದವು. ಆದರೆ ಇದರಲ್ಲೊಂದು ಸಣ್ಣ ತೊಂದರೆಯಿತ್ತು. ಸಾಬಿನ್ ವ್ಯಾಕ್ಸೀನ್‌ನಲ್ಲಿ ಜೀವಿಗಳಿನ್ನೂ ಕ್ರಿಯಾಶೀಲವಾಗಿದ್ದರಿಂದ ಅವು ರೋಗವನ್ನೂ ತರಬಹುದಿತ್ತು. ಆದರೆ ಅದರ ಸಾಧ್ಯತೆಗಳು ಕಡಿಮೆಯಾಗಿದ್ದು, ಸುಲಭವಾಗಿ ಹನಿಗಳಲ್ಲಿ ಬಾಯಲ್ಲಿ ಹಾಕಬಹುದಾದ, ಹೆಚ್ಚು ಶ್ರಮವಿಲ್ಲದ ಸಾಬಿನ್‌ರ ವ್ಯಾಕ್ಸೀನ್ ಪ್ರಚಲಿತಕ್ಕೆ ಬಂತು. ಅದರಲ್ಲೂ ಜೊನಸ್ ಸಾಕ್ ಅವರ ರಕ್ತನಾಳಗಳ ಮೂಲಕ ಕೊಡುವ ವ್ಯಾಕ್ಸೀನ್ 1955ರಿಂದ 1964ರವರೆಗೂ ಜಗತ್ತಿನಾದ್ಯಂತ ಚಾಲ್ತಿಯಲ್ಲಿದ್ದುದಲ್ಲದೆ ಇಂದಿಗೂ ಅಮೆರಿಕೆಯಲ್ಲಿ ಚಾಲ್ತಿಯಲ್ಲಿದೆ. ಇತರೆ ದೇಶಗಳಲ್ಲಿ ಅದರಲ್ಲೂ ಭಾರತದಂತಹ ದೇಶಗಳಲ್ಲಿ 1956ರಿಂದ ಇಂದಿನವರೆಗೂ ಸಾಬಿನ್‌ರ ಬಾಯಿಯ ಮೂಲಕ ಹನಿಗಳಾಗಿ ಹಾಕುವ ವ್ಯಾಕ್ಸೀನ್ ರೂಢಿಯಲ್ಲಿದೆ. ಅಮೆರಿಕೆಯಲ್ಲಿ 1990ರಿಂದಲೇ ಕಡ್ಡಾಯವಾಗಿ ಬಾಯಿಯ ಮೂಲಕ ಹಾಕುವ ವ್ಯಾಕ್ಸೀನ್ ನಿಷೇಧಿಸಲಾಗಿದೆ. ಬಹುಪಾಲು ಯೂರೋಪ್ ರಾಷ್ಟ್ರಗಳೂ ಸಹ ಸಾಕ್ ಅವರ ಚುಚ್ಚುಮದ್ದಿನ ಮೂಲಕ ಕೊಡುವ ವ್ಯಾಕ್ಸೀನ್ ಅನ್ನೇ ಬಳಸುತ್ತವೆ. ಆದರೆ ಸಾಬಿನ್ ಕೂಡ ತಮ್ಮ ಶೋಧನೆಗೆ ಪೇಟೆಂಟ್ ಮಾಡಿಸದೆ ಜೊನಸ್ ಸಾಕ್ ಹಾದಿಯಲ್ಲೇ ನಡೆದಿದ್ದರೆಂಬುದು ಸಂತಸದ ಸಂಗತಿ.


ಮನುಕುಲದ ಒಳಿತಿಗೆ ಬೆನ್ನು ಹತ್ತಿದ್ದ ಜೊನಸ್ ಸಾಕ್

"ಎಲ್ಲಾದರೂ ಸೂರ್ಯನಿಗೆ ಪೇಟೆಂಟ್ ಮಾಡಲಾದೀತೇ?" ಎಂಬ ಜೊನಸ್ ಸಾಕ್ ಅವರ ಮಾತನ್ನು ನೆನೆಸಿಕೊಂಡರೇನೇ ಒಂದುಕ್ಷಣ ಹೀಗೂ ಉಂಟಾ ಎನ್ನಿಸದಿರದು. ವೈದ್ಯರಲ್ಲಿ ಹೋಗಿ ಒಂದು ಪುಟ್ಟ ಇಂಜಕ್ಷನ್‌ಗೆ ನೂರಾರು ತೆತ್ತು ಬರುವಾಗ ಕೋಟ್ಯಾಂತರ ಇಂಜಕ್ಷನ್‌ಗಳ ಹಿಂದಿನ ಮಿಲಿಯನ್‌ಗಟ್ಟಳೆ ಹಣದ ವ್ಯಾಮೋಹ ಸ್ವಲ್ಪವೂ ಕಾಡದ ಆತನ ಬಗೆಗೆ ಯಾರಿಗೂ ಗೌರವ ಮೂಡದೆ ಇರದು. ಮಾತ್ರವಲ್ಲ, ಕೋಟ್ಯಾಂತರ ಜನರು ಇಂದು ಸುಖವಾಗಿ ಜೀವನ ನಡೆಸಲು ಸಾಧ್ಯವಾಗಿರುವುದೂ ಅಂತಹ ಮನಸ್ಸಿನಿಂದಲೇ. ಜೊನಸ್



ಸಾಕ್ ಅವರು 1954ರಲ್ಲಿ ಮೊಟ್ಟ ಮೊದಲು ವ್ಯಾಕ್ಸೀನು ಕಂಡುಹಿಡಿದಾಗ ಇಡೀ ಯೂರೋಪಿನ ದೇಶಗಳೆಲ್ಲಾ ನಾಮುಂದು, ತಾಮುಂದು ಎಂದು ವ್ಯಾಕ್ಸೀನಿನ ಹಿಂದೆ ಬಿದ್ದಿದ್ದವು. ಮನುಕುಲವನ್ನು ಅಪಾರವಾಗಿ ಕಾಡಿದ್ದ ಭಯಾನಕ ರೋಗವೊಂದಕ್ಕೆ ಮುಕ್ತಿ ಕೊಡುವುದೆಂಬ ಬಲುಮುಖ್ಯ ಕಾರಣಕ್ಕೆ ದೇಶಗಳೆಲ್ಲಾ ಕೊಂಡಾಡಿದ್ದವು. ಬೆಳಗಾಗುವುದರಲ್ಲಿ 'ಸಾಕ್ ಸ್ಟಾರ್' ಆಗಿ ಹೊರಹೊಮ್ಮಿದ್ದರು.

ಜೊನಸ್ ಸಾಕ್ ಅವರಿಗೆ ವಿಜ್ಞಾನಕ್ಕಿಂತಲೂ ಮಾನವತೆಯ ಒಂದು ಕೈ ಮಿಗಿಲು ಎಂಬ ಭಾವನೆ. ಇದು ಅವರು ಮಗುವಾಗಿದ್ದಾಗಿನಿಂದಲೂ ಅವರನ್ನು ಕಾಡಿದ್ದು. ಮನುಕುಲದ ಒಳಿತನ್ನು ಬೆನ್ನು ಹತ್ತುವಂತಹ ಆಸಕ್ತಿಯ ಆಯಾಮವು ಸದಾ ಅವರನ್ನು ಕ್ರಿಯಾಶೀಲರನ್ನಾಗಿಟ್ಟಿತ್ತು. ಸದಾ ಕುತೂಹಲಿಯಾಗಿದ್ದು ಕಾರಣರಹಿತವೆಂದರೂ ಪ್ರಶ್ನೆಗಳ ಕೇಳುವ ಮನಸ್ಸು ಅವರಲ್ಲಿ ವಿಕಾಸಗೊಂಡಿತ್ತು. ಮಗುವಾಗಿದ್ದಾಗಿನ ಇಂತಹ ಕುತೂಹಲಕರವಾದ ಮನಸ್ಸನ್ನು ಬೆಳೆದ ಮೇಲೂ ಕಾಪಾಡಿಕೊಂಡಿರುವುದೆ ವಿಜ್ಞಾನಿಯ ಲಕ್ಷಣ ಎಂಬುದು ಅವರ ಖಚಿತ ಅಭಿಪ್ರಾಯವಾಗಿತ್ತು. ಜತೆಗೆ ಮಾನವತೆಯ ಒತ್ತಾಸೆಯಿಂದ ವಿಜ್ಞಾನವು ಸಮಾಜೀಕರಣಗೊಳ್ಳಬೇಕಾದ ಹಂಬಲ ಅವರಲ್ಲಿತ್ತು.


ಚುಚ್ಚುಮದ್ದು ಕೊಡುತ್ತಿರುವ ಸಾಕ್

ಇಂತಹ ಜೊನಸ್ ಸಾಕ್ ಅಚಾನಕ್ ಆಗಿ ವೈದ್ಯಕೀಯ ಅಧ್ಯಯನಕ್ಕೆ ಬಂದವರು. ಅವರಿಗೆ ಕಾನೂನನ್ನು ಓದುವ ಹಂಬಲವಿತ್ತಂತೆ. ಆದರೆ ಅವರ ತಾಯಿ 'ಇಲ್ಲ, ನೀನು ವಾದ ಮಾಡಿ ಗೆಲ್ಲಲಾರೆ. ಅದು ನಿನಗಾಗದು' ಎನ್ನುತ್ತಿದ್ದರಂತೆ. ನಿಜಕ್ಕೂ ಕಾನೂನು ಓದಬೇಕೆಂಬ ಹಂಬಲವನ್ನು ಅವರ ತಾಯಿಯ ಜತೆಗೇ ವಾದ ಮಾಡಲಾಗದ ಅವರು ಅದರ ಆಸೆಯನ್ನೇ ತೊರೆದರಂತೆ. ಮುಂದೇ ಅದೇ ವೈದ್ಯಕೀಯಕ್ಕೆ ಕರೆದೊಯ್ಯುತ್ತದೆ. ಸಾಕ್ ಅವರ ತಾಯಿ ಅನಕ್ಷರಸ್ಥೆ, ರಷಿಯಾದಿಂದ 1901ರಲ್ಲಿ ವಲಸೆ ಬಂದ ಕುಟುಂಬಕ್ಕೆ ಸೇರಿದ ಹೆಣ್ಣು ಮಗಳು. ಅಮೆರಿಕಗೆ ವಲಸೆ ಬಂದಗಿನಿಂದಲೂ ಓದುವುದಿರಲಿ, ಏನಾದರೂ ಕೆಲಸ ಮಾಡಿಯೇ ಉಣ್ಣಬೇಕಿತ್ತು. ಅಂತಹ ಅನುಭವದ ಹಿನ್ನೆಲೆಯಿಂದ ಬಂದು ಮಗನನ್ನು ವಿದ್ಯಾಭ್ಯಾಸದ ಆಸಕ್ತಿಗೆ ಒಗ್ಗಿಸಿದ್ದು ಅಮ್ಮನ ಹೆಚ್ಚುಗಾರಿಕೆಯೇ! ಅಪ್ಪನೂ ಅಷ್ಟೇ, ಹೆಚ್ಚೇನೂ ಓದಿದವರಲ್ಲ, ಹೆಣ್ಣುಮಕ್ಕಳ ಕುತ್ತಿಗೆ ಪಟ್ಟಿಗಳ ವಿನ್ಯಾಸಕ. ಇಂದು ಬಗೆಯ ದರ್ಜಿ ಕೆಲಸ. ಒಂದು ಗಾರ್ಮೆಂಟ್ ಕಂಪನಿಯಲ್ಲಿ ವಿನ್ಯಾಸಕರಾಗಿ ದುಡಿಯುತ್ತಿದ್ದರು. ಪ್ರಾಥಮಿಕ ಶಿಕ್ಷಣವನ್ನಷ್ಟೇ ಮುಗಿಸಿದ್ದರು. ಅಮ್ಮನ ಮನೆಯಲ್ಲಾಗಲಿ, ಅಪ್ಪನ ಮನೆಯಲ್ಲಾಗಲಿ ಯಾರೂ ಕಾಲೇಜು ಮೆಟ್ಟಿಲನ್ನು ಹತ್ತಿದವರೇ ಅಲ್ಲ. ಅಂತಹ ವಿಶೇಷ ಸಂಸ್ಕೃತಿಯನ್ನೂ ಹೊಂದದ ಮನೆಗಳಿಗೆ ಸೇರಿದ ಅಪ್ಪ ಅಮ್ಮ ಮಾತ್ರ ಶಿಕ್ಷಣಕ್ಕೆ ಆದ್ಯತೆಯನ್ನು ಕೊಡುವ ಮನಸ್ಸುಳ್ಳವರಾಗಿದ್ದರು.


ಜೊನಸ್ ಸಾಕ್ ವೈದ್ಯಕೀಯ ಅಧ್ಯಯನದಲ್ಲೂ ವಿಜ್ಞಾನದ ವಿಶೇಷ ಆಸಕ್ತಿಯನ್ನು ಹೊಂದಿದ್ದರು. ಅದಕ್ಕೆ ವೈದ್ಯಕೀಯವನ್ನು ವಿಜ್ಞಾನದ ಹಿನ್ನೆಲೆಯಲ್ಲಿಯೇ ಅಧ್ಯಯನ ಮಾಡಿದರೆ ಹೊರತು ವೈದ್ಯಕೀಯವನ್ನು ಪ್ರಾಕ್ಟೀಸ್ ಮಾಡುವ ಆಸೆಯಿಂದಲ್ಲ. ವೈದ್ಯಕೀಯ ಕಾಲೇಜಿಗೆ ಸೇರಿದಾಗಿನಿಂದಲೂ ರೋಗಲಕ್ಷಣಗಳ ವೈಜ್ಞಾನಿಕ ಸಂಗತಿಗಳೇ ಅವರ ಆಸಕ್ತಿ. ಅದಕ್ಕೆಂದೇ ನ್ಯೂಯಾರ್ಕ್‌ನ ವೈದ್ಯಕೀಯ ಕಾಲೇಜಿನಲ್ಲಿ ಅಭ್ಯಾಸ ಮಾಡಿ ಮುಂದೆ ಪಿಟ್ಸ್‌ಬರ್ಗ್ ವಿಶ್ವವಿದ್ಯಾ... ವೈದ್ಯಕೀಯ ಸಂಸ್ಥೆಗೆ ಸೇರಿದ್ದರು. ಆಗಲೇ ವೈ... ಕುರಿತ ವಿಶೇಷ ಒಲವು ವೈದ್ಯಕೀಯ ವಿಜ್ಞಾ... ದಟ್ಟವಾಗಿತ್ತು. ಹಾಗಾಗಿ ನೆಗಡಿಯ ಕುರಿತ ವೈ... ವಿಶೇಷ ಅಧ್ಯಯನದಲ್ಲಿ ಮೊದಲು ಕಾರ್ಯನಿರತರಾ... ತಮ್ಮ ಈ ವೈರಸ್ಸುಗಳ ಅಧ್ಯಯನದ ಆಸಕ್ತಿಯಿ... ಆಗ ಹೆಚ್ಚೇನು ಸಾವನ್ನು ತರದಂತಹ ಒಂದು ... ಲಕ್ವ ಕಾಡುವ ಕುರಿತು ವಿಶೇಷ ಅಧ್ಯಯನ ಮ... ಒಂದು ರಾಷ್ಟ್ರೀಯ ಸಂಸ್ಥೆಯಿಂದ ನೆರವು ... ಅಧ್ಯಯನವನ್ನು ಆರಂಭಿಸಿದರು. ಈ ಮೊದಲೇ ಹೇ... ಸಾಕ್ ವೈದ್ಯಕೀಯ ಅಧ್ಯಯನಕ್ಕೆ ಬಂದದ್ದೂ ... ಮನುಕುಲವ ಕಾಡುವ ರೋಗಗಳ ಅಧ್ಯಯನಕ್ಕಾಗಿ ... ಆರಿತ ಸಂಶೋಧನೆಗಾಗಿ. ಅವರು ಪಿಟ್ಸ್‌ಬರ್ಗ್‌ನಲ್ಲಿ... ಸುಮಾರು 1952ರ ಸಮಯದಲ್ಲಿ ಅಮೆ... ಇತಿಹಾಸದಲ್ಲೇ ಕಂಡರಿಯದಂತಹ ಪೋಲಿಯೋ... ಅನುಭವಿಸಿ ಆದಕ್ಕೆಂದೇ ವಿಶೇಷ ಅಧ್ಯಯನದ ... ತೋರಿಸುತ್ತದೆ. ಇನ್ನೂ ವಿಶೇಷ ಕಾರಣವೆಂದರೆ ... ರೂಸ್‌ವೆಲ್ಟ್ ಕೂಡ ಪೋಲಿಯೋದಿಂದ ತೊಂದರೆ... ಅನುಭವಿಸಿದ್ದವರು. ಮುಂದೆ ಯುವ ಜೊನಸ್ ... ಅವರ ದಣಿವರಿಯದ ಶ್ರಮದ ಅಧ್ಯಯನ... ಪೋಲಿಯೋಗೆ ವ್ಯಾಕ್ಸೀನ್ ಸಿದ್ಧವಾಗುತ್ತದೆ. ಅದೆ... ವೈದ್ಯಕೀಯ ವಲಯದಲ್ಲಿ ಇತಿಹಾಸ ಸೃಷ್ಟಿಸಿದ ಅಧ... ಏಕೆಂದರೆ ಆ ಕಾಲಕ್ಕೇ ಜಗತ್ತಿನಲ್ಲೇ ಅತ್ಯಂತ ಮುಂದು... ರಾಷ್ಟ್ರವನ್ನೇ ಕಾಡುತ್ತಿದ್ದ ಅಲ್ಲಿಯೇ ಅತೀ ... ಪ್ರಮಾಣದಲ್ಲಿ ಮೊಟ್ಟ ಮೊದಲ ಮಾನವರನ್ನು ಒಳ... ಪ್ರಯೋಗ ಜೊನಸ್ ಸಾಕ್ ಸಂಶೋಧನೆ... ನಡೆಸಲಾಗುತ್ತದೆ. ಮೊದಲ ಪೋಲಿಯೋ ವ್ಯಾ... ಸಾರ್ವಜನಿಕ ಪ್ರಯೋಗ ಸುಮಾರು 20,000 ... ಮತ್ತು ಆರೋಗ್ಯ ಅಧಿಕಾರಿಗಳನ್ನು ಒಳಗೊ... ಪೋಲಿಯೋ ಹೆಚ್ಚಾಗಿ ಮಕ್ಕಳನ್ನೇ ಬಲಿತೆಗೆದು... ತ್ತಿತ್ತಲ್ಲವೇ? ಹಾಗಾಗಿ ಅದರಲ್ಲಿ ಭಾಗವಹಿಸಿದ್ದ ... ಸಂಖ್ಯೆಯೂ ದೊಡ್ಡದೇ! ಸುಮಾರು 18 ಲಕ್ಷ ಶಾಲಾ... ಇದರಲ್ಲಿ ಪಾಲ್ಗೊಂಡಿದ್ದರು. ಅದಕ್ಕೆ 64,000 ... ಸಿಬ್ಬಂದಿ ನೆರವನ್ನು ಕೊಟ್ಟಿದ್ದರು. ಇದಕ್ಕೆಂದು ... ನಿಯಮಿಸಿದ್ದ ಒಟ್ಟು ಸ್ವಯಂಸೇವಕರ ಸಂಖ್ಯೆಯೇ ಸು... 2,20,000 ಜನರು. 1955ರ ಏಪ್ರಿಲ್ 12... ಮೊದಲ ಬಾರಿಗೆ ಸಾರ್ವಜನಿಕವಾಗಿ ಪೋಲಿ... ವ್ಯಾಕ್ಸೀನ್ ಕುರಿತು ಜಗತ್ತಿಗೇ ಸಾರಲಾಯಿತು. ತ... ಜರ್ಮನಿ, ಕೆನಡಾ, ನ್ಯೂಜಿಲೆಂಡ್, ಸ್ವಿಜಲೆ... ನೆದರ್‌ಲ್ಯಾಂಡ್, ಬೆಲ್ಜಿಯಂ ಮುಂತಾದ ದೇಶಗಳು ಜ... ಸಾಕ್ ಪೋಲಿಯೋ ಲಸಿಕೆಯನ್ನು ಬಳಸಿ ಸಮರೋ... ಯಲ್ಲಿ ಪೋಲಿಯೋ ವಿರುದ್ಧ ಹೋರಾಡಲು ಅನುವ... ಜೊನಸ್ ಸಾಕ್ ಅದೆಲ್ಲವನ್ನೂ ಉಚಿತವಾಗಿ ... ಮಾಂತ್ರಿಕ ವೈದ್ಯರೆಂದೇ ಜಗತ್ತು ಭಾವಿಸುತ್ತದೆ. ಮ... ದೆಲ್ಲವೂ ಇತಿಹಾಸ.


ಜೊನಸ್ ಸಾಕ್ ಅವರ ವಿಜ್ಞಾನದ ಸೈದ್ಧಾಂತಿಕ ... ಉಪಶಮನದಿಂದ ಆರಂಭವಾಗುತ್ತಿದ್ದವೆಂದು ಹೇಳಲ... ಪೋಲಿಯೋವನ್ನು ಗೆದ್ದ ಮೇಲಂತೂ ಅವರ ಈ ... ಮತ್ತಷ್ಟು ಗಟ್ಟಿಯಾಯಿತು. ಅದಕ್ಕೆಂದೆ ಅವರ ಈ ... ಸೈದ್ಧಾಂತಿಕ ನಿಲುವು, ಮನುಕುಲದ ... ಅಧ್ಯಯನಕ್ಕೆಂದೇ ಒಂದು ಪೂರ್ಣ ಪ್ರಮಾಣದ ... ವಿಜ್ಞಾನದ ಸಂಸ್ಥೆಯನ್ನು ಆರಂಭಿಸುವ ಯೋಚನೆ ಮಾ... ಅದರ ಫಲವಾಗಿಯೇ ಕ್ಯಾಲಿಫೋರ್ನಿಯಾದ ಲಾ-... ಎಂಬಲ್ಲಿ ಸಾಕ್ ಜೀವ ವಿಜ್ಞಾನದ ಸಂಸ್ಥೆ... ಆರಂಭಿಸುತ್ತಾರೆ. "ಜೀವಕೋಶದಿಂದ ಸಮಾಜದೆಡೆಗೆ"... ಧ್ಯೇಯ-ಘೋಷವು ಇವರ ಅಧ್ಯಯ... ಮಹತ್ವಾಕಾಂಕ್ಷೆಯನ್ನು ಹೊಂದಿದ್ದವು ... ಹೇಳಲಾಗುತ್ತದೆ. ಸಾಕ್ ಸಂಸ್ಥೆಯು ಒಂದು ಸಂ... ಮಾನವ ಒತ್ತಾಸೆಯ ಜೈವಿಕ ಅಧ್ಯಯನ ಸಂಸ್ಥೆ. ಪೋ... ವ್ಯಾಕ್ಸೀನಿನ ಗೆಲುವಿನಿಂದ ಪ್ರೇರಿತರಾಗಿ ಈ ... ಪ್ರತಿರೋಧದಿಂದ ಉಪಶಮನ ಕುರಿತ ಅಧ್ಯಯನಕ್ಕೆ ... ಕಾಳಜಿ ಉಂಟಾಗಿ ಮುಂದೆ 1980ರ ದಶಕದಲ್ಲಿ ... ಕಾಡುತ್ತಿರುವ ಎಚ್‌ಐವಿ-ಏಯ್ಡ್ಸ್ ಕುರಿತ ಪ್ರತಿರೋ... ಅಧ್ಯಯನಗಳನ್ನು ಆರಂಭಿಸುತ್ತಾರೆ. ಇದರ ವಿ... ವ್ಯಾಕ್ಸೀನಿನ ಅಥವಾ ಉಪಶಮನದ ಮಹತ್ವಾಕ... ಉದ್ದೇಶ ಅವರ ಗಮನದಲ್ಲಿತ್ತು. ಆದರೆ 1995ರ... ಅವರನ್ನೇ ಕಳೆದುಕೊಂಡು ಜೀವಜಗತ್ತು ಬಡವಾ... ಆದರೆ 2007ರ ವೇಳೆಗೆ ಎಚ್‌ಐವಿ ವಾ... ಅಧ್ಯಯನವನ್ನೂ ನಿಲ್ಲಿಸಲಾಗುತ್ತದೆ.

ಅವರ ಮೂರು ಜನ ಮಕ್ಕಳೂ ವೈದ್ಯರೇ! ... ಚಿಕಿತ್ಸಾಲಯವಿಟ್ಟು ಪ್ರಾಕ್ಟೀಸು ಮಾಡುತ್ತಿಲ್ಲ. ವೈ... ವಿಜ್ಞಾನದಲ್ಲೇ ಸಂಶೋಧನೆಗೆ ತೊಡಗಿಕೊಂ... ಸಂಶೋಧನೆಯನ್ನು ಮಾತ್ರವಲ್ಲ ತಮ್ಮ ಸಂತತಿ... ಮನುಕುಲದ ವಿಶೇಷ ಸಂಶೋಧನೆಗೆ ಕೊಟ್ಟು ... ಮಹಾನ್ ದಾರ್ಶನಿಕ ಜೊನಸ್ ಸಾಕ್.

ಕುರೋಸಾವ–ಮಾರ್ಕ್ವೆಜ್ ನಡುವೆ ಒಂದು ಚರ್ಚೆ

ನೊಬೆಲ್ ಪುರಸ್ಕಾರ ವಿಜೇತ ಕಾದಂಬರಿಕಾರ ಗೇಬ್ರಿಯಲ್ ಗಾರ್ಸಿಯ ಮಾರ್ಕ್ವೆಜ್ ಹಾಗೂ ಜಪಾನ್ ಮೂಲದ ಖ್ಯಾತ ಚಿತ್ರ ನಿರ್ದೇಶಕ ಅಕಿರಾ ಕುರೋಸಾವ 1990ರ ಅಕ್ಟೋಬರ್ ತಿಂಗಳ ಒಂದು ದಿನ ಜಪಾನಿನ ಟೋಕಿಯೊದಲ್ಲಿ ಪರಸ್ಪರ ಎದುರಾಬದುರಾ ಕೂತು ಸುಮಾರು ಆರು ಗಂಟೆಗಳ ಕಾಲ ಸಿನಿಮಾ ಮತ್ತು ಪರಮಾಣು ಬಾಂಬ್ ಕುರಿತಂತೆ ಒಂದಿಷ್ಟು ಮಾತಾಡಿದ್ದರು. ಕುರೋಸಾವನ ಚಿತ್ರಗಳನ್ನು ಇಷ್ಟ ಪಡುತ್ತಿದ್ದ ಮಾರ್ಕ್ವೆಜ್ ಅಷ್ಟೇ ಪ್ರೀತಿಯಿಂದ ಆತನ ಮಾತುಗಳನ್ನು ಆಲಿಸಿಕೊಳ್ಳುತ್ತಿದ್ದರು. ವಿಶೇಷವಾಗಿ 1965ರಲ್ಲಿ ತೆರೆಕಂಡ ಕುರೋಸಾವಾನ 'ರೆಡ್ ಬಿಯರ್ಡ್' ಚಿತ್ರದ ಬಗ್ಗೆ ತೀವ್ರವಾದ ಗೌರವ, ಅಭಿಮಾನ ಇಟ್ಟುಕೊಂಡಿದ್ದ ಮಾರ್ಕ್ವೆಜ್ "ಕಳೆದ ಇಪ್ಪತ್ತು ವರ್ಷಗಳಲ್ಲಿ ಈ ಚಿತ್ರವನ್ನು ಸುಮಾರು ಆರು ಬಾರಿ ನೋಡಿದ್ದೇನೆ. ಈ ಚಿತ್ರದ ಬಗ್ಗೆ ನನ್ನ ಮಕ್ಕಳೊಂದಿಗೆ ಪ್ರತಿ ದಿನ ಮಾತಾಡಿದ್ದೇನೆ, ಚರ್ಚಿಸಿದ್ದೇನೆ. ಎಲ್ಲಿಯವರೆಗೆ ಅನ್ನುವಿರಾ? ನನ್ನ ಮಕ್ಕಳು ಈ ಚಿತ್ರವನ್ನು ನೋಡುವವರೆಗೆ. ಈ ಚಿತ್ರ ನನ್ನ ಮತ್ತು ನನ್ನ ಕುಟುಂಬದ ಪರಸ್ಪರ ಅಚ್ಚುಮೆಚ್ಚಿನ ಸಿನಿಮಾ ಎಂಬುದಷ್ಟೇ ಅಲ್ಲದೆ ಚಿತ್ರರಂಗದ ಇತಿಹಾಸದಲ್ಲಿಯೇ ಈ ಚಿತ್ರ ನನ್ನ ಪಾಲಿಗೆ ವಿಶೇಷವಾದ ಚಿತ್ರ" ಎಂದು ಹೇಳುವ ಮಟ್ಟಕ್ಕೆ ಕುರೋಸಾವ ಚಿತ್ರಗಳ ಬಗ್ಗೆ ಮಾರ್ಕ್ವೆಜ್ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.


ಗೇಬ್ರಿಯಲ್ ಗಾರ್ಸಿಯ ಮಾರ್ಕ್ವೆಜ್


ಅಕಿರಾ ಕುರೋಸಾವ

ಅಂದು ಇವರಿಬ್ಬರ ನಡುವಿನ ಮಾತುಕತೆ ಮುಖ್ಯವಾಗಿದ್ದು ಸಿನಿಮಾಗಳಿಗೆ ಸಾಹಿತ್ಯವನ್ನು ಬಳಸಿಕೊಳ್ಳುವ ಅಥವಾ ಸಾಹಿತ್ಯ ಕೃತಿಯೊಂದರ ಆಧಾರದ ಮೇಲೆ ಸಿನಿಮಾ ನಿರ್ಮಾಣವಾಗುವ ವಿದ್ಯಮಾನದ ಕುರಿತು. ಅಂದರೆ ಸಿದ್ಧ ಕಾದಂಬರಿಯನ್ನೋ, ಸಿದ್ಧ ಕತೆಯನ್ನೋ, ಸಿದ್ಧ ನಾಟಕವನ್ನೋ ಬಳಸಿ ಚಿತ್ರ ನಿರ್ಮಾಣ ಮಾಡುವ ಪ್ರಕ್ರಿಯೆಯ ಬಗ್ಗೆ... ಇಡೀ ಸಿನಿಮಾ ಇತಿಹಾಸವನ್ನೇ ಗಮನದಲ್ಲಿಟ್ಟುಕೊಂಡು ನೋಡಿದಾಗ ಒಂದು ಅತ್ಯುತ್ತಮ ಸಾಹಿತ್ಯ ಕೃತಿಯನ್ನು ಸಿನಿಮಾವಾಗಿಸುವ ಪ್ರಯತ್ನದಲ್ಲಿ ಎಷ್ಟೋ ಸಲ ನಿರ್ದೇಶಕ ಗೆದ್ದಿರುತ್ತಾನೆ. ಹಾಗೆಯೇ ಎಷ್ಟೋ ಸಲ ಸೋತ ಉದಾಹರಣೆಗಳೂ ಉಂಟು. ಒಂದು ಕಾದಂಬರಿಯನ್ನೋ, ನಾಟಕವನ್ನೋ ತೆರೆಯ ಮೇಲೆ ತರಬೇಕಾಗಿ ಬಂದಾಗ ತನ್ನ ದೃಶ್ಯ ಪರಿಕಲ್ಪನೆಯತ್ತ ತುಡಿಯುವ ನಿರ್ದೇಶಕ ಹಲವೊಂದು ರಾಜಿಸೂತ್ರಗಳಿಗೆ ಒಳಗಾಗಿ ಕೃತಿಯ ಮೂಲ ಆಶಯ ಏನಿರುತ್ತದೆಯೋ ಅದು ಶೇಕಡ ನೂರರಷ್ಟು ಪ್ರಮಾಣದಲ್ಲಿ ಪರದೆಯ ಮೇಲೆ ಮೂಡಿಬರುವ ಅವಕಾಶ ತಪ್ಪುತ್ತದೆ. ಅಂತಹ ಸಂದರ್ಭದಲ್ಲಿ ಆ ಕೃತಿಯನ್ನು ರಚಿಸಿದ್ದ …ತಿಗೆ ಸಹಜವಾಗಿ ಬೇಸರವಾಗುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಕುರೋಸಾವ ನಿಜಕ್ಕೂ …ದಿ ನಿರ್ದೇಶಕ. ಆತ ಯಾವುದೇ ಕಾದಂಬರಿಯನ್ನೋ ಅಥವಾ ನಾಟಕವನ್ನೋ ಆಧಾರವಾಗಿಟ್ಟುಕೊಂಡು ಸಿನಿಮಾ ಮಾಡಲು ಹೊರಟಾಗ ಮೂಲ ಕೃತಿಯ ಆಶಯಕ್ಕೆ ಎಲ್ಲೂ ಧಕ್ಕೆ ಉಂಟಾಗದಂತೆ ಕಾಯ್ದುಕೊಳ್ಳುವುದರ ಜೊತೆಗೆ [illegible] ಚಾಣಾಕ್ಷ, ಪರಿಪಕ್ವ ನಿರ್ದೇಶಕನಿಗೂ ಸಾಧ್ಯವಾಗದ ಹಾಗೆ ಆ ಕೃತಿಯನ್ನು ದೃಶ್ಯರೂಪಕ್ಕೆ ಇಳಿಸಬಲ್ಲವನಾಗಿದ್ದ. ಈ ಮಾತಿಗೆ ಪುಷ್ಟಿ ನೀಡಬಲ್ಲ ಉದಾಹರಣೆಗಳೆಂದರೆ ವಿಲಿಯಂ ಶೇಕ್ಸ್‌ಪಿಯರ್‌ನ 'ಮ್ಯಾಕ್‌ಬೆತ್' ಆಧರಿಸಿದ 'ಥ್ರೋನ್ ಆಫ್ ಬ್ಲಡ್' ಹಾಗೂ 'ಕಿಂಗ್ ಲಿಯರ್' ಆಧರಿಸಿದ 'ರಾನ್' ಚಿತ್ರಗಳು–ಈ ಚಿತ್ರಗಳ ಮೂಲಕ ಸಾಹಿತ್ಯ ಕೃತಿಗಳನ್ನು ಹೇಗೆ ಸಮರ್ಥವಾಗಿ ಸಿನಿಮಾವಾಗಿಸಬಹುದು ಎಂಬ ಗುಟ್ಟನ್ನು ಕುರೋಸಾವಾ ಜಗತ್ತಿಗೆ ತೋರಿಸಿಕೊಟ್ಟನು ಅನ್ನಬಹುದು.

"ಶೇಕ್ಸ್‌ಪಿಯರ್, ಗಾರ್ಕಿ, ದಾಸ್ತೋವಿಸ್ಕಿ ಮುಂತಾದವರ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಸಿನಿಮಾ ಮಾಡುವ ನಿಮ್ಮ ಉದ್ದೇಶ ನಿಜಕ್ಕೂ ಅರ್ಥಗರ್ಭಿತವೇ?" ಎಂದು ಮಾರ್ಕ್ವೆಜ್ ಕುರೋಸಾವಾನನ್ನು ಪ್ರಶ್ನಿಸುತ್ತಾರೆ. ಕುರೋಸಾವ ಉತ್ತರಿಸುತ್ತಾ "ಸಿನಿಮಾವನ್ನು ಎಷ್ಟೋ ಸಲ ಅರ್ಥ ಮಾದರಿಯಲ್ಲಿ ತೋರಿಸಬೇಕಾಗಿ ಬರುತ್ತದೆ. ಸಾಹಿತ್ಯ ಕೃತಿಯೊಂದನ್ನು ಆಧರಿಸಿ ಸಿನಿಮಾ ಮಾಡುವಾಗ ಎದುರಾಗುವ ಸವಾಲುಗಳು, ಮೂಲ ಕೃತಿಯಲ್ಲಿನ ಆಶಯ ಮತ್ತು ಸತ್ವವನ್ನು ತೆರೆಯ ಮೇಲೆ ಸಮರ್ಥವಾಗಿ ತರಬೇಕಾಗಿ ಬಂದಾಗ ಎಡತಾಕುವ ಸಮಸ್ಯೆಗಳು ಸಾಮಾನ್ಯವಾಗಿ ಮೊದಮೊದಲಿಗೆ ನಿರ್ದೇಶಕನ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ ಕೃತಿಯಲ್ಲಿರುವ ಯಾವುದೋ ಒಂದು ಕಂಟೆಂಟ್ ಅನ್ನು ತಂತ್ರಜ್ಞಾನದ ಸಹಾಯದೊಂದಿಗೆ ದೃಶ್ಯ ರೂಪಕ್ಕಿಳಿಸಿ ಪ್ರೇಕ್ಷಕನೆದುರು ಇಡಲು ಮುಂದಾಗಬೇಕಾದಾಗ ಒಂದಿಷ್ಟು ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಮೂಲ ಕೃತಿಯನ್ನು ಓದಿರುವ ಯಾರಾದರೂ ಸಿನಿಮಾ ನೋಡಿದ ನಂತರ ಕಂಡುಬರುವ ವ್ಯತ್ಯಾಸವನ್ನು ಪತ್ತೆ ಹಚ್ಚಿ 'ಯೂ ಆರ್ ರಾಂಗ್' ಅಂತ ನಿರ್ದೇಶಕನೆದುರು ಜಬರ್ದಸ್ತ್ ಮಾಡಬಹುದು. ಆದರೆ ಮೂಲ ಕೃತಿಯನ್ನು ಓದಿರದಿದ್ದ ಪ್ರೇಕ್ಷಕ ತಾನು ತನ್ನ ಇಂದ್ರಿಯಗಳನ್ನು ದೃಶ್ಯ ಮಾಧ್ಯಮಕ್ಕೆ ಒಗ್ಗಿಸಿಕೊಂಡು ಚಿತ್ರ ವೀಕ್ಷಿಸುವುದರಿಂದ, ಚಿತ್ರವನ್ನು ಅರ್ಥ ಮಾಡಿಕೊಳ್ಳುವುದರಿಂದ ಇಂತಹ ಏರುಪೇರುಗಳು ಆತನಿಗೆ ಗೊತ್ತಾಗುವುದಿಲ್ಲ. ಆದ್ದರಿಂದ ಎರಡನ್ನೂ ಸಮಾನವಾಗಿ ಸರಿದೂಗಿಸುವುದು ಒಬ್ಬ ನಿರ್ದೇಶಕನಿಗೆ ಅನಿವಾರ್ಯ" ಎಂದು ಉತ್ತರಿಸುತ್ತಾರೆ.

ಈ ಮಾತಿನಿಂದ ಚಕಿತಗೊಳ್ಳುವ ಮಾರ್ಕ್ವೆಜ್ "ನಿಮ್ಮ ಜೀವನದಲ್ಲಿ ಬೆಳ್ಳಿ ತೆರೆಯ ಮೇಲೆ ಬಿಂಬಿಸಲಾಗದಂತಹ ಯಾವುದಾದರೂ ನಿಜ ದೃಶ್ಯವನ್ನು ಕಂಡಿದ್ದೀರಾ?" ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಕುರೋಸಾವ ಪ್ರತಿಕ್ರಿಯಿಸುತ್ತಾ "ನಾನು ಸಣ್ಣವನಾಗಿದ್ದಾಗ ಇಲ್ಲಿಡಾಚಿ ಎಂಬ ಊರಿನಲ್ಲಿ ಶೂಟಿಂಗ್ ನಡೆಯುತ್ತಿದ್ದ ಚಿತ್ರವೊಂದರಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದೆ. ಆ ಚಿತ್ರದ ನಿರ್ದೇಶಕರಿಗೆ ಆಗಲೇ ಅನ್ನಿಸಿತ್ತು... ಅಲ್ಲಿನ ವಾತಾವರಣ ಭವ್ಯವಾಗಿಯೂ ಆದರೆ ವಿಚಿತ್ರವಾಗಿಯೂ ಇತ್ತು ಎಂದು. ಆ ಕಾರಣಕ್ಕಾಗಿಯೇ ಚಿತ್ರೀಕರಣಕ್ಕೆ ಆ ಸ್ಥಳವನ್ನು ಬಳಸಿಕೊಳ್ಳಲಾಗಿತ್ತು. ಆದರೆ ನಮಗೆ ದೊರೆತಿದ್ದ ಕೆಲವು ಮಾಹಿತಿಯಲ್ಲಿ ಊರಿನ ಬಗ್ಗೆ ಯಾವುದೋ ಅಂಶ ದಟ್ಟವಾಗಿ ಮರೆಮಾಚಿದಂತಿತ್ತು. ಅದೇನೆಂದರೆ ಅಲ್ಲಿನ ಕಾರ್ಮಿಕ ಘಟಕಗಳಲ್ಲಿ ಕೆಲಸ ಮಾಡುವ ವಾತಾವರಣ ಭಯಾನಕವಾಗಿತ್ತು ಮತ್ತು ಅಲ್ಲಿನ ಮಹಿಳೆಯರು ಮತ್ತು ಮಕ್ಕಳು ಸದಾ ತಮ್ಮ ಸುರಕ್ಷೆಯ ಬಗ್ಗೆ ಭಯಭೀತರಾಗಿದ್ದರು. ಕೆಲವರಿಗೆ ಆ ಊರಿನ ದೃಶ್ಯಾವಳಿಗಳು ಗೊಂದಲವನ್ನುಂಟುಮಾಡಿದರೆ ಮತ್ತೆ ಕೆಲವರಿಗೆ ಇರುವುದಕ್ಕಿಂತಲೂ ವಿಚಿತ್ರವಾಗಿ ತೋರುತ್ತಿತ್ತು. ಆದರೆ ಕ್ಯಾಮೆರಾದ ಕಣ್ಣಿಗೆ ಕಾಣುತ್ತಿದ್ದ ಆಯಾಮವೇ ಬೇರೆ" ಎಂದು ಉತ್ತರಿಸುವ ಮೂಲಕ ತಮ್ಮ ಅನುಭವಕ್ಕೆ ದಕ್ಕಿದ ಸಂಗತಿಯೊಂದನ್ನು ಹಂಚಿಕೊಂಡಿದ್ದರು

ಕುರೋಸಾವ ಮತ್ತು ಮಾರ್ಕ್ವೆಜ್ ಹೀಗೆ ಬೇರೆ ಬೇರೆ ವಿಷಯಗಳನ್ನು ಎತ್ತಿಕೊಂಡು ಅವುಗಳ ಆಳಕ್ಕಿಳಿದು ಮಾತನಾಡುತ್ತಾ ಹೋದಂತೆ ಕುರೋಸಾವ ನಿರ್ದೇಶನದ 'ರಾಪ್ಸೋಡಿ ಇನ್ ಆಗಸ್ಟ್' ಎಂಬ ಚಿತ್ರದತ್ತ ಹೊರಳಿ ಮಾತಿನ ಭಾವ ದಟ್ಟವಾಗುತ್ತಾ ಹೋಗುತ್ತದೆ.

'ರಾಪ್ಸೋಡಿ ಇನ್ ಆಗಸ್ಟ್' ನಾಗಸಾಕಿ ನಗರದ ಮೇಲೆ ಅಮೆರಿಕ ಮಾಡಿದ ಪರಮಾಣು ಬಾಂಬ್ ದಾಳಿಯಿಂದ ದುರಂತಕ್ಕೆ ತುತ್ತಾದ ವೃದ್ಧೆಯೊಬ್ಬಳ ಹೋರಾಟದ ಕಥಾನಕವದು. ಆ ಚಿತ್ರ ಬಿಡುಗಡೆಯಾದಾಗ ಅನೇಕ ಅಮೆರಿಕನ್ ವಿಮರ್ಶಕರು ಅಪಸ್ವರಗಳನ್ನು ಎತ್ತಿದ್ದರು. ಆ ಚಿತ್ರದಲ್ಲಿ ಜಪಾನೀಯರು ಆ ಬಾಂಬ್ ದಾಳಿ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು ಎಂಬ ಕಾರಣಕ್ಕೆ ಇರಬಹುದು.

ಹಿರೋಷಿಮಾ ನಗರ ಅನೇಕ ಕೈಗಾರಿಕಾ ಘಟಕಗಳನ್ನು ಹೊಂದಿದ್ದರಿಂದ ಅದು ಸಹಜವಾಗಿಯೇ ಅಮೆರಿಕನ್ ಸೈನಿಕರ ಬೇಟೆಯಾಗಿದ್ದರಲ್ಲಿ ಆಚ್ಚರಿಯೇನಿಲ್ಲ. ಆದರೆ ನಾಗಸಾಕಿಯಲ್ಲಿ ಅಂತಹ ಒಂದೂ ಕೈಗಾರಿಕಾ ಘಟಕ ಇರಲಿಲ್ಲ.ಅಷ್ಟೇ ಅಲ್ಲ, 1945ರ ಆಗಸ್ಟ್ 9ರಂದು ನಡೆದ ಈ ಎರಡನೇ ಪರಮಾಣು ದಾಳಿಯ ಗುರಿ ಕೈಗಾರಿಕಾ ಪ್ರದೇಶವಾದ ಕಿತಕ್ಯುಶು ನಗರವಾಗಿತ್ತು. ಆದರೆ ಅಂದು ಈ ನಗರ ಮೋಡಗಳಿಂದ ಆವೃತವಾಗಿತ್ತು. ಯಾವುದಾದರೂ ಒಂದು ಸ್ಥಳದ ಮೇಲೆ ಬಾಂಬ್ ಹಾಕಲೇಬೇಕೆಂಬ ಗುರಿಯನ್ನು ಹೊಂದಿದ್ದ ಅಮೆರಿಕನ್ ಸೈನಿಕರ ಆಗ ಬಿದ್ದದ್ದೇ ನಾಗಸಾಕಿ ನಗರ.


ಗೇಬ್ರಿಯಲ್ ಗಾರ್ಸಿಯ ಮಾರ್ಕ್ವೆಜ್


ಅಕಿರಾ ಕುರೋಸಾವ

ಈ ದಾಳಿಯ ಬಗ್ಗೆ ಕುರೋಸಾವ ಮತ್ತು ಮಾರ್ಕ್ವೆಜ್ ನಡುವಿನ ಕುತೂಹಲಕಾರಿ ಸಂಭಾಷಣೆ ಹೀಗೆ ಸಾಗುತ್ತದೆ:

ಮೊದಲು ಕುರೋಸಾವ "ಹಿರೋಷಿಮಾ ಮತ್ತು ನಾಗಸಾಕಿಯಲ್ಲಿ ಸಾವಿಗೀಡಾದ ಜನರ ಸಂಖ್ಯೆ ಒಟ್ಟು 2,30,000 ಎಂಬುದು ಎಲ್ಲರಿಗೂ ಗೊತ್ತಿರುವಂತಹ ಮೇಲ್ನೋಟದ ವರದಿ. ಆದರೆ ಅಲ್ಲಿ ನಿಜಕ್ಕೂ ಸತ್ತವರ ಸಂಖ್ಯೆ ಅರ್ಧ ಮಿಲಿಯನ್ನಿಗೂ ಅಧಿಕ. ಹಾಗೆಯೇ ಈ ದುರಂತ ಘಟಿಸಿ ನಲವತ್ತೈದು ವರ್ಷಗಳೇ ಉರುಳಿದ್ದರೂ ಇವತ್ತಿಗೂ ಅದರ ಹೊಡೆತಕ್ಕೆ ಗುರಿಯಾದ ಸುಮಾರು 2,700 ಮಂದಿ ಆಸ್ಪತ್ರೆಯಲ್ಲಿ ಸಾವಿನ ಬಾಗಿಲು ತಟ್ಟುತ್ತಿದ್ದಾರೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಪರಮಾಣು ಬಾಂಬ್ ಇನ್ನೂ ಜಪಾನೀಯರನ್ನು ಕೊಲ್ಲುತ್ತಲೇ ಇದೆ" ಎಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಅದಕ್ಕೆ ಪ್ರತಿಕ್ರಿಯೆಯಾಗಿ ಮಾರ್ಕ್ವೆಜ್ "ತಮಗಿಂತಲೂ ಮುನ್ನ ರಷಿಯನ್ನರು ಜಪಾನನ್ನು ಆಕ್ರಮಿಸಿಕೊಳ್ಳುವವ ಭಯದಿಂದ ಅಮೆರಿಕನ್ನರು ನಾಗಸಾಕಿ ಮೇಲೆ ದಾಳಿ ಮಾಡಿದ್ದಿರಬಹುದು" ಎನ್ನುತ್ತಾರೆ. ಆಗ ಕುರೋಸಾವ ಅವರು "ಅದು ನಿಜವಾದರೆ, ಯುದ್ಧದೊಂದಿಗೆ ಯಾವುದೇ ಸಂಬಂಧ ಹೊಂದಿರದಿದ್ದ ಸಾಮಾನ್ಯರು ವಾಸಿಸುತ್ತಿದ್ದ ನಗರದ ಮೇಲೆ ದಾಳಿ ಮಾಡುವ ಅಗತ್ಯವಾದರೂ ಏನಿತ್ತು?" ಎಂದು ಮರು ಸವಾಲು ಹಾಕುತ್ತಾರೆ.

ಮಾರ್ಕ್ವೆಜ್ ಕೂಡ ಸುಮ್ಮನಾಗುವುದಿಲ್ಲ. ಬದಲಾಗಿ "ನಿಮ್ಮ ತರ್ಕ ಸರಿ ಎಂದೇ ಇಟ್ಟುಕೊಂಡರೆ ನಾಗಸಾಕಿಯಷ್ಟೇ ಅಸುರಕ್ಷಿತವಾಗಿದ್ದ ಮತು ಜಪಾನ್ ರಾಜಧಾನಿಯ ಮಧ್ಯೆ ಇರುವ ರಾಜವಂಶದ ಇಂಪೀರಿಯಲ್ ಪ್ಯಾಲೆಸ್ ಮೇಲೆಯೇ ಅಮೆರಿಕ ಅಣುಬಾಂಬ್‌ಅನ್ನು ಹಾಕಬಹುದಿತ್ತಲ್ಲವೇ? ಆದರೆ ಹಾಗೆ ಮಾಡಲಿಲ್ಲ ಯಾಕೆ ಎಂಬುದಕ್ಕೆ ನನ್ನಲ್ಲಿರುವ ಉತ್ತರ ಅಮೆರಿಕಕ್ಕೆ ಜಪಾನಿನ ರಾಜಕೀಯ ಮತ್ತು ಸೈನಿಕ ಶಕ್ತಿಗಳನ್ನು ನಾಶ ಮಾಡುವ ಉದ್ದೇಶವಿರಲಿಲ್ಲ. ಬದಲಾಗಿ ಅವುಗಳನ್ನು ರಕ್ಷಿತವಾಗಿಟ್ಟು ಯುದ್ಧದ ನಂತರ ಇತರರೊಂದಿಗೆ ಯುದ್ಧದ ಲಾಭವನ್ನು ಹಂಚಿಕೊಳ್ಳುವ ಬದಲಾಗಿ ತಾನೇ ಎಲ್ಲ ಲಾಭವನ್ನು ಗಿಟ್ಟಿಸಿಕೊಳ್ಳುವ ಹುನ್ನಾರ ಇತ್ತು. ಇಂತಹ ಹುನ್ನಾರಕ್ಕೆ ಜಗತ್ತಿನ ಯಾವ ದೇಶವೂ ಗುರಿಯಾಗಿಲ್ಲ. ಈ ಹಿನ್ನೆಲೆಯಲ್ಲಿ ಆಣುಬಾಂಬ್ ದಾಳಿ ಆಗಿಲ್ಲದಿದ್ದರೆ ಜಪಾನ್ ಅಮೆರಿಕಕ್ಕೆ ಶರಣಾಗುತ್ತಿತ್ತೆ?" ಎಂದು ಪ್ರಶ್ನಿಸುತ್ತಾರೆ.

ಮಾರ್ಕ್ವೆಜ್ ಅವರ ಈ ಮಾತುಗಳಿಗೆ ಏನೂ ಹೇಳದಂತಾಗುವ ಕುರೋಸಾವ ತುಸು ಸಾವರಿಸಿಕೊಂಡು "ಇದಕ್ಕೆ ಸ್ಪಷ್ಟ ಉತ್ತರ ಕೊಡುವುದು ಕಷ್ಟ. ಯಾಕೆಂದರೆ ನಾಗಸಾಕಿ ಮೇಲಿನ ದಾಳಿಯಲ್ಲಿ ಉಳಿದವರು ಆ ದುರಂತವನ್ನು ಮರೆಯಲು ಯತ್ನಿಸುತ್ತಿದ್ದಾರೆ. ಯಾಕೆಂದರೆ ಅವರಲ್ಲಿ ಬಹಳಷ್ಟು ಜನ ತಮ್ಮ ಪ್ರಾಣವನ್ನು ಉಳಿಸಿಕೊಳ್ಳಲು ತಮ್ಮ ಹೆತ್ತವರನ್ನು, ಒಡ ಹುಟ್ಟಿದವರನ್ನು, ತಾವು ಹೆತ್ತ ಮಕ್ಕಳನ್ನೇ ಅನಾಥವಾಗಿಸಿದ್ದಾರೆ. ಅದರ ಬಗ್ಗೆ ಈಗಲೂ ಅವರನ್ನು ಪಾಪಪ್ರಜ್ಞೆ ಕಾಡುತ್ತಿದೆ. ಆ ದುರಂತ ಸಂಭವಿಸಿದ ನಂತರದ ಆರು ವರ್ಷಗಳ ಕಾಲ ಅಮೆರಿಕವೇ ಇಲ್ಲಿ ಅಧಿಪತ್ಯವನ್ನು ಸ್ಥಾಪಿಸಿತ್ತು. ಆ ಸಮಯದಲ್ಲಿ ಈ ದುರಂತವನ್ನು ಮರೆಸುವ ಯತ್ನದಲ್ಲಿ ಅದು ತೊಡಗಿತ್ತಲ್ಲದೆ ಅಮೆರಿಕದ ಜೊತೆ ಜಪಾನಿ ಸರ್ಕಾರವೂ ಕೈಜೋಡಿಸಿತ್ತು. ಈ ಎಲ್ಲ ಪ್ರಕ್ರಿಯೆಗಳು ಒಂದು ಯುದ್ಧದಿಂದಾಗುವ ದುರಂತ ಎಂದು ಅರ್ಥಮಾಡಿಕೊಳ್ಳಲು ನಾನು ಸಿದ್ಧನಿದ್ದೇನೆ. ಆದರೆ ಕನಿಷ್ಠ ಪಕ್ಷ ಈ ದುರಂತಕ್ಕೆ ಕಾರಣವಾದ ದೇಶ ಜಪಾನಿ ಜನರ ಮುಂದೆ ಕ್ಷಮೆ ಯಾಚಿಸಬೇಕು ಎಂಬ ಆಶಯವನ್ನು ಹೊಂದಿದ್ದೇನೆ. ಎಲ್ಲಿಯವರೆಗೆ ಅಮೆರಿಕ ಕ್ಷಮೆ ಯಾಚಿಸುವುದಿಲ್ಲವೋ ಅಲ್ಲಿಯತನಕ ಈ ದುರಂತ ನಮ್ಮ ಜನರನ್ನು ಕಾಡುತ್ತಲೇ ಇರುತ್ತದೆ" ಎಂದಷ್ಟೇ ಹೇಳಿ ಸುಮ್ಮನಾಗುವರು.

ಕುರೋಸಾವ ಮತ್ತು ಮಾರ್ಕ್ವೆಜ್ ನಡುವಿನ ಮಾತುಗಳು ಇತಿಹಾಸದ ನೆನಪುಗಳತ್ತ, ಪರಮಾಣು ಬಾಂಬಿನ ಪ್ರಭಾವದತ್ತ, ಸಿನಿಮಾದತ್ತ ಹೊರಳಿದರೂ ಒಂದು ದಟ್ಟ ಜಿಜ್ಞಾಸೆ ಇಬ್ಬರನ್ನೂ ಆವರಿಸಿದ್ದು ಸುಳ್ಳಲ್ಲ.

● ಹೃದಯಶಿವ

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 26-11-2014 RNI No. KARKAN2005/1


ಲಾಭನಷ್ಟಕ್ಕಿಂತ ಆತ್ಮತೃಪ್ತಿ ಮುಖ್ಯ



ಕನ್ನಡದಲ್ಲಿ ಇಂಥದ್ದೊಂದು ಸಿನಿಮಾ ಮಾಡಲು ತುಂಬಾ ಧೈರ್ಯ ಬೇಕು. ಇಂಥದ್ದೊಂದು ಚಿತ್ರವನ್ನು ನಿರ್ಮಿಸಿದ್ದರ ಬಗ್ಗೆ ನನಗೆ ತುಂಬಾ ಆನಂದ ತುಂಬಾ ಹೆಮ್ಮೆ ಇದೆ. [illegible] ನನ್ನ ವೃತ್ತಿಜೀವನದಲ್ಲಿ ನಾನು ಅನೇಕ ಚಿತ್ರಗಳನ್ನು ಡೈರೆಕ್ಟ್ ಮಾಡಿದ್ದೇನೆ. ಆದರೆ ಈ ಚಿತ್ರದಲ್ಲಿ ಸಿಕ್ಕಷ್ಟು ಪೂರ್ಣಪ್ರಮಾಣದ ಆತ್ಮತೃಪ್ತಿ ಈವರೆಗೆ ನಾನು ನಿರ್ದೇಶಿಸಿದ ಯಾವ ಚಿತ್ರದಲ್ಲೂ ನನಗೆ ಸಿಕ್ಕಿರಲಿಲ್ಲ. ಈ ಚಿತ್ರವನ್ನು ವೀಕ್ಷಿಸಿದ ಪ್ರತಿಯೊಬ್ಬರೂ ಚಿತ್ರದ ಕಂಟೆಂಟ್ ಬಗ್ಗೆ ತುಂಬಾ ಭಾವನಾತ್ಮಕವಾಗಿ ಸ್ಪಂದಿಸುತ್ತಿದ್ದಾರೆ. ಈ ಬಗೆಯ ಭಾವನಾತ್ಮಕ ಸ್ಪಂದನೆ ನನ್ನ ಈವರೆಗಿನ ಯಾವ ಚಿತ್ರವೂ ತಂದುಕೊಟ್ಟಿರಲಿಲ್ಲ. ಈ ಚಿತ್ರ ಹಂಡ್ರೆಡ್ ಪರ್ಸೆಂಟ್ ಸುರಕ್ಷಿತವಾಗಿದೆ ಅನ್ನೋ ಮಾತನ್ನು ನಾನು ಹೇಳುವುದಿಲ್ಲ. ಆದರೂ ಕನ್ನಡ ಪ್ರೇಕ್ಷಕರಿಗೆ ಒಂದೊಳ್ಳೆಯ ಸಿನಿಮಾ ನೀಡಿದ ತೃಪ್ತಿಯಂತೂ ನನಗಿದೆ" ಎಂಬ ಮಾತುಗಳನ್ನು ಹೇಳಿದವರು ಬೇರಾರೂ ಅಲ್ಲ... ಕಳೆದ ವಾರವಷ್ಟೇ 'ಅಭಿಮನ್ಯು' ಚಿತ್ರವನ್ನು ತೆರೆಗೆ ತಂದ ಅರ್ಜುನ್ ಸರ್ಜಾ. ತಾವೇ ನಟಿಸಿ, ನಿರ್ದೇಶಿಸುವುದರ ಜೊತೆಗೆ ನಿರ್ಮಾಣದ ಜವಾಬ್ದಾರಿಯನ್ನೂ ಹೊತ್ತಿದ್ದ ಅರ್ಜುನ್ ಸರ್ಜಾ ತಮ್ಮ ಸಿನಿಮಾ ಬಗ್ಗೆ ಈ ಮೇಲಿನ ಮಾತುಗಳನ್ನಾಡಿದ್ದಾರೆ. ಇಷ್ಟಕ್ಕೂ ಈ ಚಿತ್ರದ ಕಲೆಕ್ಷನ್ ಬಗ್ಗೆ ಕೇಳಿದರೆ "ಅದೆಷ್ಟು ಕಲೆಕ್ಷನ್ ಆಗಿದೆ, ಅದೆಷ್ಟು ಲಾಭ ಬಂದಿದೆ ಎಂಬುದರ ಬಗ್ಗೆ ನನಗೆ ಸರಿಯಾಗಿ ಗೊತ್ತಿಲ್ಲ. ನಾನು ಹಾಕಿರುವ ಹಣ ವಾಪಸು ಪಡೆಯುತ್ತೇನೋ, ಇಲ್ಲವೋ ಅನ್ನುವುದರ ಬಗ್ಗೆಯೂ ನನಗೆ ಖಚಿತತೆ ಇಲ್ಲ. ಈ ಚಿತ್ರಕ್ಕಾಗಿ ಇಪ್ಪತ್ತು ಕೋಟಿ ಖರ್ಚು ಮಾಡಿದ್ದೇನೆ. ಆ ಹಣ ವಾಪಸ್ ಬರುತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಒಂದೊಳ್ಳೆಯ ಸಿನಿಮಾ ಮಾಡಿದ ತೃಪ್ತಿಯಂತೂ ನನಗೆ ದಕ್ಕಿದೆ" ಎಂದಷ್ಟೇ ಹೇಳಿ ಅರ್ಜುನ್ ಭಾವುಕರಾಗುತ್ತಾರೆ. 'ಅರ್ಜುನ್ ಸರ್ಜಾ ತರಹದವರು ಗೆಲ್ಲಲಿ' ಅನ್ನಿಸೋದು ಇಂತಹ ಸಂದರ್ಭಗಳಲ್ಲಿಯೇ ಅಲ್ಲವೇ?

ನಾಗಶೇಖರ್ ಹಿಂದಿಗೆ

ಸೊಪ್ಪುಟ್ಟ ಕಾಮಿಡಿ ರೋಲ್‌ಗಳನ್ನು ಮಾಡಿಕೊಂಡಿದ್ದ ನಾಗಶೇಖರ್ 'ಅರಮನೆ' ಸಿನಿಮಾ ಮೂಲಕ ಡೈರೆಕ್ಟರ್ ಆಗಿದ್ದು ನಿಮಗೆಲ್ಲ ಗೊತ್ತು. ಆಮೇಲೆ 'ಮೈನಾ' ಹಾಗೂ 'ಸಂಜು ವೆಡ್ಸ್ ಗೀತಾ' ಚಿತ್ರಗಳನ್ನು ನಿರ್ದೇಶಿಸಿ ಯಶಸ್ವೀ ನಿರ್ದೇಶಕ ಅನ್ನಿಸಿಕೊಂಡಿದ್ದೂ ನಿಮಗೆ ಗೊತ್ತು. ಹೀಗೆ ನಿರ್ದೇಶಕರಾಗಿ ಹೆಸರು ಗಳಿಸಿದ ನಾಗಶೇಖರ್ ಗಾಂಧಿನಗರದ ಅನೇಕ ನಿರ್ದೇಶಕರ ಚಾಳಿಯಂತೆ ತಾವೂ ಕೂಡ ಆ ಪ್ರೇಮವನ್ನು ಬೆಳೆಸಿಕೊಂಡು ಹೀರೋ ಆಗಲು ಹೊರಟರು. ಆ ನಿಟ್ಟಿನಲ್ಲಿ ನಾಗಶೇಖರ್ ಹೀರೋ ಆಗಿ ನಟಿಸಬೇಕಿದ್ದ ಒಂದೆರಡು ಚಿತ್ರಗಳು ಅನೌನ್ಸ್ ಆದರೂ ಅವ್ಯಾಕೋ ಆ ಚಿತ್ರಗಳು ಆರಂಭವಾಗಲೇ ಇಲ್ಲ. ಆದರೆ ಇದೇ ನಾಗಶೇಖರ್ ಹೀರೋ ಆಗಿ ಅಭಿನಯಿಸುತ್ತಿರುವ 'ಸಿಗರೇಟ್' ಎಂಬ ಚಿತ್ರ ಶಂಕರ್ ನಿರ್ದೇಶನದಲ್ಲಿ ಶುರುವಾಗಿ ಶೂಟಿಂಗ್ ಮುಗಿಸಿಕೊಂಡು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನೂ ಮುಗಿಸಿಕೊಂಡು ಸೆನ್ಸಾರ್ ಕೂಡ ಮುಗಿದು ಇದೀಗ ರಿಲೀಸಿಗೆ ರೆಡಿಯಾಗಿದೆ.



ಅಲ್ಲಿಗೆ ಹೀರೋ ಆಗಬೇಕೆಂದು ಬಯಸಿದ್ದ ನಾಗಶೇಖರ್ ಕನಸು ನನಸಾದಂತಾಯಿತು. ಇಂತಹ ನಾಗಶೇಖರ್ ಈಗ ಮತ್ತೊಂದು ಜಾಕ್ ಕೊಡಲು ಹೊರಟಿದ್ದಾರೆ. ಅದೇನೆಂದರೆ ಹಿಂದಿಯಲ್ಲಿ ಒಂದು ಸಿನಿಮಾ ಮಾಡುವುದು. ಹೌದು, ನಾಗಶೇಖರ್ ಹಿಂದಿಯಲ್ಲಿ ಒಂದು ಸಿನಿಮಾ ನಿರ್ದೇಶಿಸಲು ತಯಾರಿ ನಡೆಸಿಕೊಂಡಿದ್ದಾರೆ. ಈಗಾಗಲೇ ಕತೆ-ಚಿತ್ರಕತೆ ಸಿದ್ಧವಾಗಿರುವ ಈ ಚಿತ್ರದಲ್ಲಿ ಅಭಿಷೇಕ್ ಬಚ್ಚನ್-ಐಶ್ವರ್ಯ ರೈ ಜೋಡಿ ನಟಿಸುವ ಯೋಜನೆ ಇದೆಯಂತೆ. ಹಿಂದೊಮ್ಮೆ 'ಮುಂಗಾರು ಮಳೆ' ಹಿಂದಿಯಲ್ಲಿ... [illegible] ಸಿನಿಮಾ ಮಾಡುವುದಾಗಿ ಹೇಳಿ... [illegible] ಈ ಚಿತ್ರಕ್ಕೆ ಹಣ ಹಾಕಲಿದ್ದಾರಂತೆ. ಎಲ್ಲವೂ ಅಂದುಕೊಂಡ ಹಾಗೆ ನಡೆದು ಕನ್ನಡಿಗ ನಾಗಶೇಖರ್ ಹಿಂದಿಯಲ್ಲೂ ಗೆದ್ದರೆ ಖುಷಿ ಪಡುವ ಪಟ್ಟಿ ಕನ್ನಡಿಗರದ್ದೇ.





ಟೋಪಿ ಹಾಕ್ಬೇಕು ಗಾಂಧಿ ದೇಶ ನಂದು

ಕೋಮಲ್ ಅಭಿನಯದ 'ನಮೋ ಭೂತಾತ್ಮ' ಚಿತ್ರದ ಹಾಡುಗಳ ಧ್ವನಿಸುರುಳಿ ಬಿಡುಗಡೆಯಾಗಿದೆ. ಈ ಆಲ್ಬಮ್‌ನಲ್ಲಿ ಒಟ್ಟು ಐದು ಹಾಡುಗಳಿದ್ದು ಖ್ಯಾತ ಗಾಯಕ



ದಲೇರ್ ಮೆಹೆಂದಿ ಕೂಡ 'ಪ್ಯಾಸಾ ಪ್ಯಾಸಾ' ಎಂಬುದೊಂದು ಗೀತೆ ಹಾಡಿದ್ದಾರೆ. ಈ ಚಿತ್ರಕ್ಕೆ ಸ್ವತಃ ಕೋಮಲ್ ಬಂಡವಾಳ ಹಾಕಿದ್ದು, ನಟನೆಯ ಜೊತೆಗೆ 'ಇವಳು ಪೋಸು ಕೊಡ್ತಳೆ' ಎಂಬ ಪಡ್ಡೆಗಳ ಚಳಿ ಬಿಡಿಸುವ ಹಾಡನ್ನೂ ಹಾಡಿದ್ದಾರೆ. 'ಟೋಪಿ ಹಾಕ್ಬೇಕು ಗಾಂಧೀ ದೇಶ ನಂದು' ಎಂಬ ಹಾಡು ಕೆಲವೇ ದಿನಗಳ ಹಿಂದಯಷ್ಟೇ ವಿವಾದಕ್ಕೆ ಗುರಿಯಾಗಿದ್ದು ಮಂಡ್ಯದ ಒಂದಿಷ್ಟು ಬಿಜೆಪಿ ಮಂದಿ ಗಾಂಧಿಗೆ ಅವಮಾನ ಮಾಡಿದ್ದೀರಿ ಅಂತ ಕ್ಯಾತೆ ತೆಗೆದು ಪ್ರಚಾರ ಪಡೆಯಲು ಹೊರಟಿದ್ದರು.

ಅವರೆಲ್ಲ ಆಮೇಲೆ ಎಲ್ಲಿ ಹೋದರೋ ತಿಳಿದಿಲ್ಲ. ಈಗ 'ನಮೋ ಭೂತಾತ್ಮ' ಹಾಡುಗಳು ಹೊರಬಂದಿವೆ. ಇಷ್ಟಕ್ಕೂ ಬಿಜೆಪಿ ಮಂದಿ ಈ ಚಿತ್ರದ 'ಪ್ಯಾಸಾ ಪ್ಯಾಸಾ' ಹಾಡಿನ ಬಗ್ಗೆ ತಗಾದೆ ತೆಗೆಯಲು ಕಾರಣ ಗಾಂಧೀಜಿ ಮೇಲಿನ ಅಭಿಮಾನಕ್ಕಿಂತ ಚಿತ್ರದ ಟೈಟಲ್ 'ನಮೋ'ಯಿಂದ ಶುರುವಾಗಿ 'ಭೂತಾತ್ಮ'ದಿಂದ ಮುಗಿಯುತ್ತದಲ್ಲಾ... ಅದಿರಬಹುದು ಎಂಬ ಊಹೆ. ಇತ್ತೀಚಿನ ತಿಂಗಳುಗಳಲ್ಲಿ 'ನಮೋ' ಅಂದರೆ ಅದು 'ನರೇಂದ್ರ ಮೋದಿ' ಮಾತ್ರ. ಬೇರೆ ಯಾವುದೂ ಅಲ್ಲ ಅನ್ನೋ ಭ್ರಮೆ ಕೆಲವರಿಗಿದೆ. ಅಂದಹಾಗೆ ಬಿಜೆಪಿ ಮಂದಿ ಇಷ್ಟೆಲ್ಲಾ ಯಕ್ಷಗಾನ ಬಯಲಾಟ ಮಾಡಿದ ನಂತರವೂ ಈ ಚಿತ್ರದ 'ಪ್ಯಾಸಾ ಪ್ಯಾಸಾ' ಹಾಡಿನ ಸಾಲುಗಳು ಯಾವುದೇ ಬದಲಾವಣೆಯಾಗದೆ ಆಡಿಯೋದಲ್ಲಿ ಹಾಗೇ ಉಳಿದುಕೊಂಡಿವೆ!

ಚಿತ್ರರಂಗಕ್ಕೆ 2 ದಿನ ಲೀವ್

ನವೆಂಬರ್ ತಿಂಗಳಾಂತ್ಯದ 28 ಮತ್ತು 29ನೇ ತಾರೀಖಿನಂದು ಕನ್ನಡ ಚಿತ್ರರಂಗ ತನಗೆ ತಾನೇ ರಜೆ ಘೋಷಿಸಿಕೊಳ್ಳಲಿದೆಯಂತೆ. ಇಷ್ಟಕ್ಕೂ ಈ ರಜೆಗೆ ಮೂಲ ಕಾರಣ ಡಾ.ರಾಜಕುಮಾರ್ ನೆನಪಿನಲ್ಲಿ 29 ರಂದು ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮಗಳು. 28ರಂದೇ ಬಹುತೇಕ ನಟನಟಿಯರು ಈ ನಿಮಿತ್ತ ರಿಹರ್ಸಲ್‌ನಲ್ಲಿ ತೊಡಗುವುದರಿಂದ ಎರಡೂ ದಿನಗಳ ಕಾಲ ಚಿತ್ರಮಂದಿರಗಳಲ್ಲಿ ಚಿತ್ರಗಳ ಪ್ರದರ್ಶನದ ಹೊರತಾಗಿ ಚಿತ್ರರಂಗದ ಇನ್ನಿತರ ಯಾವುದೇ ಚಟುವಟಿಕೆಗಳು

ನಡೆಯುವುದಿಲ್ಲವೆಂಬ ಮಾತುಗಳು ಕೇಳಿಬರ[...] ಪ್ರಯುಕ್ತ ಅರಮನೆ ಆವರಣದಲ್ಲಿ ರಿ[...] ನಡೆಯಲಿದೆಯಂತೆ. ಈ ಸಾಂಸ್ಕೃತಿಕ ಕಾರ್[...] ಉಸ್ತುವಾರಿಯನ್ನು ಎಸ್.ನಾರಾಯಣ್ ವಹಿ[...] ರುವುದರಿಂದ ಈ ಬಾರಿಯೂ ಪ್ರತಿ[...]



ನಾರಾಯಣ್ ಹೇಳದೆ ಇರಲಿಲ್ಲದ ಕಾಣೆಯಾಗಿ [...] ತಮ್ಮ ಮಗ ಪಂಕಜ್‌ಗೂ ಒಂದೆರಡು [...] ಹಾಡುಗಳನ್ನು ಆಯ್ಕೆ ಮಾಡಿಕೊಟ್ಟು, ಗ[...] ಪರ್ಫಾರ್ಮ್ ಮಾಡಲು ಅವಕಾಶ ಒದಗಿ[...] ಸಾಧ್ಯವಾದಷ್ಟು ಮಗನನ್ನು ಪ್ರೊಮೋಟ್ ಮಾಡ[...] ರೂಪಿಸುತ್ತಾರೆ ಅಂತಾಯಿತು. ಆಲ್ ದಿ ಬೆಸ್[...]

ಅಂದ್ರಿತಾ ಅಪಘಾತದಿಂದ [...]

ನೋಡಲು ಅಷ್ಟೇನೂ ಸುಂದರಿಯ[...] ನಟಿಯರಿಗಿರಬೇಕಾದ ಆಕರ್ಷಕ ಮೈಕಟ್ಟು [...] ಹೊಂದಿರದಿದ್ದರೂ ಒಂದು ಮಟ್ಟಿಗೆ ಕನ್ನಡ ಚ[...] ತನ್ನದೇ ಹವಾ ಎಬ್ಬಿಸಿದ್ದ ಹೀಚಲು ನಟಿ ಅಂ[...] ಇತ್ತೀಚೆಗಷ್ಟೇ ಒಂದು ಅಪಘಾತದಿಂದ ಪಾರಾಗಿ[...] ಅದೇನೆಂದರೆ ಕಾರು ಅಪಘಾತದಿಂದ [...] ಬಚಾವಾಗಿದ್ದಾರೆ. ಇಷ್ಟಕ್ಕೂ ಅಂದ್ರಿತಾ ಗುಜರಾತಿ[...] ಸ್ನೇಹಿತರ ಮದುವೆಗೆಂದು ಹೋಗಿದ್ದು [...] ಮುಗಿಸಿಕೊಂಡು ವಾಪಾಸು ತಾವು ಉಳಿದ[...] ಹೋಟೆಲ್ಲಿಗೆ ಹಿಂದಿರುಗುವಾಗ ಈ ಘಟನೆ ನ[...] ಕಾರು ಚಲಾಯಿಸುತ್ತಿದ್ದ ಡ್ರೈವರ್ ಇದ್ದಕ್ಕಿದ್ದಂತ[...] ಬ್ರೇಕ್ ಹಾಕಿದ್ದಾನೆ. ಕಾರು ಆಯತಪ್ಪಿ ರಸ್ತೆಯ[...] ಗುಂಡಿಗೆ ಬಿದ್ದುಬಿಟ್ಟಿದೆ.

ಈ ಘಟನೆಯಿಂದಾಗಿ ಅಂದ್ರಿತಾ ರೇಗೆ ಸಣ್ಣಪುಟ್ಟ ಗಾಯಗಳಾಗಿದ್ದು ಅಂತಹ ಗಂಭೀರ ಸಮಸ್ಯೆಯೇನೂ ಆಗಿಲ್ಲದಿದ್ದರೂ ಆಕೆಗೆ ಇದರಿಂದ ಭಯಂಕರ ಶಾಕ್ ಆಗಿದ್ದಂತೂ ಖರೆ. ಮುಂಬಯಿಯ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅಂದ್ರಿತಾ ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದಾರೆ ಎನ್ನಲಾಗಿದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642[...] Fax : 26604536, E-mail :lankesh70@rediffmail.com